ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಯುಪಿಎಸ್‌ಸಿ ಮುಖ್ಯ ಪರೀಕ್ಷೆಯ ಪೇಪರ್ ಎ ಮತ್ತು ಬಿ ಪತ್ರಿಕೆಗಳು ಅಭ್ಯರ್ಥಿಗಳ ಭಾಷಾ ಪ್ರೌಢಿಮೆ ಪರೀಕ್ಷಿಸಲಿವೆ. ಈ ಹಿನ್ನೆಲೆಯಲ್ಲಿ ಪತ್ರಿಕೆಗಳ ಸ್ವರೂಪವನ್ನು ಇಲ್ಲಿ ಪರಿಚಯಿಸಲಾಗಿದೆ.



ಆಳ-ಅಗಲ
ಸಿರಿ ಕನ್ನಡ: ಎರಡು ಪಠ್ಯ ಪುಸ್ತಕಗಳ ವ್ಯತ್ಯಾಸ

ಶಿಗ್ಗಾವಿ: ಮುಖ್ಯಮಂತ್ರಿ ಕಚೇರಿ ಮುಂದೆ ರೈತರ ಪ್ರತಿಭಟನೆ 4A
ಕಾಂಗ್ರೆಸ್ ತೊರೆದ ಹಾರ್ದಿಕ್ ಪಟೇಲ್ 10

ಸೆನ್ಸೆಕ್ಸ್	ನಿಫ್ಟಿ	₹/$
54,208 ▼	16,240 ▼	77.61 ▼

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ಪುಸ್ತಕದಿಂದ ಪೆರಿಯಾರ್ ಪರಿಚಯ ಎತ್ತಂಗಡಿ

ನಾರಾಯಣಗುರು ಪಾಠಕ್ಕೂ ಕತ್ತರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ ಹೆಡಗೇವಾರ ಅವರ ಭಾಷಣ ಸೇರಿಸಿದ ಬಗ್ಗೆ ಭಾರಿ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ, ಅದೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಿಂದ ಬ್ರಹ್ಮಶ್ರೀ ನಾರಾಯಣಗುರು ಮತ್ತು ವಿಚಾರವಾದಿ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಕುರಿತ ಪಠ್ಯಭಾಗ ತೆಗೆಯಲು ಶಿಫಾರಸು ಮಾಡಿರುವುದು ಆಕ್ಷೇಪಕ್ಕೆ ಕಾರಣವಾಗಿದೆ.

ಹಿಂದಿನ ವರ್ಷದ ಪಠ್ಯಪುಸ್ತಕದಲ್ಲಿ 'ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು' ಅಧ್ಯಾಯದಲ್ಲಿ ನಾರಾಯಣಗುರು ಮತ್ತು ಪೆರಿಯಾರ್ ಅವರ ಜೀವನ ಮತ್ತು ದರ್ಶನ ಪರಿಚಯಿಸುವ ಭಾಗವಿತ್ತು. ಈ ಬಾರಿ ಅದಕ್ಕೆ ಕತ್ತರಿ ಹಾಕಲು ಮುಂದಾಗಿದೆ.

ಕಳೆದ ವರ್ಷದ ಪಠ್ಯಪುಸ್ತಕದಲ್ಲಿ ರಾಜಾರಾಮ್ ಮೋಹನ್‌ರಾಯ್, ದಯಾನಂದ ಸರಸ್ವತಿ, ಮಹದೇವ ಗೋವಿಂದ ರಾನಡೆ, ಜ್ಯೋತಿಬಾ ಫುಲೆ, ಸ್ವಾಮಿ ವಿವೇಕಾನಂದ, ಅನಿಬೆಸೆಂಟ್, ಸರ್ ಸಯ್ಯದ್ ಅಹಮದ್, ಪೆರಿಯಾರ್ ಮತ್ತು ನಾರಾಯಣಗುರು ಕುರಿತ ಮಾಹಿತಿ ಇತ್ತು. ಪರಿಷ್ಕೃತ ಪಠ್ಯಪುಸ್ತಕದಲ್ಲಿ ರಾಜಾರಾಮ್ ಮೋಹನ್‌ರಾಯ್, ದಯಾನಂದ ಸರಸ್ವತಿ, ಮಹದೇವ ಗೋವಿಂದ ರಾನಡೆ, ಜ್ಯೋತಿಬಾ ಫುಲೆ, ಸ್ವಾಮಿ ವಿವೇಕಾನಂದ, ಅನಿಬೆಸೆಂಟ್, ಸರ್ ಸಯ್ಯದ್ ಅಹಮದ್ ಅವರ ಪರಿಚಯ ಇದೆ. 'ಶ್ರೀ ನಾರಾಯಣಗುರು ಧರ್ಮಪರಿಪಾಲನಾ ಯೋಗಂ' ಮತ್ತು 'ಪೆರಿಯಾರ್' ಎಂಬ ಪಠ್ಯವನ್ನು ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯ ಪರಿಷ್ಕರಣೆ ಸಮಿತಿಯ ಶಿಫಾರಸಿನಂತೆ ಕೈಬಿಡಲಾಗುತ್ತಿದೆ ಎಂದು ಗೊತ್ತಾಗಿದೆ.

ಪೆರಿಯಾರ್ ಪಠ್ಯದಲ್ಲೇನಿತ್ತು?: '20ನೇ ಶತಮಾನದ ಆರಂಭದಲ್ಲಿ ಬ್ರಾಹ್ಮಣೇತರ ಚಳವಳಿಯೆಂಬ ಹೊಸ ಬಗೆಯ ಚಳವಳಿ ದಕ್ಷಿಣ ಭಾರತದಲ್ಲಿ ಆರಂಭವಾಯಿತು. ಬಹುಸಂಖ್ಯಾತರಾಗಿದ್ದ ಬ್ರಾಹ್ಮಣೇತರರು ಸರ್ಕಾರಿ ರಂಗದಲ್ಲಿ ಅವಕಾಶಗಳಲ್ಲಿ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ತಮಗೆ ಪ್ರಾತಿನಿಧ್ಯ ಸಿಗಬೇಕೆಂದು ಹೋರಾಟ ಆರಂಭಿಸಿದರು. ಕರ್ನಾಟಕವೂ ಸೇರಿ ವಿವಿಧ ರಾಜ್ಯಗಳಲ್ಲಿ ಇದೊಂದು ಪ್ರಮುಖ ಚಳವಳಿಯಾಗಿ ಬ್ರಾಹ್ಮಣೇತರ ಸಮುದಾಯಗಳು ತಮ್ಮ ಮೇಲೆ ಹೇರಲಾಗಿದ್ದ ಸಾಮಾಜಿಕ ನಿರ್ಬಂಧಗಳನ್ನು ವಿರೋಧಿಸತೊಡಗಿದರು. 1916ರಲ್ಲಿ ಜಸ್ಟೀಸ್ ಪಾರ್ಟಿ ಈ ಚಳವಳಿಯನ್ನು ಮುನ್ನಡೆಸಿತು'.

ಆರ್ಯ, ಬ್ರಾಹ್ಮಣ ಎನ್ನುವ ಜನಾಂಗೀಯ ಶ್ರೇಷ್ಠತೆಯನ್ನು ಸಾರುವ ಆಲೋಚನೆಗಳನ್ನು ಇಡಿಯಾಗಿ ತಿರಸ್ಕರಿಸಿದರು. ತಮಿಳುಭಾಷೆಯನ್ನು ದ್ರಾವಿಡ ಭಾಷೆ ಎಂದರು. ಸಂಸ್ಕೃತ ಭಾಷೆ ಮತ್ತು ಸಾಹಿತ್ಯವನ್ನು ವಿರೋಧಿಸಿದರು. ರಾಮಾಯಣ ಮಹಾಕಾವ್ಯದಲ್ಲಿ ಬರುವ ರಾವಣನನ್ನು ದ್ರಾವಿಡರ ನಾಯಕನೆಂದು ಬಿಂಬಿಸಿ ರಾಮನನ್ನು ವೈದಿಕ ವರ್ಗದ ದೇವರೆಂದು ತಿರಸ್ಕರಿಸಿದರು. ಬನಾರಸ್‌ನಲ್ಲಿ ಆದ ಕಹಿ ಅನುಭವಗಳಿಂದ ಮತ್ತಷ್ಟು ವ್ಯಗ್ರರಾದ ಪೆರಿಯಾರ್ ಅವರು ರಾವಣ ಪರಂಪರೆಯನ್ನು ವೈಭವೀಕರಿಸಿದರು. 1924ರಲ್ಲಿ ಕೇರಳದ ವೈಕಂನಲ್ಲಿ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶದ ಹಕ್ಕಿನ ಹೋರಾಟದಲ್ಲಿ ಭಾಗವಹಿಸಿದ್ದರು.

ನಾರಾಯಣಗುರು ಪಠ್ಯದಲ್ಲೇನಿತ್ತು?: ಕೇರಳದ ಸಮಾಜದಲ್ಲೂ ಜಾತಿಗಳ ಮಧ್ಯೆ ಅಂತರಗಳ ಸಮಸ್ಯೆಗಳು ವ್ಯಾಪಕವಾಗಿದ್ದವು, ಅನೇಕ ಹಿಂದುಳಿದ ಮತ್ತು ದಲಿತ ಸಮುದಾಯಗಳಿಗೆ ಸಾಮಾಜಿಕ ನಿರ್ಬಂಧಗಳನ್ನು ಹೇರಲಾಗಿತ್ತು. ಆ ಕಾಲಘಟ್ಟದಲ್ಲಿ ಆ ಸಮುದಾಯಗಳು ಎಲ್ಲರೂ ಬಳಸಲು ಇದ್ದ ಕೆರೆ ಬಾವಿಗಳಲ್ಲಿ ನೀರನ್ನು ತೆಗೆದುಕೊಳ್ಳಲಾಗುತ್ತಿರಲಿಲ್ಲ. ಮಹಿಳೆಯರ ಉಡುಪುಗಳ ಮೇಲೂ ನಿರ್ಬಂಧಗಳನ್ನು ಹೇರಲಾಗಿತ್ತು.

4Aನೇ ಪುಟ ನೋಡಿ

ಕರಾವಳಿಯಲ್ಲಿ ಬಿಲ್ಲವ ಸಮುದಾಯದ ಆಕ್ಷೇಪ

ಮಂಗಳೂರು: ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ಪಠ್ಯಪುಸ್ತಕದಿಂದ ಬ್ರಹ್ಮಶ್ರೀ ನಾರಾಯಣಗುರುಗಳ ಕುರಿತಾದ ಪಾಠವನ್ನು ಕೈಬಿಟ್ಟಿರುವುದಕ್ಕೆ ಕರಾವಳಿಯ ಬಿಲ್ಲವ ಸಮುದಾಯ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ನಾರಾಯಣ ಗುರು

'ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ' ಎಂಬ ಪಾಠವನ್ನು ಕೈಬಿಟ್ಟಿರುವುದು ಸರಿಯಲ್ಲ. ಇದು ನಾರಾಯಣಗುರುಗಳ ಅನುಯಾಯಿಗಳ ಭಾವನೆಗಳಿಗೆ ನೋವುಂಟು ಮಾಡಿದೆ ಎಂದು ಬಿಲ್ಲವ ಮುಖಂಡರು ಹೇಳಿದ್ದಾರೆ.

'ದೇಶದಲ್ಲಿ ದ್ವೇಷ, ಅಸಹನೆ, ಸಾಮಾಜಿಕ ಅಸಮಾನತೆ ಮೊದಲಾದ ಸಮಸ್ಯೆ ಎದುರಾಗಿದ್ದು, ಈ ಸಂದರ್ಭದಲ್ಲಿ ಜಾತಿ ಭೇದ, ಮತ ದ್ವೇಷ ಇಲ್ಲದೆ ಸಮಾನತೆಯ ಮಾನವ ಧರ್ಮವನ್ನು ಜಗತ್ತಿಗೆ ಬೋಧಿಸಿ, ಕೇರಳದಲ್ಲಿ ಅದನ್ನು ಕಾರ್ಯಗತಗೊಳಿಸಿದ ಮಹಾನ್ ದಾರ್ಶನಿಕ ನಾರಾಯಣಗುರುಗಳ ತತ್ವಗಳ ಅನುಷ್ಠಾನ ಇಂದಿನ ತುರ್ತು ಅಗತ್ಯ. ಸರ್ಕಾರ ಈ ಕುರಿತು ಚಿಂತನೆ ನಡೆಸಬೇಕು' ಎಂದು ಬಿಲ್ಲವ ಸಮುದಾಯದ ರಾಜೇಂದ್ರ ಚಿಲಿಂಬಿ ಹೇಳಿದ್ದಾರೆ.

'ನಾರಾಯಣಗುರುಗಳು ಮತ್ತು ಪೆರಿಯಾರ್ ಅವರ ಕುರಿತಾದ ಪಾಠಭಾಗವನ್ನು ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಕೈಬಿಟ್ಟಿರುವುದು ಖಂಡನೀಯ. ಸಮಾಜ ಸುಧಾರಕ ಸಂತರು ಎನಿಸಿಕೊಂಡ ಇವರಿಬ್ಬರ ಸಂದೇಶಗಳನ್ನು ನಿರ್ಲಕ್ಷಿಸಿರುವುದು ಜಾತಿ, ಧರ್ಮಗಳ ಕಲಹದ ಬೇಗೆಯಲ್ಲಿ ರಾಜಕೀಯದ ಬೇಳೆ ಬೇಯಿಸಿಕೊಳ್ಳುವ ಪಕ್ಷಗಳ ದುರುದ್ದೇಶಪೂರಿತ ನಡೆ' ಎಂದು ಕುದ್ರೋಳಿ ಗೋಕರ್ಣನಾಥ ಕ್ಷೇತ್ರದ ಕೋಶಾಧಿಕಾರಿ ಆರ್. ಪದ್ಮರಾಜ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಪಠ್ಯಪುಸ್ತಕ ಬಂದ ಮೇಲೆ ನೋಡಿ'

'ಪೆರಿಯಾರ್ ಅಥವಾ ನಾರಾಯಣ ಗುರು ಅವರ ಪಠ್ಯಭಾಗವನ್ನು ಕೈಬಿಟ್ಟಿಲ್ಲ. ಈ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ಪಠ್ಯಪುಸ್ತಕ ಮುದ್ರಣ ಆಗಿ ಬಂದ ಮೇಲೆ ನೋಡಿ ಹೇಳಿ. ಆಗ ಇಲ್ಲದಿದ್ದಾಗ ಕೇಳಿ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ.

'ಈ ರೀತಿ ಅಪಪ್ರಚಾರ ಮಾಡುತ್ತಿರುವುದು ಸರಿಯಲ್ಲ. ಇದು ಶಿಕ್ಷಣದಲ್ಲಿ ರಾಜಕೀಯಕರಣ ಮಾಡುವುದರ ಭಾಗವಾಗಿದೆ. ಪಠ್ಯಪುಸ್ತಕದ್ದು ಎನ್ನಲಾದ ಈಗ ಹರಿದಾಡುತ್ತಿರುವ ಪಿಡಿಎಫ್ ಅಧಿಕೃತವಲ್ಲ. ಈ ರೀತಿ ಹತ್ತು ಜನ ಹತ್ತು ರೀತಿಯಲ್ಲಿ ಹರಿಬಿಡಬಹುದು. ಅದನ್ನು ಹೇಗೆ ನಂಬುತ್ತೀರಿ. ಮುದ್ರಿತ ಪಠ್ಯ ಪುಸ್ತಕ ಮಾತ್ರ ಅಧಿಕೃತ' ಎಂದು ಅವರು ಪ್ರತಿಕ್ರಿಯಿಸಿದರು.

ಹಾಸನ ಜಿಲ್ಲೆಯ ಹಿರೀಸಾವೆ ದೊಡ್ಡ ಕೆರೆಯಲ್ಲಿ ಬುಧವಾರ ಕೋಡಿ ಬಿದ್ದಾಗ ಮಕ್ಕಳೊಂದಿಗೆ ಗ್ರಾಮಸ್ಥರು ನೀರಿನಲ್ಲಿ ಆಟವಾಡಿ, ಸಂಭ್ರಮಿಸಿದರು.

ಮೈದುಂಬಿದ ನದಿಗಳು, ಕೆಆರ್‌ಎಸ್‌ನಲ್ಲಿ ಹೆಚ್ಚಿದ ಒಳಹರಿವು

ವಿವಿಧೆಡೆ ಮಳೆ: ತುಂಬಿದ ಕೆರೆ ಕಟ್ಟೆ

ಬೆಂಗಳೂರು: ರಾಜ್ಯದಾದ್ಯಂತ ಮಂಗಳವಾರ ರಾತ್ರಿಯಿಂದ ಧಾರಾಕಾರವಾಗಿ ಮಳೆ ಸುರಿದಿದ್ದು, ಬುಧವಾರ ಹಲವೆಡೆ ಕೆರೆ, ಕಟ್ಟೆಗಳು ತುಂಬಿ ಕೋಡಿ ಹರಿದಿವೆ. ಕಾವೇರಿ, ಶಿಂಷಾ, ಕಬಿನಿ, ಅರ್ಕಾವತಿ, ಉತ್ತರ ಪಿನಾಕಿನಿ ಸೇರಿದಂತೆ ಹಲವು ನದಿಗಳಲ್ಲಿ ನೀರಿನಮಟ್ಟ ಏರಿಕೆಯಾಗಿದ್ದು, ಜಲಾಶಯಗಳಿಗೆ ಒಳಹರಿವು ಹೆಚ್ಚಾಗಿದೆ.

ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಕೆಆರ್‌ಎಸ್ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣವೂ ಹೆಚ್ಚಾಗಿದೆ. ಬುಧವಾರ ಸಂಜೆ ವೇಳೆಗೆ ಕೆಆರ್‌ಎಸ್ ಜಲಾಶಯದ ನೀರಿನಮಟ್ಟ 100.95 ಅಡಿ ದಾಖಲಾಗಿತ್ತು. 5,396 ಕ್ಯುಸೆಕ್ ಒಳಹರಿವು, 1,065 ಕ್ಯುಸೆಕ್ ಹೊರ ಹರಿವು ಇತ್ತು. ಕಳೆದ ವರ್ಷ ಇದೇ ವೇಳೆಗೆ 86.80 ಅಡಿ ನೀರು ಸಂಗ್ರಹವಾಗಿತ್ತು.

ಮೈದುಂಬಿದ ಉತ್ತರ ಪಿನಾಕಿನಿ: ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಉತ್ತರ ಪಿನಾಕಿನಿ ನದಿಯು ತುಂಬಿ ಹರಿಯುತ್ತಿದೆ. ಈ ಹಿಂದೆ ಬರಡಾಗಿದ್ದ ಉತ್ತರ ಪಿನಾಕಿನಿಯ ಒಡಲು ಕಳೆದ ವರ್ಷದಿಂದ ತುಂಬುತ್ತಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಬಾರಿ ನದಿಯು ಪೂರ್ವ ಮುಂಗಾರು ಹಂಗಾಮಿನಲ್ಲಿಯೇ ಮೈದುಂಬಿದೆ.

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯ ಭರ್ತಿಯಾಗುವ ಹಂತ ತಲುಪಿದ್ದು, ಬುಧವಾರ ಮಧ್ಯಾಹ್ನ ಡ್ಯಾಂನಿಂದ ಅರ್ಕಾವತಿ ನದಿಗೆ ನೀರು ಬಿಡುಗಡೆ ಮಾಡಲಾಯಿತು.

ಜಲಾಶಯದಲ್ಲಿ ನೀರು ಸಂಗ್ರಹಣಾ ಸಾಮರ್ಥ್ಯ 1.22 ಟಿಎಂಸಿ ಅಡಿ.

ತುಂಬಿ ಹರಿದ ಕೆರೆಗಳು: ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಹೊನ್ನಾವರದ ಹಿರಿಕೆರೆ, ಕಲ್ಕೆರೆ, ಹುಲಿಕೆರೆ, ಚನ್ನಾಪುರ ಕೆರೆ. ಬಿಂಡಿಗನವಿಲೆ ಕೆರೆಗಳು ತುಂಬಿ ಹರಿದಿವೆ. ದುಮ್ಮಸಂದ್ರ ಅಣೆಕಟ್ಟೆ ಮೇಲೆ ನೀರು ಹರಿಯುತ್ತಿದೆ. ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ತೋವಿನಕೆರೆ ಸಮೀಪ ನಾಲ್ಕು ಕೆರೆಗಳು ಭರ್ತಿಯಾಗಿವೆ.

ಮಳೆ: ನಾಲ್ವರ ಸಾವು

ಭಾರೀ ಮಳೆ ಪರಿಣಾಮ ಬೆಂಗಳೂರಿನಲ್ಲಿ ಇಬ್ಬರು ಸೇರಿದಂತೆ ರಾಜ್ಯದಲ್ಲಿ ನಾಲ್ವರು ಅಸುನೀಗಿದ್ದಾರೆ. ಬೆಂಗಳೂರಿನ ಉಲ್ಲಾಳ ಉಪಕಾರ್ ಲೇಔಟ್ ಬಸ್‌ನಿಲ್ದಾಣದ ಬಳಿ ನಡೆಯುತ್ತಿದ್ದ 5ನೇ ಹಂತದ ಕಾವೇರಿ ನೀರು ಸರಬರಾಜು ಕಾಮಗಾರಿಯಲ್ಲಿ ಕಬ್ಬಿಣದ ಪೈಪ್‌ನಲ್ಲಿ ಸಿಲುಕಿ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ. ಬಿಹಾರದ ದೇವ್‌ಭರತ್ ಕುಶ್ವಾಹ (36) ಹಾಗೂ ಉತ್ತರಪ್ರದೇಶದ ಅಂಕಿತ್‌ಕುಮಾರ್ ಸಹಾನಿ (23) ಮೃತಪಟ್ಟವರು.

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿ ರಂಗೇನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆ ಗೋಡೆ ಕುಸಿದು ಚನ್ನರಾಯಪಟ್ಟಣ ತಾಲ್ಲೂಕಿನ ದಿಡಗ ಹೊಸೂರು ಗ್ರಾಮದ ಶಿವಕುಮಾರ (26) ಕೊನೆಯುಸಿರೆಳೆದಿದ್ದಾರೆ. ದೊಡ್ಡಬಳ್ಳಾಪುರದಲ್ಲಿ ಭಾರೀ ಮಳೆ ಪರಿಣಾಮ ನಗರದ ಕೋಳಿ ಮಾಂಸ ಮಾರಾಟದ ಅಂಗಡಿಯಲ್ಲಿ ವಿದ್ಯುತ್ ಪ್ರವಹಿಸಿ ಗೌರಿಬಿದನೂರು ತಾಲ್ಲೂಕಿನ ಮರಳೂರು ಗ್ರಾಮದ ಶ್ರೀರಾಮು (33) ಅವರು ಅಸುನೀಗಿದ್ದಾರೆ.

ಮಳೆ: ಎಲ್ಲಿ, ಎಷ್ಟು (ಸೆಂ.ಮೀ)	
ಗಂಧನಹಳ್ಳಿ (ಮೈಸೂರು)	23
ಹೊಳೆನರಸೀಪುರ (ಹಾಸನ)	17
ಮಾಯಸಂದ್ರ (ತುಮಕೂರು)	12
ಬೆಂಗಳೂರು	11.4
ಹಿರಿಸಾವೆ (ಹಾಸನ)	10

ಇನ್ನಷ್ಟು ಸುದ್ದಿಗಳು 4A,5A,5B

ಇಂದು ಎಸ್ಸೆಸ್ಸೆಲ್ಸಿ ಫಲಿತಾಂಶ

ಬೆಂಗಳೂರು: 2021–22ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಗುರುವಾರ ಮಧ್ಯಾಹ್ನ 12.30ಕ್ಕೆ ಪ್ರಕಟವಾಗಲಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಮಲ್ಲೇಶ್ವರದಲ್ಲಿರುವ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಚೇರಿಯಲ್ಲಿ ಫಲಿತಾಂಶ ಪ್ರಕಟಿಸಲಿದ್ದಾರೆ.

ಮಧ್ಯಾಹ್ನ 1 ಗಂಟೆ ನಂತರ https://karresults.nic.in/ ಮತ್ತು www.kseeb.kar.nic.in ಫಲಿತಾಂಶ ಪ್ರಕಟವಾಗಲಿದೆ. ಮಧ್ಯಾಹ್ನದ ನಂತರ ಆಯಾ ಶಾಲೆಗಳಲ್ಲೂ ಫಲಿತಾಂಶ ಪ್ರಕಟವಾಗಲಿದೆ.

ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿರುವ ಫೋನ್ ನಂಬರ್‌ಗಳಿಗೆ ಎಸ್‌ಎಂಎಸ್ ಮೂಲಕವೂ ಫಲಿತಾಂಶ ಕಳುಹಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಈ ವರ್ಷ ಮಾರ್ಚ್ 28 ರಿಂದ ಏಪ್ರಿಲ್ 11ರವರೆಗೆ ನಡೆದ ಪರೀಕ್ಷೆಗೆ ರಾಜ್ಯದಾದ್ಯಂತ 8.73 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದರು.

ರಾಜೀವ್ ಗಾಂಧಿ ಹತ್ಯೆ ಅಪರಾಧಿ ಬಿಡುಗಡೆ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಹತ್ಯೆ ಪ್ರಕರಣದ ಅಪರಾಧಿ ಎ.ಜಿ.ಪೇರರಿವಾಳನ್ ಅವರನ್ನು ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಬುಧವಾರ ಬಿಡುಗಡೆ ಮಾಡಲಾಗಿದೆ.

ಸಂವಿಧಾನದ 142ನೇ ವಿಧಿಯ ಅಡಿಯಲ್ಲಿ ಸುಪ್ರೀಂಕೋರ್ಟ್‌ಗೆ ನೀಡಲಾಗಿರುವ ಪರಮಾಧಿಕಾರವನ್ನು ಚಲಾಯಿಸಿ ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಬಿ.ಆರ್. ಗವಾಯಿ ಅವರನ್ನೊಳಗೊಂಡ ನ್ಯಾಯಪೀಠವು ಪೇರರಿವಾಳನ್ ಅವರನ್ನು ಬಿಡುಗಡೆ ಮಾಡಲು ಆದೇಶ ನೀಡಿದೆ.

ಸಂವಿಧಾನದ 161ನೇ ವಿಧಿಯಡಿ ಪೇರರಿವಾಳನ್ ದೋಷಮುಕ್ತಿಗೆ ತೀರ್ಮಾನ ಕೈಗೊಳ್ಳಲು ತಮಿಳುನಾಡು ರಾಜ್ಯಪಾಲರು ಬಹಳಷ್ಟು ವಿಳಂಬ ಮಾಡಿದ ಹಿನ್ನೆಲೆಯಲ್ಲಿ ನ್ಯಾಯಪೀಠವು 142ನೇ ವಿಧಿಯಡಿ ಅಧಿಕಾರ ಚಲಾಯಿಸಿ ಬಿಡುಗಡೆಗೆ ಆದೇಶಿಸಿದೆ. ಜಾಮೀನು ಪ್ರಕಟಿಸುವ ಸಮಯದಲ್ಲಿ ನ್ಯಾಯಪೀಠವು, 'ಅಪರಾಧಿಯು 30 ವರ್ಷಕ್ಕೂ ಹೆಚ್ಚು ಕಾಲ ಜೈಲುವಾಸ ಶಿಕ್ಷೆ ಅನುಭವಿಸಿದ್ದು, ಅವರ ನಡವಳಿಕೆಯು ತೃಪ್ತಿದಾಯಕವಾಗಿದೆ' ಎಂದೂ ಹೇಳಿದೆ.

ರಾಜೀವ್ ಗಾಂಧಿ ಹತ್ಯೆ ಪ್ರಕರಣದ 7 ಮಂದಿ ಅಪರಾಧಿಗಳಲ್ಲಿ ಪೇರರಿವಾಳನ್ ಒಬ್ಬರಾಗಿದ್ದು, ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾರೆ.

'ಪ್ರಕರಣದ ಎಲ್ಲ 7 ಅಪರಾಧಿಗಳನ್ನು ಅವಧಿಗೆ ಮುನ್ನ ಬಿಡುಗಡೆ ಮಾಡುವಂತೆ ಶಿಫಾರಸು ಮಾಡಿರುವ ತಮಿಳುನಾಡು ರಾಜ್ಯ ಸಚಿವ ಸಂಪುಟದ ಸಲಹೆಯು ರಾಜ್ಯಪಾಲರಿಗೆ ಬದ್ಧವಾಗಿದೆ' ಎಂದು ಹೇಳಿದ ನ್ಯಾಯಪೀಠವು, 'ಐಪಿಸಿ ಸೆಕ್ಷನ್ 302ರ ಅಡಿಯಲ್ಲಿರುವ ಪ್ರಕರಣದಲ್ಲಿ ಕ್ಷಮಾದಾನ ನೀಡಲು ರಾಷ್ಟ್ರಪತಿಗಳಿಗೆ ಮಾತ್ರ ಅಧಿಕಾರವಿದೆ' ಎಂಬ ಕೇಂದ್ರ ಸರ್ಕಾರದ ವಾದವನ್ನು ತಳ್ಳಿಹಾಕಿತು.

ತಾಯಿಯ ದಶಕಗಳ ಹೋರಾಟ

ಚೆನ್ನೈ: 'ನಾನು ಮುಗ್ಧ ಹುಡುಗನ ತಾಯಿ, 28 ವರ್ಷಗಳ ಹಿಂದೆ ನನ್ನ ಮಗನನ್ನು ನನ್ನಿಂದ ದೂರ ಮಾಡಲಾಗಿತ್ತು. ಆಗ ಅವನಿಗೆ ಕೇವಲ 19 ವರ್ಷ. ಆ ದಿನದಿಂದ ನಾನು ಅವನ ಹಿಂದೆ ಓಡಲು ಆರಂಭಿಸಿದೆ, ಈಗಲೂ ಓಡುತ್ತಿದ್ದೇನೆ' ಎಂದು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಅಪರಾಧಿ ಎ.ಜಿ ಪೇರರಿವಾಳನ್ ಅವರ ತಾಯಿ ಅರ್ಪುತಮ್ಮ ಅಮ್ಮಾಳ್ ಅವರು ತಮ್ಮ ಟ್ವಿಟರ್ ಪ್ರೊಫೈಲ್‌ನಲ್ಲಿ ಬರೆದುಕೊಂಡಿದ್ದಾರೆ.

ಮಗನ ಬಿಡುಗಡೆಗಾಗಿ ಅರ್ಪುತಮ್ಮ ಅಮ್ಮಾಲ್ ಅವರು 31 ವರ್ಷಗಳ ಕಾಲ ಪಟ್ಟುಬಿಡದೇ ಹೋರಾಟ ನಡೆಸಿದ್ದಾರೆ. ರಾಜೀವ್ ಗಾಂಧಿ ಹತ್ಯೆ ಪ್ರಕರಣದಡಿ ಎ.ಜಿ ಪೇರರಿವಾಳನ್ ಅವರನ್ನು 1991ರ ಜೂನ್ 19ರಂದು ಬಂಧಿಸಲಾಗಿತ್ತು.

ಬಿಡುಗಡೆಯ ಬಳಿಕ ಪೇರರಿವಾಳನ್ ಅವರು ತಮ್ಮ ತಾಯಿ ಅರ್ಪುತಮ್ ಅಮ್ಮಾಳ್ ಅವರಿಗೆ ಸಿಹಿ ತಿನಿಸಿದರು –ಪಿಟಿಐ ಚಿತ್ರ

> ಸುಪ್ರೀಂ ಕೋರ್ಟ್‌ನಿಂದ ಪೇರರಿವಾಳನ್ ಅವರ ಬಿಡುಗಡೆಯು ರಾಜ್ಯದ ಸ್ವಾಯತ್ತತೆ ಮತ್ತು ಒಕ್ಕೂಟ ವ್ಯವಸ್ಥೆಗೆ ಸಿಕ್ಕ ಗೆಲುವು
> **ಎಂ.ಕೆ ಸ್ಟಾಲಿನ್,** ತಮಿಳುನಾಡು ಮುಖ್ಯಮಂತ್ರಿ

ಬಿಡುಗಡೆಗೆ ಕಾಂಗ್ರೆಸ್ ಬೇಸರ

ನವದೆಹಲಿ (ಪಿಟಿಐ): ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಅಪರಾಧಿ ಎ.ಜಿ. ಪೇರರಿವಾಳನ್ ಬಿಡುಗಡೆಗೆ ತೀವ್ರ ಬೇಸರ ವ್ಯಕ್ತಪಡಿಸಿರುವ ಕಾಂಗ್ರೆಸ್, ಮಾಜಿ ಪ್ರಧಾನಿಯ ಹಂತಕನನ್ನು 'ಕ್ಷುಲ್ಲಕ ಮತ್ತು ಅಗ್ಗದ ರಾಜಕೀಯ'ಕ್ಕಾಗಿ ಬಿಡುಗಡೆ ಮಾಡಲಾಗಿದೆ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಈ ಬೆಳವಣಿಗೆಯು ಕಾಂಗ್ರೆಸ್‌ನ ಎಲ್ಲ ಕಾರ್ಯಕರ್ತರ ಜತೆಗೆ ದೇಶದ ಪ್ರತಿಯೊಬ್ಬ ನಾಗರಿಕರಲ್ಲಿಯೂ ದುಃಖ ಮತ್ತು ಕೋಪವನ್ನು ತರಿಸಿದೆ ಎಂದು ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ ಹೇಳಿದ್ದಾರೆ.

ಶಿಕ್ಷಣ ಮತ್ತು ಉದ್ಯೋಗ ಉತ್ತೇಜಿಸಲು 'ಯುವ ನೀತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ, ಉದ್ಯಮಶೀಲತೆ, ಆರೋಗ್ಯ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಯುವಜನರನ್ನು ಕೇಂದ್ರೀಕರಿಸಿ ಯೋಜನೆಗಳನ್ನು ರೂಪಿಸಬೇಕೆಂಬ ಶಿಫಾರಸುಗಳುಳ್ಳ 'ಕರ್ನಾಟಕ ಯುವ ನೀತಿ–2022'ರ ಕರಡನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬುಧವಾರ ಪ್ರಕಟಿಸಿದೆ.

ನೂತನ ಯುವ ನೀತಿಯನ್ನು ರೂಪಿಸುವುದಕ್ಕಾಗಿ ಮೈಸೂರಿನ ವಿ-ಲೀಡ್ ಸಂಸ್ಥಾಪಕ ಡಾ.ಆರ್. ಬಾಲಸುಬ್ರಮಣಿಯಂ ನೇತೃತ್ವದಲ್ಲಿ 2021ರ ಅಕ್ಟೋಬರ್‌ನಲ್ಲಿ 14 ಸದಸ್ಯರ ಸಮಿತಿ ರಚಿಸಲಾಗಿತ್ತು. ಸಮಿತಿಯು ವಿವಿಧ ಹಂತಗಳಲ್ಲಿ ಸಮಾಲೋಚನೆ ನಡೆಸಿ, ಸಿದ್ಧಪಡಿಸಿರುವ ಯುವ ನೀತಿಯ ಕರಡನ್ನು ಇಲಾಖೆಗೆ ಸಲ್ಲಿಸಿತ್ತು. ಅದನ್ನು 2022–2030ರ ಅವಧಿಯಲ್ಲಿ ಅನುಷ್ಠಾನಕ್ಕೆ ತರಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮುಂದಾಗಿದೆ.

ರಾಜ್ಯದ ಜನಸಂಖ್ಯೆಯಲ್ಲಿ ಯುವಜನರ ಪ್ರಮಾಣ, ದುಡಿಯುವ ಜನರಲ್ಲಿ ಅವರ ಪಾಲು, ಶಿಕ್ಷಣ ಪಡೆಯುತ್ತಿರುವ ಯುವಜನರ ಸಂಖ್ಯೆ, ಆರೋಗ್ಯದ ಸಮಸ್ಯೆಗಳು ಮತ್ತು ಪರಿಹಾರ, ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು ಮತ್ತಿತರ ಅಂಶಗಳನ್ನು ಆಧರಿಸಿ ನೂತನ ನೀತಿಯನ್ನು ರೂಪಿಸಲಾಗಿದೆ.

5Aನೇ ಪುಟ ನೋಡಿ

ಜೂಜು, ಆನ್‌ಲೈನ್ ಆಟಕ್ಕೆ ಶೇ 28 ತೆರಿಗೆ ಶಿಫಾರಸು

ನವದೆಹಲಿ (ಪಿಟಿಐ): ಕ್ಯಾಸಿನೊಗಳು, ಕುದುರೆ ರೇಸ್ ಮತ್ತು ಆನ್‌ಲೈನ್ ಆಟಗಳ ಮೇಲೆ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯ (ಜಿಎಸ್‌ಟಿ) ಅಡಿಯಲ್ಲಿ ಶೇ 28ರಷ್ಟು ತೆರಿಗೆ ವಿಧಿಸಲು ಸಚಿವರ ಸಮಿತಿಯು ಶಿಫಾರಸು ಮಾಡಿದೆ.

ಸಮಿತಿಯ ವರದಿಯನ್ನು ಜಿಎಸ್‌ಟಿ ಮಂಡಳಿಯ ಮುಂಬರುವ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ. ಕ್ಯಾಸಿನೊ, ಕುದುರೆ ರೇಸ್ ಹಾಗೂ ಆನ್‌ಲೈನ್ ಆಟಗಳ ಮೇಲೆ ಎಷ್ಟು ತೆರಿಗೆ ವಿಧಿಸಬೇಕು ಎಂಬುದನ್ನು ಪರಿಶೀಲಿಸಲು ಮೇಘಾಲಯದ ಮುಖ್ಯಮಂತ್ರಿ ಕೊನ್ರಾಡ್ ಸಂಗ್ಮಾ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ವರದಿಯನ್ನು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಶೀಘ್ರದಲ್ಲೇ ಸಲ್ಲಿಸಲಾಗುವುದು.

ಎಲ್ಲರಿಗೂ ಆದಾಯ ಖಾತರಿಗೆ ಸಲಹೆ

ನವದೆಹಲಿ (ಪಿಟಿಐ): ನಗರ ಪ್ರದೇಶಗಳ ನಿರುದ್ಯೋಗಿಗಳಿಗೆ ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸಬೇಕು, ಎಲ್ಲ ವಯಸ್ಕರಿಗೆ ಸರ್ಕಾರದ ಕಡೆಯಿಂದ ಕನಿಷ್ಠ ಆದಾಯ ಖಾತರಿ ಪಡಿಸುವ ಯೋಜನೆಯನ್ನೂ ಜಾರಿಗೊಳಿಸಬೇಕು ಎಂದು ಪ್ರಧಾನ ಮಂತ್ರಿಯವರ ಆರ್ಥಿಕ ಸಲಹಾ ಮಂಡಳಿ ಹೇಳಿದೆ.

ದೇಶದಲ್ಲಿ ಅಸಮಾನತೆ ತಗ್ಗಿಸಲು ಸಾಮಾಜಿಕ ವಲಯಗಳಿಗೆ ಹೆಚ್ಚಿನ ಅನುದಾನ ಮೀಸಲಿಡಬೇಕು ಎಂದೂ ಅದು ಸಲಹೆ ಮಾಡಿದೆ. ಮಂಡಳಿ ಸಿದ್ಧಪಡಿಸಿರುವ ವರದಿಯನ್ನು ಅದರ ಅಧ್ಯಕ್ಷ ವಿವೇಕ್ ದೇವರಾಯ್ ಬುಧವಾರ ಬಿಡುಗಡೆ ಮಾಡಿದರು.

'ನರೇಗಾ ರೀತಿಯ ಯೋಜನೆಯು ನಗರವಾಸಿಗಳಿಗೂ ಅಗತ್ಯವಿದೆ' ಎಂದು ಮಂಡಳಿ ಹೇಳಿದೆ. ಕನಿಷ್ಠ ಆದಾಯವನ್ನು ಹೆಚ್ಚಿಸುವುದರಿಂದ ಹಾಗೂ ಸರ್ಕಾರದ ವತಿಯಿಂದ ಎಲ್ಲರಿಗೂ ಕನಿಷ್ಠ ಆದಾಯವೊಂದನ್ನು ಖಾತರಿ ಪಡಿಸುವ ಯೋಜನೆ ಜಾರಿಗೆ ತರುವುದರಿಂದ ಆದಾಯದ ತಾರತಮ್ಯ ಕಡಿಮೆ ಮಾಡಬಹುದು ಎಂದು ವರದಿ ಹೇಳಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

ಶೀನಾ ಬೋರಾ ಕೊಲೆ: ಇಂದ್ರಾಣಿಗೆ ಜಾಮೀನು 10
ಏಳು ಜಿಲ್ಲೆಗಳಲ್ಲಿ 'ರೆಡ್ ಅಲರ್ಟ್' 4A
ಪಠ್ಯದಲ್ಲಿ ಹೆಡಗೇವಾರ್ ಭಾಷಣ: ಆಕ್ಷೇಪ 4B
ಒಬಿಸಿ ಮೀಸಲಾತಿಗೆ 'ಸುಪ್ರೀಂ' ಅನುಮತಿ 10

MARUTI SUZUKI AUTHORISED DEALERS: BENGALURU: VARUN MOTORS: MALLESHWARAM, HEBBAL, 78991 00200. BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA PH: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI: 95909 90011. MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. KATARIA: KANAKAPURA ROAD, PH: 78990 40000. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI PH: 8884442299. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus and corporate offer (wherever applicable) on selected models/ variants. Above mentioned savings amount is the value of maximum savings on selected models. Terms and conditions apply. For more details, please contact your nearest ARENA dealership. **Features and accessories shown may not be part of standard fitment. ##As certified by Test Agency Under Rule of 115 (G) of CMVR 1989. ^^1.0L VXI AGS petrol variants. Black Glass Shade on the vehicle is due to the lighting effect. Images used are for illustration purposes only. Car color may vary due to printing on paper. Offers vary across variants. Maruti Suzuki India Limited reserves the right to discontinue offers without notice. Above offers are valid till 31st May, 2022.

ಸಂಕ್ಷಿಪ್ತ ಸುದ್ದಿ

ನಾಳೆಯಿಂದ ಹಾಪ್‌ಕಾಮ್ಸ್ ಮಾವು ಮೇಳ

ಬೆಂಗಳೂರು: ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘದ (ಹಾಪ್‌ಕಾಮ್ಸ್) ವತಿಯಿಂದ ಮೇ 20ರಿಂದ ಜೂನ್ 5ರವರೆಗೆ ವಿಶೇಷ ಮಾವು ಮಾರಾಟ ಮೇಳವನ್ನು ನಾಗವಾರ ಜಂಕ್ಷನ್ ಬಳಿಯ ಎಲಿಮೆಂಟ್ಸ್ ಮಾಲ್‌ನಲ್ಲಿ ಆಯೋಜಿಸಲಾಗಿದೆ.

ಬಾದಾಮಿ, ರಸಪುರಿ, ಬೈಗನ್ ಪಲ್ಲಿ, ಮಲ್ಲಿಕಾ, ಮಲಗೋವಾ, ಸಿಂಧೂರ, ಕೇಸರ್, ತೋತಾಪುರಿ ಸೇರಿದಂತೆ ವಿವಿಧ ತಳಿಗಳ ಮಾವು ಖರೀದಿಗೆ ಲಭ್ಯ. ಉಪ್ಪಿನಕಾಯಿ ತಯಾರಿಗೆ ಉಪಯೋಗಿಸುವ ವಿವಿಧ ಮಾವಿನಕಾಯಿ ಮೇಳದಲ್ಲಿ ಇರಲಿದೆ.

ಮಾವು ಬೆಳೆಗೆ ಸಂಬಂಧಿಸಿದ ಬೇಸಾಯ ಪದ್ಧತಿ, ಕಸಿ ಕಟ್ಟುವಿಕೆ, ಮಾವು ಮಾಗಿಸುವುದು, ವಿವಿಧ ಸಂಸ್ಕರಣಾ ಪದಾರ್ಥಗಳ ತಯಾರಿ ಕುರಿತು ಮೇಳದಲ್ಲಿ ತಜ್ಞರು ಮಾಹಿತಿ ನೀಡಲಿದ್ದಾರೆ. 20ರಂದು ಮಧ್ಯಾಹ್ನ 12 ಗಂಟೆಗೆ ಹಾಪ್‌ಕಾಮ್ಸ್ ಅಧ್ಯಕ್ಷ ಎನ್.ದೇವರಾಜ್ ಮೇಳ ಉದ್ಘಾಟಿಸಲಿದ್ದಾರೆ. ಎಲಿಮೆಂಟ್ಸ್ ಮಾಲ್‌ನ ಘಟಕದ ಮುಖ್ಯಸ್ಥ ಉದಯ ನರೇಶ್, ಮಾರಾಟ ವಿಭಾಗದ ವಿವೇಕ್ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಭಕ್ತಿಗೀತೆ ಗಾಯನ ಸ್ಪರ್ಧೆ

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನವು ಎನ್.ಆರ್.ಕಾಲೊನಿಯ ಎಂ.ವಿ.ಸೀ ಸಭಾಂಗಣದಲ್ಲಿ ಜೂನ್ 26ರಂದು ಬೆಳಿಗ್ಗೆ 10.30ಕ್ಕೆ ಭಕ್ತಿಗೀತೆ ಗಾಯನ ಸ್ಪರ್ಧೆ ಏರ್ಪಡಿಸಿದೆ.

13ರಿಂದ 18 ವರ್ಷದೊಳಗಿನವರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ವಿಜೇತರಿಗೆ ಬಹುಮಾನ ಹಾಗೂ ಪ್ರಶಸ್ತಿಪತ್ರಗಳನ್ನು ನೀಡಲಾಗುವುದು. ಆಸಕ್ತರು ಜೂನ್ 20ರೊಳಗೆ ತಮ್ಮ ಹೆಸರು ನೋಂದಣಿ ಮಾಡಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.
ಸಂಪರ್ಕ: 9972812127

ಪುಸ್ತಕ ಬಹುಮಾನಕ್ಕೆ ಕೃತಿಗಳ ಆಹ್ವಾನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು 2021ನೇ ಸಾಲಿನ ಪುಸ್ತಕ ಬಹುಮಾನಕ್ಕೆ ವಿವಿಧ ಪ್ರಕಾರಗಳ ಕೃತಿಗಳನ್ನು ಆಹ್ವಾನಿಸಿದೆ.

ಕಾವ್ಯ (ವಚನಗಳು ಮತ್ತು ಹನಿಗವನಗಳು), ಕಾದಂಬರಿ, ಸಣ್ಣಕತೆ, ನಾಟಕ, ಲಲಿತ ಪ್ರಬಂಧ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕತೆ, ಸಾಹಿತ್ಯ ವಿಮರ್ಶೆ, ಗ್ರಂಥ ಸಂಪಾದನೆ (ಪ್ರಾಚೀನ ಕೃತಿಗಳ ಸಂಪಾದನೆ), ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಮಾನವಿಕ ವಿಷಯಗಳು, ಸಂಶೋಧನೆ, ಅನುವಾದ, ಸಂಕೀರ್ಣ ಸೇರಿದಂತೆ 22 ವಿಭಾಗಗಳಲ್ಲಿ ಕೃತಿಗಳನ್ನು ಆಹ್ವಾನಿಸಿದ್ದು, ಪ್ರತಿ ಪ್ರಕಾರದಲ್ಲಿ ವಿಮರ್ಶಕರು ಆಯ್ಕೆ ಮಾಡಿದ ಒಂದು ಕೃತಿಗೆ ಪ್ರಶಸ್ತಿ ನೀಡಲಾಗುತ್ತದೆ.

ಕೃತಿಗಳು 2021ರ ಜನವರಿ 1 ರಿಂದ ಡಿಸೆಂಬರ್ 31 ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿರಬೇಕು. ಜನಪದ ಪ್ರಕಾರ ಹಾಗೂ ಪಿಎಚ್.ಡಿ ಪದವಿಗಾಗಿ ಸಿದ್ಧಪಡಿಸಿದ ಸಂಶೋಧನಾ ಗ್ರಂಥಗಳನ್ನು ಪ್ರಶಸ್ತಿಗೆ ಪರಿಗಣಿಸುವುದಿಲ್ಲ. ಕೃತಿಯ ನಾಲ್ಕು ಪ್ರತಿಗಳನ್ನು ಜೂ.15ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, 560002 ಈ ವಿಳಾಸಕ್ಕೆ ಕಳುಹಿಸುವಂತೆ ಅಕಾಡೆಮಿಯು ಪ್ರಕಟಣೆಯಲ್ಲಿ ತಿಳಿಸಿದೆ.
ವಿವರಕ್ಕೆ: www.karnatakasahityaacademy.org

‘ಅಮೃತ ನಗರೋತ್ಥಾನ’ ಕೆಲವು ಕ್ಷೇತ್ರಗಳಲ್ಲಿ ಕ್ರಿಯಾಯೋಜನೆ ಅಂತಿಮಗೊಂಡಿಲ್ಲ

15 ಕ್ಷೇತ್ರಗಳಿಗೆ ಇನ್ನೂ ಕಾರ್ಯಾದೇಶ ನೀಡಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಮೂಲಸೌಕರ್ಯ ಅಭಿವೃದ್ಧಿಗಾಗಿ ‘ಅಮೃತ ನಗರೋತ್ಥಾನ’ ಯೋಜನೆಯನ್ನು ಜಾರಿಗೆ ತರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಘೋಷಣೆ ಮಾಡಿ ಒಂಬತ್ತು ತಿಂಗಳುಗಳು ಕಳೆದಿವೆ. ಆದರೆ, ನಗರದ 28 ವಿಧಾನಸಭಾ ಕ್ಷೇತ್ರಗಳ ಪೈಕಿ 15 ಕ್ಷೇತ್ರಗಳಲ್ಲಿ ಈ ಯೋಜನೆಯ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರ ಇನ್ನೂ ಕಾರ್ಯಾದೇಶವನ್ನೇ ನೀಡಿಲ್ಲ.

ಕ್ರಿಯಾಯೋಜನೆಗಳಿಗೆ ಕಾರ್ಯಾದೇಶ ನೀಡುವುದಕ್ಕೆ ಬಾಕಿ ಇರುವ 15 ಕ್ಷೇತ್ರಗಳಲ್ಲಿ 11 ಕ್ಷೇತ್ರಗಳನ್ನು ಕಾಂಗ್ರೆಸ್ ಶಾಸಕರು ಪ್ರತಿನಿಧಿಸುತ್ತಿದ್ದಾರೆ. ಬಿಜೆಪಿ ಶಾಸಕರು ಪ್ರತಿನಿಧಿಸುತ್ತಿರುವ ನಾಲ್ಕು ಕ್ಷೇತ್ರಗಳ ಕ್ರಿಯಾಯೋಜನೆಗಳಿಗೂ ಇನ್ನೂ ಕಾರ್ಯಾದೇಶ ನೀಡಿಲ್ಲ!

ಐದು ಕ್ಷೇತ್ರಗಳಲ್ಲಿ ಈ ಯೋಜನೆಯ ಕಾಮಗಾರಿಗಳ ಕ್ರಿಯಾಯೊಜನೆಯನ್ನು ಬಿಬಿಎಂಪಿ ಇನ್ನೂ ಸಿದ್ಧಪಡಿಸಿಲ್ಲ. ಇನ್ನುಳಿದ 10 ಕ್ಷೇತ್ರಗಳಿಗೆ ಸಂಬಂಧಿಸಿದ ಕ್ರಿಯಾಯೋಜನೆಯ ಕಡತಗಳು ಮುಖ್ಯಮಂತ್ರಿಯವರ ಸಚಿವಾಲಯಕ್ಕೆ ಈಗಾಗಲೇ ಸಲ್ಲಿಕೆ ಆಗಿದ್ದರೂ ಕಾರ್ಯಾದೇಶ ಜಾರಿ ಆಗಿಲ್ಲ.

ಕ್ರಿಯಾಯೋಜನೆಗೆ ಅನುಮೋದನೆ ನೀಡಲು ವಿಳಂಬವಾಗುತ್ತಿರುವ ಬಗ್ಗೆ ಶಾಸಕರು ಅಸಮಾಧಾನ ತೋಡಿಕೊಂಡಿದ್ದಾರೆ. ‘ಇನ್ನೇನು ಒಂದು ವರ್ಷದಲ್ಲಿ ತಮ್ಮ ಅಧಿಕಾರದ ಅವಧಿ ಮುಕ್ತಾಯವಾಗಿದೆ. ಸರ್ಕಾರ ಅಮೃತ ನಗರೋತ್ಥಾನ ಯೋಜನೆ ಹೆಸರಿನಲ್ಲಿ ಸಾಕಷ್ಟು ಪ್ರಚಾರ ಗಿಟ್ಟಿಸಿಕೊಂಡಿದೆ. ಕ್ರಿಯಾಯೋಜನೆಗೆ ಅನುಮೋದನೆ ನೀಡಲು ವಿಳಂಬ ಮಾಡಿದರೆ, ಇನ್ನುಳಿದ ಒಂದು ವರ್ಷದ ಅವಧಿಯಲ್ಲಿ ಕಾಮಗಾರಿ ಅನುಷ್ಠಾನಗೊಳಿಸುವುದು ಕಷ್ಟ’ ಎಂಬುದು ಶಾಸಕರ ಅಳಲು.

ಪ್ರಜಾವಾಣಿ ವಿಶೇಷ

‘ಅಮೃತನಗರೋತ್ಥಾನಯೋಜನೆಯಡಿ ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಮುಖ್ಯಮಂತ್ರಿಯವರು ಆಡಳಿತ ಪಕ್ಷದ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗಿಂತ ತುಂಬಾ ಕಡಿಮೆ ಮೊತ್ತದ ಅನುದಾನ ಹಂಚಿಕೆ ಮಾಡಿದ್ದಾರೆ. ಈಗಾಗಲೇ ಘೋಷಣೆ ಮಾಡಿರುವ ಅನುದಾನದಡಿ ರೂಪಿಸಿದ ಕ್ರಿಯಾಯೋಜನೆಗಳಿಗೆ ಕಾರ್ಯಾದೇಶ ನೀಡುವುದಕ್ಕೂ ವಿಳಂಬ ಧೋರಣೆ ಅನುಸರಿಸುತ್ತಿರುವುದು ದುರದೃಷ್ಟಕರ’ ಎಂದು ಬ್ಯಾಟರಾಯನಪುರ ಕ್ಷೇತ್ರದ ಶಾಸಕ ಕೃಷ್ಣಬೈರೇಗೌಡ ಬೇಸರ ವ್ಯಕ್ತಪಡಿಸಿದರು.

‘ಇನ್ನು ಕಾರ್ಯಾದೇಶ ನೀಡಿದರೂ, ಟೆಂಡರ್ ಕರೆದು ಕಾಮಗಾರಿ ಅನುಷ್ಠಾನಗೊಳಿಸಲು ಏಳೆಂಟು ತಿಂಗಳು ಕಾಲಾವಕಾಶ ಬೇಕು. ಅಷ್ಟರಲ್ಲಿ ಮುಂದಿನ ವಿಧಾನಸಭಾ ಚುನಾವಣೆಯ ನೀತಿಸಂಹಿತೆ ಜಾರಿಯಾಗುತ್ತದೆ. ಕಾಂಗ್ರೆಸ್‌ನ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಲ್ಲಿ ಚುನಾವಣೆಗೆ ಮುನ್ನ ಯಾವುದೇ ಕಾಮಗಾರಿಗಳು ನಡೆಯಬಾರದು ಎಂಬ ಕಾರಣಕ್ಕೇ ಈ ರೀತಿ ಮಾಡಲಾಗುತ್ತಿದೆ’ ಎಂದು ಅವರು ಆರೋಪಿಸಿದರು.

ಈ ಯೋಜನೆಯಡಿ ಬಿಬಿಎಂಪಿ ವ್ಯಾಪ್ತಿಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು ₹ 6 ಸಾವಿರ ಕೋಟಿ ಅನುದಾನ ಒದಗಿಸುವುದಾಗಿ ಮುಖ್ಯಮಂತ್ರಿ ಅವರು 2021ನೇ ಸಾಲಿನ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಘೋಷಿಸಿದ್ದರು. ಈ ಯೋಜನೆಗೆ 2022ರ ಜ. 6ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿತ್ತು. ಸರ್ಕಾರ ಈಗಾಗಲೇ ₹ 3,661 ಕೋಟಿ ಅನುದಾನವನ್ನು ಮೊದಲ ಕಂತಿನ ರೂಪದಲ್ಲಿ ನಗರದ 28 ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಿದೆ.

ವಿಳಂಬ: ಅಧಿಕಾರಿ ವಿರುದ್ಧ ಆಕ್ರೋಶ

‘ಮುಖ್ಯಮಂತ್ರಿ ಸಚಿವಾಲಯದಲ್ಲಿ ಅನುದಾನ ಮಂಜೂರು ವಿಳಂಬವಾಗಲು ವಿಶೇಷ ಕರ್ತವ್ಯ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿಯ ಹಸ್ತಕ್ಷೇಪವೇ ಕಾರಣ’ ಎಂದು ನಗರದ ಹಲವು ಶಾಸಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಸಚಿವಾಲಯದಲ್ಲಿ ಈ ಅಧಿಕಾರಿಯ ಮಾತಿಗೆ ಹೆಚ್ಚು ಬೆಲೆ. ಎಲ್ಲ ಕಡತಗಳಲ್ಲೂ ಹಸ್ತಕ್ಷೇಪ ಮಾಡುತ್ತಾರೆ. ಇದರಿಂದಾಗಿ, ಕಡತ ವಿಲೇವಾರಿ ತಿಂಗಳುಗಟ್ಟಲೆ ವಿಳಂಬವಾಗುತ್ತಿದೆ. ಮುಖ್ಯಮಂತ್ರಿ ಸಚಿವಾಲಯದ ಹಿರಿಯ ಅಧಿಕಾರಿಗಳ ನಿರ್ದೇಶನಕ್ಕೂ ಕಿಮ್ಮತ್ತು ಇಲ್ಲದಂತಾಗಿದೆ’ ಎಂದು ನಗರದ ಶಾಸಕರೊಬ್ಬರು ದೂರಿದರು.

‘ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಗಮನಕ್ಕೆ ತಂದರೂ ಹೆಚ್ಚು ಪ್ರಯೋಜನ ಆಗಿಲ್ಲ. ಈ ಅಧಿಕಾರಿಯಿಂದಾಗಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ’ ಎಂದು ಬಿಜೆಪಿ ಶಾಸಕರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

> **ಮುಖ್ಯಮಂತ್ರಿ ಅವರು ಅಭಿವೃದ್ಧಿ ಕಾಮಗಾರಿಗಳ ವಿಚಾರದಲ್ಲೂ ರಾಜಕೀಯ ಮಾಡುತ್ತಿದ್ದಾರೆ. ಇದರಿಂದ ನಗರದ ಜನತೆ ಸಂಕಷ್ಟ ಎದುರಿಸಬೇಕಾಗುತ್ತಿದೆ**
> **ಕೃಷ್ಣ ಬೈರೇಗೌಡ**
> ಶಾಸಕ, ಬ್ಯಾಟರಾಯನಪುರ ಕ್ಷೇತ್ರ

ಅಮೃತ ನಗರೋತ್ಥಾನ: ಅನುದಾನ ಹಂಚಿಕೆ ವಿವರ

ಕ್ಷೇತ್ರ	ಮಂಜೂರಾಗಿದ್ದು (₹ ಕೋಟಿ)	ಕ್ರಿಯಾಯೋಜನೆಯ ಸ್ಥಿತಿ
ಬಿಟಿಎಂ ಬಡಾವಣೆ	80	ಆದೇಶ ಜಾರಿಯಾಗಿದೆ
ಬೆಂಗಳೂರು ದಕ್ಷಿಣ	206	ಕಡತ ಸಿ.ಎಂ ಕಚೇರಿಯಲ್ಲಿದೆ
ಬಸವನಗುಡಿ	125	ಬಿಬಿಎಂಪಿ ಇನ್ನಷ್ಟೇ ಸಲ್ಲಿಸಬೇಕಿದೆ
ಬೊಮ್ಮನಹಳ್ಳಿ	207	ಬಿಬಿಎಂಪಿ ಇನ್ನಷ್ಟೇ ಸಲ್ಲಿಸಬೇಕಿದೆ
ಬ್ಯಾಟರಾಯನಪುರ	75	ಕಡತ ಸಿ.ಎಂ ಕಚೇರಿಯಲ್ಲಿದೆ
ಸಿ.ವಿ.ರಾಮನ್‌ನಗರ	150	ಆದೇಶ ಜಾರಿಯಾಗಿದೆ
ಚಾಮರಾಜಪೇಟೆ	80	ಬಿಬಿಎಂಪಿ ಇನ್ನಷ್ಟೇ ಸಲ್ಲಿಸಬೇಕಿದೆ
ಚಿಕ್ಕಪೇಟೆ	140	ಆದೇಶ ಜಾರಿಯಾಗಿದೆ
ದಾಸರಹಳ್ಳಿ	110	ಆದೇಶ ಜಾರಿಯಾಗಿದೆ
ಗಾಂಧಿನಗರ	80	ಬಿಬಿಎಂಪಿ ಇನ್ನಷ್ಟೇ ಸಲ್ಲಿಸಬೇಕಿದೆ
ಗೋವಿಂದರಾಜನಗರ	200	ಆದೇಶ ಜಾರಿಯಾಗಿದೆ
ಹೆಬ್ಬಾಳ	90	ಕಡತ ಸಿ.ಎಂ ಕಚೇರಿಯಲ್ಲಿದೆ
ಜಯನಗರ	60	ಕಡತ ಸಿ.ಎಂ ಕಚೇರಿಯಲ್ಲಿದೆ
ಕೆ.ಅರ್.ಪುರ	207	ಆದೇಶ ಜಾರಿಯಾಗಿದೆ
ಮಹದೇವಪುರ	208	ಆದೇಶ ಜಾರಿಯಾಗಿದೆ
ಮಹಾಲಕ್ಷ್ಮಿಪುರ	170	ಆದೇಶ ಜಾರಿಯಾಗಿದೆ
ಮಲ್ಲೇಶ್ವರ	170	ಆದೇಶ ಜಾರಿಯಾಗಿದೆ
ಪದ್ಮನಾಭನಗರ	200	ಆದೇಶ ಜಾರಿಯಾಗಿದೆ
ಪುಲಕೇಶಿನಗರ	70	ಕಡತ ಸಿ.ಎಂ ಕಚೇರಿಯಲ್ಲಿದೆ
ರಾಜಾಜಿನಗರ	150	ಆದೇಶ ಜಾರಿಯಾಗಿದೆ
ಆರ್.ಆರ್.ನಗರ	208	ಬಿಬಿಎಂಪಿ ಇನ್ನಷ್ಟೇ ಸಲ್ಲಿಸಬೇಕಿದೆ
ಸರ್ವಜ್ಞನಗರ	80	ಕಡತ ಸಿ.ಎಂ ಕಚೇರಿಯಲ್ಲಿದೆ
ಶಾಂತಿನಗರ	70	ಕಡತ ಸಿ.ಎಂ ಕಚೇರಿಯಲ್ಲಿದೆ
ಶಿವಾಜಿನಗರ	80	ಕಡತ ಸಿ.ಎಂ ಕಚೇರಿಯಲ್ಲಿದೆ
ವಿಜಯನಗರ	60	ಕಡತ ಸಿ.ಎಂ ಕಚೇರಿಯಲ್ಲಿದೆ
ಯಲಹಂಕ	175	ಆದೇಶ ಜಾರಿಯಾಗಿದೆ
ಯಶವಂತಪುರ	202	ಆದೇಶ ಜಾರಿಯಾಗಿದೆ
ಆನೇಕಲ್	8	ಕಡತ ಸಿ.ಎಂ ಕಚೇರಿಯಲ್ಲಿದೆ

ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು. ಶಾಸಕ ಎಸ್.ಆರ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಬ್ಯಾಂಕಿನ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ಬಿಜೆಪಿ ಮುಖಂಡರಾದ ನೆ.ಲ.ನರೇಂದ್ರಬಾಬು, ದಿಬ್ಬೂರು ಜಯಣ್ಣ, ಬಿ.ನಾರಾಯಣ, ಎಸ್.ಎನ್.ರಾಜಣ್ಣ, ಸತೀಶ್ ಕಡತನಮಲೆ, ಹನುಮಯ್ಯ, ನಾಗದಾಸನಹಳ್ಳಿ ಮುನೇಗೌಡ ಇತರರು ಇದ್ದರು.

ಬಿಜೆಪಿ ರೈತಮೋರ್ಚಾ ಸಮಾವೇಶ

ಯಲಹಂಕ: ‘ರೈತರಿಗೆ ಮತ್ತು ಬಡಜನರಿಗೆ ಅನುಕೂಲವಾಗುತ್ತಿದ್ದ ಯಶಸ್ವಿನಿ ಯೋಜನೆಯನ್ನು ಮರುಜಾರಿಗೊಳಿಸಲು ₹360 ಕೋಟಿ ಅನುದಾನ ಮೀಸಲಿರಿಸಲಾಗಿದೆ. ಈ ಯೋಜನೆಗಾಗಿ ₹100 ಕೋಟಿ ಷೇರು ಹಣವನ್ನು ಸಂಗ್ರಹಿಸಿ, ಹೊಸದಾಗಿ ಯೋಜನೆ ಜಾರಿ ಮಾಡಲಾಗುತ್ತಿದೆ’ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ನಾಗದಾಸನಹಳ್ಳಿಯಲ್ಲಿ ಆಯೋಜಿಸಿದ್ದ ’ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ರೈತಮೋರ್ಚಾ ಸಮಾವೇಶ ಹಾಗೂ ಆತ್ಮನಿರ್ಭರ ಕೃಷಿ ಮತ್ತು ಸಿರಿಧಾನ್ಯಗಳ ವರ್ಷ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬೆಳೆಗಳಿಗೆ ಸರಿಯಾದ ಬೆಂಬಲ ಬೆಲೆ ಸಿಗಬೇಕೆಂಬ ಎನ್ನುವ ಉದ್ದೇಶದಿಂದ ರೈತಪರ ಮಸೂದೆಯನ್ನು ಜಾರಿಗೊಳಿಸಲಾಗಿತ್ತು. ಆದರೆ, ವಿರೋಧಪಕ್ಷದ ಷಡ್ಯಂತ್ರದಿಂದ ಮಸೂದೆ ಜಾರಿಗೆ ಬರಲಿಲ್ಲ’ ಎಂದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, ‘ನಮ್ಮ ಪೂರ್ವಜರ ಆಹಾರ ಕ್ರಮವಾಗಿದ್ದ ಸಿರಿಧಾನ್ಯಗಳು ಆಧುನಿಕ ಭರಾಟೆಯ ನಡುವೆ ಕಳೆದುಹೋಗಿದ್ದವು. ಇದೀಗ ಜಾಗೃತಗೊಂಡಿರುವ ಜನರು, ಸಿರಿಧಾನ್ಯ ಬಳಕೆ ಸೇರಿದಂತೆ ಸಾವಯವ ಆಹಾರದ ಕಡೆಗೆ ಒಲವು ತೋರುತ್ತಿದ್ದಾರೆ. ರೈತರು ಸಾವಯವ ಕೃಷಿಯತ್ತ ಹೆಚ್ಚಿನ ಒಲವು ತೋರಬೇಕು’ ಎಂದು ಮನವಿ ಮಾಡಿದರು.

ಪೊಲೀಸ್ ಕಮಿಷನರ್ ಸ್ಥಾನಕ್ಕೆ ಪಾಲ್ ನೇಮಕ ಪ್ರಯತ್ನ: ಭಾಸ್ಕರರಾವ್

ಮೈಸೂರು: ‘ನಾನು ಪೊಲೀಸ್ ಕಮೀಷನರ್ ಆಗಿರುವಾಗ, ಆ ಸ್ಥಾನಕ್ಕೆ ಹಿರಿಯ ಅಧಿಕಾರಿಗಳಿದ್ದರೂ, ತುಂಬಾ ಕಿರಿಯ ಬ್ಯಾಚ್‌ನ ಅಧಿಕಾರಿಯಾಗಿದ್ದ ಅಮೃತ್ ಪಾಲ್ ಅವರನ್ನು ನೇಮಿಸುವ ಪ್ರಯತ್ನ ನಡೆದಿತ್ತು. ಅಚ್ಚರಿ ಜೊತೆಗೆ ಅನುಮಾನವನ್ನೂ ಮೂಡಿಸಿತ್ತು’ ಎಂದು ಆಮ್ ಆದ್ಮಿ ಪಕ್ಷದ ಮುಖಂಡ, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಪಿಎಸ್‌ಐ ಪರೀಕ್ಷೆ ಅಕ್ರಮಕ್ಕೆ ಸಂಬಂಧಿಸಿ ಪಾಲ್ ಅವರು ರಾಜಕೀಯ ಒತ್ತಡಕ್ಕೆ ಒಳಗಾಗಿರುವ ಸಾಧ್ಯತೆ ಇದೆ, ತನಿಖೆಯಿಂದ ಸತ್ಯಾಂಶ ಹೊರಬರಬೇಕಿದೆ ದೇಶದಲ್ಲಿಯೇ ಮಾದರಿಯಾಗಿದ್ದ ಪರೀಕ್ಷೆ ಹಾಗೂ ಆಯ್ಕೆ ವಿಧಾನದಲ್ಲಿ ಅಕ್ರಮ ಕಂಡುಬಂದಿರುವುದರಿಂದ ಹಿರಿಯ ಅಧಿಕಾರಿಗಳು ತಲೆ ತಗ್ಗಿಸಬೇಕಾಗಿದೆ’ ಎಂದರು.

‘ಖಾಸಗಿ ದೂರು: ತನಿಖೆ ನಿರಾಕರಣೆ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ದೂರನ್ನು ಮ್ಯಾಜಿಸ್ಟ್ರೇಟ್ ವಿಚಾರಣೆಗೆ ಸ್ವೀಕರಿಸಿ ತನಿಖೆಗೆ ಆದೇಶಿಸಿದ್ದರೆ, ಅಂತಹ ಪ್ರಕರಣದಲ್ಲಿ ಪೊಲೀಸರು ಯಾವುದೇ ಕಾರಣಕ್ಕೂ ತನಿಖೆ ನಿರಾಕರಿಸುವಂತಿಲ್ಲ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ನಗರದ ಅಶ್ವಿನಿ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, ‘ಮ್ಯಾಜಿಸ್ಟ್ರೇಟ್, ಅಪರಾಧ ದಂಡ ಸಂಹಿತೆ (ಸಿಆರ್‌ಪಿಸಿ) ಕಲಂ 200ರ ಅಡಿಯಲ್ಲಿ ದೂರು ಪುರಸ್ಕರಿಸಿ ತನಿಖೆಗೆ ಆದೇಶಿಸಿದ ನಂತರ ಪೊಲೀಸರು ಸಿಆರ್‌ಪಿಸಿ ಕಲಂ 173ಕ್ಕೆ ವಿರುದ್ಧವಾಗಿ ನಡೆದುಕೊಳ್ಳಲು ಆಗದು’ ಎಂದು ಹೇಳಿದೆ.

ಅಂತೆಯೇ, ‘ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ಜುಲೈ 14ಕ್ಕೆ 9ನೇ ಹೆಚ್ಚುವರಿ ಮೆಟ್ರೊಪಾಲಿಟನ್ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿ’ ಎಂದು ಜ್ಞಾನಭಾರತಿ ಠಾಣೆ ಪೊಲೀಸರಿಗೆ ಆದೇಶಿಸಿ, ತನಿಖೆ ನಡೆಸಲು ನಿರಾಕರಿಸಿ ಪೊಲೀಸರು 2021ರ ಆಗಸ್ಟ್ 26ರಂದು ನೀಡಿದ್ದ ಹಿಂಬರಹವನ್ನು ರದ್ದುಗೊಳಿಸಿದೆ.

ಪ್ರಕರಣವೇನು?: ಸಿಆರ್‌ಪಿಸಿ ಕಲಂ 200ರ ಅಡಿಯಲ್ಲಿ ಅರ್ಜಿದಾರರು ನಗರದ 9ನೇ ಹೆಚ್ಚುವರಿ ಮೆಟ್ರೊಪಾಲಿಟನ್ ನ್ಯಾಯಾಲಯಕ್ಕೆ ಖಾಸಗಿ ದೂರು ದಾಖಲಿಸಿದ್ದರು. ಕಲಂ 153ರ ಅಡಿಯಲ್ಲಿ ಕೆಲವು ವ್ಯಕ್ತಿಗಳ ವಿರುದ್ಧ ಆರೋಪ ಹೊರಿಸಿ ತನಿಖೆಗೆ ಆದೇಶಿಸಬೇಕು ಎಂದು ಕೋರಿದ್ದರು. ದೂರು ದಾಖಲಿಸಿಕೊಂಡಿದ್ದ ಮ್ಯಾಜಿಸ್ಟ್ರೇಟ್, ತನಿಖೆ ನಡೆಸಿ ವರದಿ ಸಲ್ಲಿಸಲು ಜ್ಞಾನಭಾರತಿ ಠಾಣೆ ಪೊಲೀಸರಿಗೆ ನಿರ್ದೇಶಿಸಿದ್ದರು. ಆದರೆ, ‘ಪ್ರಕರಣ ನಮ್ಮ ಠಾಣೆಯ ವ್ಯಾಪ್ತಿಗೆ ಬರುವುದಿಲ್ಲ’ ಎಂದು ಪೊಲೀಸರು ತನಿಖೆಗೆ ನಿರಾಕರಿಸಿದ್ದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

20 ಎಕರೆ ಜಮೀನು ಮರಳಿಸಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭೂ ನ್ಯಾಯಮಂಡಳಿ ಮತ್ತು ಕಂದಾಯ ಅಧಿಕಾರಿಗಳು ನೀಡಿದ್ದ ಆದೇಶಗಳನ್ನು ರದ್ದುಗೊಳಿಸುವ ಮೂಲಕ ಐವತ್ತು ವರ್ಷಗಳ ಹಿಂದೆ ಮಂಜೂರಾಗಿದ್ದ 20 ಎಕರೆಯನ್ನು ಮೂಲ ಮಂಜೂರಾತಿ ಹೊಂದಿದವರಿಗೆ ನೀಡಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಐವರು ಮೂಲ ಭೂ ಮಂಜೂರಾತಿದಾರರ ಕಾನೂನು ಬದ್ಧ ವಾರಸುದಾರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

‘ಭೂ ನ್ಯಾಯಮಂಡಳಿಗಳು ಹೇಗೆ ಯಾಂತ್ರಿಕವಾಗಿ ಕಾರ್ಯನಿರ್ವಹಿಸುತ್ತವೆ ಮತ್ತು ದುರ್ಬಲ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಪರವಾಗಿ ನೀಡಿದ ಭೂ ಮಂಜೂರಾತಿಯನ್ನು ಶ್ರೀಮಂತರು ಹೇಗೆ ಕಸಿದುಕೊಳ್ಳುತ್ತಾರೆ ಎಂಬುದಕ್ಕೆ ಇದು ಉದಾಹರಣೆಯಾಗಿದೆ’ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠ, ‘ಮೂರು ತಿಂಗಳ ಒಳಗೆ ಜಮೀನನ್ನು ಮೂಲ ಮಂಜೂರಾತಿದಾರರ ಕಾನೂನು ಬದ್ಧ ವಾರಸುದಾರರಿಗೆ ಮರಳಿಸಬೇಕು’ ಎಂದು ದೊಡ್ಡಬಳ್ಳಾಪುರ ಉಪವಿಭಾಗದ ವಿಭಾಗಾಧಿಕಾರಿಗೆ ನ್ಯಾಯಪೀಠ ನಿರ್ದೇಶಿಸಿದೆ.

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಹನುಮಂತನಗರದಲ್ಲಿರುವ ‘ನಮ್ಮ ಅಪ್ಪಾಜಿ ಕ್ಯಾಂಟೀನ್’ನಲ್ಲಿ ಬುಧವಾರ ₹1ಕ್ಕೆ ಊಟ –ಉಪಾಹಾರ ವಿತರಿಸಲಾಯಿತು. ಜೆಡಿಎಸ್ ಮುಖಂಡ ನಿಖಿಲ್ ಕುಮಾರಸ್ವಾಮಿ ಹಾಗೂ ಜೆಡಿಎಸ್ ವಕ್ತಾರ ಟಿ.ಎ.ಶರವಣ ಇದ್ದಾರೆ.

ಕೃಷಿ ಇಲಾಖೆ:300 ಹುದ್ದೆಗಳಿಗೆ ನೇರ ನೇಮಕಾತಿ

ಬೆಂಗಳೂರು: ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗಳ ಪೈಕಿ 300 ಹುದ್ದೆಗಳನ್ನು ನಿಯಮಾನುಸಾರ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದ್ದಾರೆ.

ಖಾಲಿ ಇರುವ ಹುದ್ದೆಗಳನ್ನು ಆದಷ್ಟು ಬೇಗ ಭರ್ತಿ ಮಾಡಲು ಒಪ್ಪಿಗೆ ನೀಡುವಂತೆ ಆರ್ಥಿಕ ಇಲಾಖೆಗೆ ಮನವಿ ಮಾಡಲಾಗಿತ್ತು. ಅದರಂತೆ ಆರ್ಥಿಕ ಇಲಾಖೆ ಈಗ ಒಪ್ಪಿಗೆ ಸೂಚಿಸಿದೆ. 300 ಹುದ್ದೆಗಳನ್ನು ಕರ್ನಾಟಕ ಕೃಷಿ ಸೇವೆಗಳು(ವೃಂದ ಮತ್ತು ನೇಮಕಾತಿ) ನಿಯಮಗಳು, 2021ರಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಕೃಷಿ ಇಲಾಖೆ ಆಯುಕ್ತರಿಗೆ ನಿರ್ದೇಶಿಸಲಾಗಿದೆ ಎಂದು ತಿಳಿಸಿದರು.

ಕೃಷಿ ಪದವೀಧರರಿಗೆ ಶೇ 85, ಉಳಿದ ಶೇ 15 ಹುದ್ದೆಗಳನ್ನು ಬಿ.ಟೆಕ್ (ಕೃಷಿ ಎಂಜಿನಿಯರಿಂಗ್) ಅಥವಾ ಬಿ.ಟೆಕ್ (ಆಹಾರ ತಂತ್ರಜ್ಞಾನ/ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ಅಥವಾ ಬಯೋಟೆಕ್ನಾಲಜಿ ಹೊಂದಿರುವವರು ಅರ್ಜಿ ಸಲ್ಲಿಸಲು ಅರ್ಹತೆ ಪಡೆದಿರುತ್ತಾರೆ.

ಪಾಂಗಾಂಗ್ ಸರೋವರ ಪ್ರದೇಶದಲ್ಲಿ ಚೀನಾದಿಂದ ಮತ್ತೊಂದು ಸೇತುವೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ (ಪಿಎಲ್‌ಎ) ಪೂರ್ವ ಲಡಾಖ್‌ನ ಪಾಂಗಾಂಗ್ ಸರೋವರ ಪ್ರದೇಶದಲ್ಲಿ ಸೇನೆ ಮತ್ತು ಶಸ್ತ್ರಸಜ್ಜಿತ ವಾಹನಗಳ ಸುಗಮ ಸಂಚಾರಕ್ಕಾಗಿ ತಮ್ಮ ಪ್ರದೇಶದಲ್ಲಿ ಎರಡನೇ ಸೇತುವೆ ನಿರ್ಮಿಸುತ್ತಿರುವುದನ್ನು ಉಪಗ್ರಹ ಚಿತ್ರಗಳು ಬಹಿರಂಗಪಡಿಸಿವೆ.

ಹೊಸ ಸೇತುವೆಯು ಸರೋವರದ ಉತ್ತರ ಭಾಗದಲ್ಲಿರುವ ಫಿಂಗರ್ 8 ಪ್ರದೇಶಕ್ಕೆ ಸಣ್ಣ ಮತ್ತು ನೇರ ಮಾರ್ಗದ ಮೂಲಕ ಸರೋವರ ಮತ್ತು ಚೀನಾ ಭಾಗದ ಆಳ ಪ್ರದೇಶಗಳ ನಡುವಿನ ಸಂಪರ್ಕವನ್ನು ಸುಧಾರಿಸಬಹುದು. ಇದು ಪ್ರಸ್ತುತ ಬಫರ್ ವಲಯದ ಗಡಿಯಾಗಿದೆ.

ಹೊಸ ಸೇತುವೆ ನಿರ್ಮಾಣವು ಪೂರ್ವ ಲಡಾಖ್‌ನಲ್ಲಿ ನಡೆಯುತ್ತಿರುವ ಪಿಎಲ್‌ಎ ಮೂಲಸೌಕರ್ಯ ಅಭಿವೃದ್ಧಿ ಕಾರ್ಯದ ಮುಂದುವರಿಕೆಯಾಗಿದೆ. ಈ ಪ್ರದೇಶದಲ್ಲಿ ಒಂದು ತಿಂಗಳ ಹಿಂದೆ ಸಣ್ಣ ಸೇತುವೆಯನ್ನು ನಿರ್ಮಿಸಲಾಗಿದೆ. ಸರೋವರದ ಸುತ್ತಲೂ ಪಡೆಗಳನ್ನು ತ್ವರಿತವಾಗಿ ಸಜ್ಜುಗೊಳಿಸಲು ರಸ್ತೆ ಜಾಲವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಈ ಹಿಂದೆ ಇಲ್ಲಿಯೇ ಭಾರತ ಮತ್ತು ಚೀನಾ ಸೈನಿಕರ ನಡುವೆ ಮುಖಾಮುಖಿಯಾಗಿತ್ತು.

ಹೊಸ ಸೇತುವೆಯು ಜುಲೈ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಪಿಎಲ್‌ಎ ಪಡೆಗಳ ಪ್ರಧಾನ ಕೇಂದ್ರವಾದ ಖುರ್ನಾಕ್ ಫೋರ್ಟ್ ಮತ್ತು ರುಟೋಗ್ ನಡುವೆ 180 ಕಿ.ಮೀ. ಅಂತರವನ್ನು ಕಡಿಮೆ ಮಾಡುತ್ತದೆ ಎಂದು ಮೂಲಗಳು ತಿಳಿಸಿವೆ.

ಇರ್‌ಕಾನ್ ಇಂಟರ್‌ನ್ಯಾಷನಲ್ ಲಿಮಿಟೆಡ್
(ಭಾರತ ಸರ್ಕಾರದ ಅಧೀನ ಸಂಸ್ಥೆ)
ವೆಬ್‌ಸೈಟ್: www.ircon.org CIN: L45203DL1976GOI008171
ಇ–ಪ್ರೊಕ್ಯೂರ್‌ಮೆಂಟ್ ನೋಟಿಸ್
ಇ–ಟೆಂಡರ್ ನಂ.: ಇರ್‌ಕಾನ್/ಡಿಹೆಚ್‌ಹೆಚ್‌ಪಿ/ಇ–ಟೆಂಡರ್/ಬ್ಯಾಲ.ವರ್ಕ್ಸ್ ಪ್ಯಾ–ಎ/12 & ಪ್ಯಾ–ಬಿ/13 ದಿನಾಂಕ: 19.05.2022 ಕರ್ನಾಟಕ ರಾಜ್ಯದಲ್ಲಿನ ರಾಹೆ–48 ರಲ್ಲಿ (ಹಳೆಯ ರಾ.ಹೆ–4) ಗುರುತಿಸಲ್ಪಟ್ಟಿರುವ ಕಿ.ಮೀ. 259+800 (ನ್ಯೂ ಕಿ.ಮೀ. 262+000) ದಿಂದ ಕಿ.ಮೀ. 338+923 (ನ್ಯೂ ಕಿ.ಮೀ. 341+123) – ಪ್ಯಾ–ಎ ಮತ್ತು ಪ್ಯಾ–ಬಿ ಸ್ಥಳಗಳಲ್ಲಿ ಬಾಕಿ ಉಳಿದಿರುವ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸುವ" ಕಾಮಗಾರಿಗಾಗಿ, ಅರ್ಹತಾ ಮಾನದಂಡಗಳನ್ನು ಪೂರೈಸಬಲ್ಲ ಬಿಡ್‌ದಾರರಿಂದ ದ್ವಿ ಹಂತ ಬಿಡ್ ವ್ಯವಸ್ಥೆಯಡಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ವಿವರಗಳು	ಪ್ಯಾಕೇಜ್–ಎ	ಪ್ಯಾಕೇಜ್–ಬಿ
ಕಾಮಗಾರಿಯ ಅಂದಾಜು ವೆಚ್ಚ	₹87,80,08,573/-	₹1,19,08,16,366/-
ಇ–ಬಿಡ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	09.06.202215:00 hrs.	09.06.202215:00 hrs.

ಹೆಚ್ಚಿನ ವಿವರಗಳಿಗಾಗಿ ಭೇಟಿ ಕೊಡಿ https://etenders.gov.in/eprocure/app. ತಿದ್ದುಪಡಿಗಳು ಎದುರಾದಲ್ಲಿ ಅಂತಹವುಗಳನ್ನು ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. ಚೀಫ್ ಜನರಲ್ ಮ್ಯಾನೇಜರ್/ಸಿವಿಲ್ ದಾವಣಗೆರೆ ಹಾವೇರಿ ಹೆದ್ದಾರಿ ಯೋಜನೆ, ಫೋನ್: (ಮೊ): 9611305477

THE NATIONAL EDUCATION SOCIETY OF KARNATAKA®
Basavanagudi, Bangalore - 560 004
Admissions are in full swing at
1. The National Higher Primary School, (Kannada Medium / English Medium) Basavanagudi
2. The National High School, Basavanagudi
3. The National Pre-University College, Basavanagudi
4. The National Degree College, Basavanagudi
Special Feature
Every student will be allowed to work in ROBOTICS AND ARTIFICIAL INTELLIGENCE (AI) Lab.
For more details:
Contact the respective Heads of Institutions during week days from 11.00 a.m. to 1.00 p.m.
Prof. S.N. Nagaraja Reddy, Dr. P. Sadananda Maiya — Secretaries
A.H. Rama Rao — President

ಜಡೆ ಹಿಡಿದು ಎಳೆದು ಪರಸ್ಪರರ ಮೇಲೆ ಹಲ್ಲೆ, ತಳ್ಳಾಟ: ಕೆಲವರಿಗೆ ಗಾಯ

ರಸ್ತೆಯಲ್ಲಿ ವಿದ್ಯಾರ್ಥಿನಿಯರ ಮಾರಾಮಾರಿ

ಪ್ರಜಾವಾಣಿ ವಾರ್ತೆ

ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ ವಿದ್ಯಾರ್ಥಿನಿಯರು ಪರಸ್ಪರ ಹಲ್ಲೆಯಲ್ಲಿ ತೊಡಗಿದ್ದ ದೃಶ್ಯ.

ಬೆಂಗಳೂರು: ನಗರದ ಬಿಷಪ್ ಕಾಟನ್ ಬಾಲಕಿಯರ ಶಾಲೆಯ ವಿದ್ಯಾರ್ಥಿನಿಯರು ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ ಮಂಗಳವಾರ ಮಧ್ಯಾಹ್ನ ಮಾರಾಮಾರಿ ನಡೆಸಿದ್ದಾರೆ.

ವಿದ್ಯಾರ್ಥಿನಿಯರು ಪರಸ್ಪರರ ಮೇಲೆ ಹಲ್ಲೆ ಮಾಡಿ ಎಳೆದಾಡುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಸಮವಸ್ತ್ರ ಧರಿಸಿದ್ದ ಸುಮಾರು 20 ವಿದ್ಯಾರ್ಥಿನಿಯರಿದ್ದ ಎರಡು ಗುಂಪುಗಳು ಕೈ–ಕೈಮಿಲಾಯಿಸಿ ಜಡೆ ಎಳೆದು ಹೊಡೆದಾಡಿದ್ದಾರೆ. ಇವರ ಜತೆ, ಸಮವಸ್ತ್ರದಲ್ಲಿ ಇಲ್ಲದ ವಿದ್ಯಾರ್ಥಿನಿಯರು ಸಹ ಸೇರಿಕೊಂಡಿದ್ದಾರೆ.

ಪರಸ್ಪರರ ಮೇಲೆ ಹಲ್ಲೆ ಮಾಡಲು ಬೇಸ್‌ಬಾಲ್ ಬ್ಯಾಟ್ ಅನ್ನು ಒಬ್ಬರಿಂದ ಇನ್ನೊಬ್ಬರಿಗೆ ನೀಡುವ ದೃಶ್ಯವೂ ಇದೆ. ವಿದ್ಯಾರ್ಥಿನಿಯೊಬ್ಬರು ಎಳೆದಾಡಿ ಮೆಟ್ಟಿಲುಗಳ ಕೆಳಗೆ ಎಳೆದುಕೊಂಡು ಹೋಗುತ್ತಿರುವುದು ವಿಡಿಯೊದಲ್ಲಿದೆ. ಕೆಲ ವಿದ್ಯಾರ್ಥಿಗಳು ಮಧ್ಯಪ್ರವೇಶಿಸಿ ಶಮನಗೊಳಿಸುವ ಪ್ರಯತ್ನ ಮಾಡಿದ್ದರೂ ವಿಫಲವಾಗಿದೆ. 9 ಮತ್ತು 10ನೇ ತರಗತಿಯ ವಿದ್ಯಾರ್ಥಿನಿಯರು ಶಾಲಾ ಅವಧಿ ಮುಗಿದ ನಂತರ ಹೊಡೆದಾಟಕ್ಕಿಳಿದಿದ್ದಾರೆ.

ಮಾರಾಮಾರಿಗೆ ಖಚಿತ ಕಾರಣಗಳು ತಿಳಿದು ಬಂದಿಲ್ಲ. ಘಟನೆ ಬಗ್ಗೆ ಶಾಲೆಯು ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ.

ಆದರೆ, ವಿವಿಧ ರೀತಿಯ ವದಂತಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಯುವಕನೊಬ್ಬನ ಪ್ರೇಮದ ವಿಷಯದಲ್ಲಿ ಇಬ್ಬರು ವಿದ್ಯಾರ್ಥಿನಿಯರಲ್ಲಿ ಬೆಳೆದ ದ್ವೇಷವೇ ಈ ಘಟನೆಗೆ ಕಾರಣ ಎನ್ನುವ ಸುದ್ದಿಗಳು ಹರಿದಾಡಿವೆ. ಜಟಾಪಟಿಯಲ್ಲಿ ಕೆಲ ವಿದ್ಯಾರ್ಥಿಗಳು ಗಾಯಗೊಂಡಿದ್ದು, ಕೆಲವರ ಮೂಗಿನಲ್ಲಿ ರಕ್ತಸ್ರಾವವಾಗಿದೆ.

ಪ್ರಕರಣದ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿಲ್ಲ.

ಮುಖ್ಯಾಂಶಗಳು
- ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿಲ್ಲ
- ಹಲ್ಲೆ ಮಾಡಲು ಬೇಸ್‌ಬಾಲ್ ಬ್ಯಾಟ್ ಹಂಚಿಕೆ

ವಿದ್ಯಾರ್ಥಿಗಳ ಜತೆ ಸಮಾಲೋಚನೆ: ಬಿಷಪ್ ಕಾಟನ್ ಬಾಲಕಿಯರ ಶಾಲೆಯ ಆಡಳಿತ ಮಂಡಳಿಯು ವಿದ್ಯಾರ್ಥಿನಿಯರ ಜತೆ ಬುಧವಾರ ಸಮಾಲೋಚನೆ ನಡೆಸಿದೆ.

ಜತೆಗೆ, ವಿದ್ಯಾರ್ಥಿನಿಯರ ಹಿತಾಸಕ್ತಿ ದೃಷ್ಟಿಯಿಂದ ಶಿಕ್ಷಣ ಹಕ್ಕುಗಳ ಕಾರ್ಯಪಡೆ ಸದಸ್ಯರು ಮತ್ತು ಪೊಲೀಸ್ ಅಧಿಕಾರಿಗಳು ವಿದ್ಯಾರ್ಥಿನಿಯರು ಮತ್ತು ಪೋಷಕರ ಜತೆ ಮಾತುಕತೆ ನಡೆಸಿದರು.

‘ವಿದ್ಯಾರ್ಥಿನಿಯರಿಗೆ ಮತ್ತು ಪೋಷಕರ ಜತೆ ಸಮಾಲೋಚನೆ ನಡೆಸಿ ತಿಳಿವಳಿಕೆ ನೀಡಲಾಗಿದೆ. ಬಾಲ ನ್ಯಾಯ ಕಾಯ್ದೆ ಬಗ್ಗೆಯೂ ಮಾಹಿತಿ ನೀಡಲಾಗಿದೆ. ಈ ಕಾಯ್ದೆ ಅಡಿಯಲ್ಲಿ ಕ್ರಮಕೈಗೊಳ್ಳಲು ಅವಕಾಶ ಇದೆ ಎನ್ನುವ ಎಚ್ಚರಿಕೆ ನೀಡಲಾಗಿದೆ’ ಎಂದು ಕಾರ್ಯಪಡೆಯ ಸದಸ್ಯರಾದ ಸುಜಾತಾ ತಿಳಿಸಿದ್ದಾರೆ. ‘ಎರಡು ವರ್ಷಗಳ ಕೋವಿಡ್‌ನಿಂದಾಗಿ ವಿದ್ಯಾರ್ಥಿಗಳ ನಡವಳಿಕೆಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಹೀಗಾಗಿ, ಪೋಷಕರು ಮಕ್ಕಳ ಬಗ್ಗೆ ನಿಗಾವಹಿಸಬೇಕು. ಮಕ್ಕಳನ್ನು ಸಹ ಸ್ನೇಹಿತರನ್ನಾಗಿ ಕಾಣಬೇಕು’ ಎಂದು ಸಲಹೆ ನೀಡಿದ್ದಾರೆ.

ಮಕ್ಕಳ ಹಕ್ಕುಗಳ ಕಾರ್ಯಕರ್ತ ನಾಗಸಿಂಗ ಜಿ. ರಾವ್ ಅವರು, ‘ಹದಿಹರೆಯದ ವಯಸ್ಸಿನಲ್ಲಿ ಇಂತಹ ಪ್ರಕರಣಗಳು ನಡೆಯುತ್ತವೆ. ಶಿಕ್ಷಕರು ಮತ್ತು ಪೋಷಕರು ವಿದ್ಯಾರ್ಥಿಗಳನ್ನು ಸೂಕ್ಷ್ಮವಾಗಿ ನಿಭಾಯಿಸಬೇಕು. ಹೀಗಾಗಿಯೇ ನಾವು, ಮಕ್ಕಳ ಹಕ್ಕುಗಳ ನೀತಿಯನ್ನು ಪ್ರತಿ ಶಾಲೆಯಲ್ಲಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದ್ದೇವೆ. ಜತೆಗೆ, ಪೋಕ್ಸೊ ಮತ್ತು ಬಾಲ ನ್ಯಾಯ ಕಾಯ್ದೆಯ ಬಗ್ಗೆಯೂ ಅರಿವು ಮೂಡಿಸಬೇಕಾಗಿದೆ’ ಎಂದು ಹೇಳಿದರು.

ಒಕ್ಕಲಿಗರ ಸಂಘದ ಶಿಕ್ಷಣ ಸಂಸ್ಥೆಗಳಿಗೆ 231 ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಕ್ಕಲಿಗರ ಸಂಘದ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಅಭ್ಯಸಿಸುತ್ತಿರುವ ವಿವಿಧ ವಿಭಾಗಗಳ ವಿದ್ಯಾರ್ಥಿಗಳು 2020–21ನೇ ಸಾಲಿನಲ್ಲಿ ಒಟ್ಟು 231 ಜನ ರ‍್ಯಾಂಕ್ ಗಳಿಸುವ ಮೂಲಕ ಸಂಘದ ಅಡಿಯಲ್ಲಿ ನಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ಮತ್ತಷ್ಟು ಮೆರುಗು ಮೂಡಿಸಿದ್ದಾರೆ ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.

ಈ ಕುರಿತಂತೆ ಬುಧವಾರ ಮಾಧ್ಯಮಗೋಷ್ಠಿಯಲ್ಲಿ ವಿವರ ನೀಡಿದ ಅವರು, ‘ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಅಂತಿಮ ವರ್ಷದ ಪರೀಕ್ಷೆಯಲ್ಲಿ ಒಟ್ಟಾರೆ 21 ವಿದ್ಯಾರ್ಥಿಗಳು ರ‍್ಯಾಂಕ್ ಪಡೆದಿದ್ದಾರೆ. ಕೆಂಪೇಗೌಡ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಕಾಲೇಜಿನಲ್ಲಿ ವೈದ್ಯಕೀಯ ಪದವಿಯಲ್ಲಿ 9 ವಿದ್ಯಾರ್ಥಿಗಳು 14 ರ‍್ಯಾಂಕ್, ಸ್ನಾತಕೋತ್ತರ ಪದವಿಯಲ್ಲಿ 7 ರ‍್ಯಾಂಕ್ ಹಾಗೂ ದಂತ ವೈದ್ಯಕೀಯ ಪದವಿಯಲ್ಲಿ 10 ವಿದ್ಯಾರ್ಥಿಗಳು ರ‍್ಯಾಂಕ್ ಗಳಿಸಿದ್ದಾರೆ’ ಎಂದು ವಿವರಿಸಿದರು.

‘ನರ್ಸಿಂಗ್ ವಿಭಾಗದಲ್ಲಿ ಕೆಂಪೇಗೌಡ ನರ್ಸಿಂಗ್ ಕಾಲೇಜಿನ ಪಿಬಿಬಿಎಸ್ಸಿ (ಡಿಪ್ಲೊಮಾ–ಎರಡು ವರ್ಷ) ಬಿಎಸ್ಸಿ ನರ್ಸಿಂಗ್ (ನಾಲ್ಕು ವರ್ಷ) ಪರೀಕ್ಷೆಯಲ್ಲಿ ಒಟ್ಟಾರೆ ವಿಷಯವಾರು 34 ರ‍್ಯಾಂಕ್ ಗಳಿಸುವ ಮೂಲಕ ವಿದ್ಯಾರ್ಥಿನಿಯರು ಮೈಲುಗಲ್ಲು ಸ್ಥಾಪಿಸಿದ್ದಾರೆ. ಅಂತೆಯೇ, ಬಿ.ಫಾರ್ಮಾ ಮತ್ತು ಡಿ.ಫಾರ್ಮಾ ಪರೀಕ್ಷೆಗಳಲ್ಲಿ ವಿವಿಪುರ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಸ್ಯೂಟಿಕಲ್ ಸೈನ್ಸ್ ಕಾಲೇಜಿನ ಅಂತಿಮ ಬಿ ಫಾರ್ಮಾದಲ್ಲಿ 34 ರ‍್ಯಾಂಕ್‌ಗಳು, ಆರು ವರ್ಷದ ಡಿ.ಫಾರ್ಮಾ ಕೋರ್ಸಿನ ಮೊದಲ ವರ್ಷದಲ್ಲಿ 24, ಎರಡನೇ ವರ್ಷದಲ್ಲಿ 6, ಮೂರನೇ ವರ್ಷದಲ್ಲಿ 39, ನಾಲ್ಕನೇ ವರ್ಷದಲ್ಲಿ 14 ಹಾಗೂ ಅಂತಿಮ ವರ್ಷದ ಪರೀಕ್ಷೆಯಲ್ಲಿ 20 ರ‍್ಯಾಂಕ್ ಗಳಿಸುವ ಮೂಲಕ ಒಟ್ಟು 141 ರ‍್ಯಾಂಕ್ ಗಳಿಸಿ ಸಂಸ್ಥೆ ದಾಖಲೆ ಬರೆದಿದೆ’ ಎಂದು ಹೇಳಿದರು.

‘ಎಂಜಿನಿಯರಿಂಗ್ ಪದವಿಯಲ್ಲಿ ಬಿಐಟಿ ಕಾಲೇಜಿನ 12 ಮತ್ತು ಸ್ನಾತಕೋತ್ತರ ಪದವಿಯಲ್ಲಿ 12 ವಿದ್ಯಾರ್ಥಿಗಳು ರ‍್ಯಾಂಕ್ ಗಳಿಸಿದ್ದಾರೆ. ವಿ.ವಿ. ಪುರ ಕಾನೂನು ಕಾಲೇಜಿನ ಮೂವರು ವಿದ್ಯಾರ್ಥಿಗಳು 2 ಹಾಗೂ 5ನೇ ರ‍್ಯಾಂಕ್ ಗಳಿಸಿದ್ದರೆ ಮತ್ತೊಬ್ಬ ವಿದ್ಯಾರ್ಥಿನಿ 2 ಚಿನ್ನದ ಪದಕ ಗಳಿಸಿದ್ದಾರೆ. ಇದೇ ಕಾಲೇಜಿನ ಕಲೆ ಮತ್ತು ವಾಣಿಜ್ಯ ಕಾಲೇಜಿನ ಅಂತಿಮ ವರ್ಷದ ಬೆಂಗಳೂರು ವಿವಿ ಪರೀಕ್ಷೆಯಲ್ಲಿ 3ನೇ ರ‍್ಯಾಂಕ್ ಹಾಗೂ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜಿಗೆ ಎರಡನೇ ರ‍್ಯಾಂಕ್ ಸಂದಿದೆ’ ಎಂದು ತಿಳಿಸಿದರು. ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪರೆಡ್ಡಿ, ಉಪಾಧ್ಯಕ್ಷ ರೇಣುಕಾ ಪ್ರಸಾದ್ ಹಾಗೂ ನಿರ್ದೇಶಕರು ಇದ್ದರು.

ಭಾರತ್ ಎಜುಕೇಷನ್ ಸೊಸೈಟಿ (ರಿ)
ನಂ.27, 16ನೇ ಮುಖ್ಯರಸ್ತೆ, 4ನೇ ಬಡಾವಣೆ, ಜಯನಗರ, ಬೆಂಗಳೂರು-560 011. ದೂರವಾಣಿ: 22447067
ನೋಂದಣಿ ಸಂಖ್ಯೆ : ಎಸ್-101/71/72
Website: www.besinstitutions.edu.in; E-mail: besinstitution@yahoo.in


ಸಹಕಾರ ರತ್ನ
ಶ್ರೀ ಬಿ.ಎಲ್.ಲಕ್ಕೇಗೌಡ
ಭಾರತ್ ವಿದ್ಯಾ ಸಂಸ್ಥೆಯ ಸಂಸ್ಥಾಪಕರು


ಸನ್ಮಾನ್ಯ
ಶ್ರೀ ಎಸ್.ಟಿ.ಸೋಮಶೇಖರ್
ಸಹಕಾರ ಸಚಿವರು
ಅಧ್ಯಕ್ಷರು, ಭಾರತ್ ವಿದ್ಯಾ ಸಂಸ್ಥೆ

ಪ್ರಕಟಣೆ
ದಿನಾಂಕ 22.05.2022 ಭಾನುವಾರ ಭಾರತ್ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿಗೆ ಚುನಾವಣೆ ನಡೆಯಬೇಕಾಗಿದ್ದು, ದಿನಾಂಕ 16.05.2022ರಂದು ನಾಮಪತ್ರ ಹಿಂಪಡೆಯಲು ಅಂತಿಮ ದಿನವಾಗಿತ್ತು. ಕಣದಲ್ಲಿದ್ದ 46 ಉಮೇದುವಾರರ ಪೈಕಿ 28 ಅಭ್ಯರ್ಥಿಗಳು ನಾಮಪತ್ರಗಳನ್ನು ಹಿಂಪಡೆದ ಹಿನ್ನೆಲೆಯಲ್ಲಿ ಸಂಸ್ಥೆಯ ಬೈಲಾ ಪ್ರಕಾರ 18 ಸದಸ್ಯರುಗಳನ್ನು ಆಯ್ಕೆ ಮಾಡಬೇಕಾಗಿದ್ದು, ಕಣದಲ್ಲಿ ಉಳಿದ ಈ ಕೆಳಕಂಡ 18 ಸದಸ್ಯರುಗಳು ಕಾರ್ಯಕಾರಿ ಸಮಿತಿಗೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಚುನಾವಣಾಧಿಕಾರಿಗಳು ಘೋಷಿಸಿರುತ್ತಾರೆ. ಆದುದರಿಂದ ದಿನಾಂಕ 22.05.2022ರಂದು ಚುನಾವಣೆ ಇರುವುದಿಲ್ಲವೆಂದು ಮಾನ್ಯ ಸದಸ್ಯರುಗಳ ಗಮನಕ್ಕೆ ತರಲಾಗಿದೆ. ಸಂಸ್ಥೆಯ ಸಂಸ್ಥಾಪಕರಾದ ಸಹಕಾರ ರತ್ನ **ಶ್ರೀ ಬಿ.ಎಲ್.ಲಕ್ಕೇಗೌಡರು ಮತ್ತು ಸನ್ಮಾನ್ಯ ಶ್ರೀ ಎಸ್.ಟಿ. ಸೋಮಶೇಖರ್**, ಸಹಕಾರ ಸಚಿವರು, ಕರ್ನಾಟಕ ಸರ್ಕಾರ ಇವರುಗಳ ನೇತೃತ್ವದ ತಂಡದ ಸದಸ್ಯರುಗಳನ್ನು ಅವಿರೋಧವಾಗಿ ಆಯ್ಕೆಮಾಡಿದ ಎಲ್ಲಾ ಮಾನ್ಯ ಸದಸ್ಯ ಬಂಧುಗಳಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತಾ ಸದಸ್ಯರುಗಳ ಸಲಹೆ, ಮಾರ್ಗದರ್ಶನ ಮತ್ತು ಸಹಕಾರ ಸಂಸ್ಥೆಯ ಶ್ರೇಯೋಭಿವೃದ್ಧಿಗೆ ಸದಾ ಹೀಗೇ ಇರಲೆಂದು ಸಮಿತಿಯು ಆಶಿಸುತ್ತದೆ.

ಅವಿರೋಧವಾಗಿ ಆಯ್ಕೆಯಾದ ಸದಸ್ಯರುಗಳು
1)ಶ್ರೀ ಎಸ್.ಟಿ.ಸೋಮಶೇಖರ್ 2) ಶ್ರೀ ಎಂ.ಕೃಷ್ಣದಾಸ್ 3) ಶ್ರೀಮತಿ ಬಿ.ಎಲ್.ನಂದಿನಿ 4) ಶ್ರೀ ಪಿ.ನರಸಿಂಹಮೂರ್ತಿ 5) ಶ್ರೀ ಬಿ.ಅರ್.ವಾಸುದೇವ್ 6) ಶ್ರೀ ಜಿ.ಎನ್.ಆರ್.ಮೋಹನ 7) ಡಾ. ರಾಮೇಗೌಡ 8) ಶ್ರೀ ಟಿ.ಆರ್.ವೆಂಕಟರೆಡ್ಡಿ 9) ಶ್ರೀ ಕೆ.ಆರ್.ನಿರ್ಮಲ್ ಕುಮಾರ್ 10) ಪ್ರೊ. ಎನ್.ಎಸ್.ವಿಜಯ 11) ಶ್ರೀ ಕೆ. ಎಸ್.ಸುಧಾಕರ್ 12) ಶ್ರೀ ಬಿ.ಸಿ.ಶಿವಲಿಂಗೇಗೌಡ 13) ಶ್ರೀ ಮರಿಮಲ್ಲಯ್ಯ 14) ಶ್ರೀಮತಿ ಸುಧಾ ದತ್ತು 15) ಶ್ರೀ ಎಂ.ಸಿ.ಜಗತ್ 16) ಶ್ರೀ ಲಕ್ಷ್ಮಣ್ 17) ಪ್ರೊ. ಟಿ.ನಾರಾಯಣಪ್ಪ 18) ಶ್ರೀ ಎನ್. ಕಾಮರಾಜ್
ಚುನಾವಣಾಧಿಕಾರಿಗಳ ಆದೇಶದ ಮೇರೆಗೆ ಸಹಿ ಮಾಡಿದೆ
ಸಹಿ/–
ಎಂ. ಕೃಷ್ಣದಾಸ್, ವಕೀಲರು,
ಕಾರ್ಯದರ್ಶಿ, ಭಾರತ್ ವಿದ್ಯಾ ಸಂಸ್ಥೆ (ರಿ)
BES-22303

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಜಪ್ತಿ ವಾಹನಗಳ ಬಿಡುಗಡೆ: ಹೈಕೋರ್ಟ್ ವಿಭಾಗೀಯ ಪೀಠದಿಂದ ಮಹತ್ವದ ಆದೇಶ

ವಿಚಾರಣಾ ಕೋರ್ಟ್‌ಗಳಿಗೆ ಅಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಅಡಿಯಲ್ಲಿ ಜಪ್ತಿ ಮಾಡಲಾದ ವಾಹನಗಳನ್ನು ಅವುಗಳ ವಾರಸುದಾರರಿಗೆ ನೀಡುವ ಮಧ್ಯಂತರ ಅಧಿಕಾರವನ್ನು ಮ್ಯಾಜಿಸ್ಟ್ರೇಟ್ ಅಥವಾ ವಿಶೇಷ ನ್ಯಾಯಾಲಯಗಳು ಹೊಂದಿವೆ' ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಈ ಕುರಿತಂತೆ ಬನಶಂಕರಿ ಬಡಾವಣೆಯ ಜಿ. ಶ್ರೀಕೃಷ್ಣ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ಮೇಲಿನ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಬಿ.ವೀರಪ್ಪ ಹಾಗೂ ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ವಿಭಾಗೀಯ ನ್ಯಾಯಪೀಠ ಪ್ರಕಟಿಸಿದೆ.

ಮುಖ್ಯಾಂಶಗಳು
- ಎನ್‌ಡಿಪಿಎಸ್ ಅಡಿಯಲ್ಲಿ ಜಪ್ತಿ ಮಾಡಲಾದ ವಾಹನಗಳು
- ಮ್ಯಾಜಿಸ್ಟ್ರೇಟ್ ಅಥವಾ ವಿಶೇಷ ನ್ಯಾಯಾಲಯಕ್ಕೆ ಅಧಿಕಾರ
- ಜಿ. ಶ್ರೀಕೃಷ್ಣ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ವೇಳೆ ತೀರ್ಪು

ಈ ಮೊದಲು ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಮಾದಕ ವಸ್ತುಗಳ ಸಾಗಣೆ ಸಂದರ್ಭದಲ್ಲಿ ಜಪ್ತಿ ಮಾಡಲಾದ ವಾಹನಗಳನ್ನು ಅವುಗಳ ವಾರಸುದಾರರಿಗೆ ಬಿಡುಗಡೆ ಮಾಡುವ ಅಧಿಕಾರ ವಿಚಾರಣಾ ಕೋರ್ಟ್‌ಗೆ ಇದೆ' ಎಂದು ತೀರ್ಪು ನೀಡಿದ್ದರು. ಆದರೆ, ಇದೇ ಹೈಕೋರ್ಟ್‌ನ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಮತ್ತೊಂದು ಏಕಸದಸ್ಯ ನ್ಯಾಯಪೀಠ ಬೇರೊಂದು ಪ್ರಕರಣದಲ್ಲಿ, 'ವಾಹನ ಬಿಡುಗಡೆ ಮಾಡುವ ಅಧಿಕಾರ ಪೊಲೀಸ್ ನೇತೃತ್ವದ ವಿಲೇವಾರಿ ಸಮಿತಿಗೆ ಇದೆ' ಎಂದು ತೀರ್ಪು ನೀಡಿತ್ತು.

ಈ ವಿಭಿನ್ನ ನಿಲುವುಗಳ ಗೊಂದಲ ನಿವಾರಣೆಗೆ ವಿಭಾಗೀಯ ನ್ಯಾಯಪೀಠ ರಚಿಸಲಾಗಿತ್ತು. 'ಇದರನ್ವಯ ವಿಭಾಗೀಯ ನ್ಯಾಯ ಪೀಠದ ವಿಚಾರಣೆ ವೇಳೆ, ಅರ್ಜಿದಾರರ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ಸಂದೇಶ್ ಚೌಟ ಮತ್ತು ಎಸ್. ಸುನಿಲ್ ಕುಮಾರ್, 'ಇಂತಹ ಪ್ರಕರಣಗಳಲ್ಲಿ ಪೊಲೀಸರಿಗೆ ನೀಡಿರುವ ಅಧಿಕಾರ ಭ್ರಷ್ಟಾಚಾರಕ್ಕೆ ನಾಂದಿ ಹಾಡುತ್ತದೆ' ಎಂಬ ಆಕ್ಷೇಪ ವ್ಯಕ್ತಪಡಿಸಿದ್ದರು.

'ಮಾದಕ ವಸ್ತುಗಳ ಸಾಗಣೆಗೆ ಬಳಸಲಾದ ಆರೋಪದಲ್ಲಿ ಜಪ್ತಿ ಮಾಡಲಾದ ವಾಹನಗಳನ್ನು ವಾರಸುದಾರರಿಗೆ ಮಧ್ಯಂತರ ಅವಧಿಯಲ್ಲಿ ನೀಡುವ ಬಗೆಗಿನ ಕೇಂದ್ರದ ಅಧಿಸೂಚನೆಯಲ್ಲಿ ಎಲ್ಲೂ ವಿವರ ಇಲ್ಲ. ಈಗಾಗಲೇ ದೇಶದ 18 ಹೈಕೋರ್ಟ್‌ಗಳು 'ಇಂತಹ ಅಧಿಕಾರವು ವಿಚಾರಣಾ ನ್ಯಾಯಾಲಯಗಳಿಗೆ ಇದೆ ಎಂದು ತೀರ್ಪು ನೀಡಿವೆ' ಎಂದು ಪ್ರತಿಪಾದಿಸಿದ್ದರು. ಇದೇ ವಿಭಾಗೀಯ ನ್ಯಾಯಪೀಠ ಅರ್ಜಿದಾರರ ವಾದವನ್ನು ಪುರಸ್ಕರಿಸಿದೆ.

'ಮಾದಕ ವಸ್ತುಗಳ ಜೊತೆಗೆ ಅದರ ಸಾಗಣೆಗೆ ತೊಡಗುವ ವಾಹನಗಳನ್ನು ನಾಶ ಮಾಡಬೇಕು' ಎಂದು ಕೇಂದ್ರ ಸರ್ಕಾರ 2015ರ ಜನವರಿ 16ರಂದು ಅಧಿಸೂಚನೆ ಹೊರಡಿಸಿತ್ತು. ಈ ದಿಸೆಯಲ್ಲಿ ವಾಹನಗಳನ್ನು ಶಾಶ್ವತವಾಗಿ ನಾಶ ಮಾಡಲು ಕೆಲವೊಂದು ನಿರ್ದೇಶನಗಳನ್ನೂ ನೀಡಿತ್ತು. ಇದನ್ನು ಅರ್ಜಿದಾರರು ಪ್ರಶ್ನಿಸಿದ್ದರು. ಎಸ್‌ಸಿಬಿ ಪರ ಮಧುಕರ ದೇಶಪಾಂಡೆ ವಾದ ಮಂಡಿಸಿದ್ದರು.

ಸುಗ್ರೀವಾಜ್ಞೆಯಿಂದ ಉದ್ಯೋಗ ಸೃಷ್ಟಿಯಾಗುವುದೇ: ಡಿಕೆಶಿ ಪ್ರಶ್ನೆ

ಬೆಂಗಳೂರು: 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣಾ (ಮತಾಂತರ ನಿಷೇಧ) ಕಾಯ್ದೆಯನ್ನು ತರಾತುರಿಯಲ್ಲಿ ಜಾರಿಗೊಳಿಸಲು ರಾಜ್ಯ ಸರ್ಕಾರ ಜಾರಿಗೊಳಿಸಿರುವ ಸುಗ್ರೀವಾಜ್ಞೆಯಿಂದ ಉದ್ಯೋಗ ಸೃಷ್ಟಿಯಾಗುವುದೇ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

ಬುಧವಾರ ಸರಣಿ ಟ್ವೀಟ್ ಮಾಡಿರುವ ಅವರು, 'ರಾಜ್ಯದಲ್ಲಿ ಕೋಮು ದ್ವೇಷದ ಘಟನೆಗಳು ತೀವ್ರಗತಿಯಲ್ಲಿ ನಡೆಯುತ್ತಿವೆ. ಹಿಜಾಬ್‌ನಿಂದ ಆಜಾನ್‌ವರೆಗೆ ಹಲವು ವಿವಾದಗಳು ಇವೆ. ಇಂತಹ ಸಂದರ್ಭದಲ್ಲಿ ವಿಧಾನಸಭೆ, ವಿಧಾನ ಪರಿಷತ್‌ನಲ್ಲಿ ಚರ್ಚಿಸದೇ ಸುಗ್ರೀವಾಜ್ಞೆ ಮೂಲಕ ಮತಾಂತರ ನಿಷೇಧ ಮಸೂದೆಯನ್ನು ಕಾಯ್ದೆಯ ರೂಪದಲ್ಲಿ ಜಾರಿಗೆ ತರುವ ಜರೂರತ್ತು ಏನಿತ್ತು' ಎಂದು ಕೇಳಿದ್ದಾರೆ.

ಆಯೋಗದ ಅಧಿಕಾರ ಮೊಟಕು: 'ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಆದರೆ, ರಾಜ್ಯ ಸರ್ಕಾರ ಚುನಾವಣಾ ಆಯೋಗದ ಅಧಿಕಾರವನ್ನೇ ಮೊಟಕುಗೊಳಿಸಿ, ಚುನಾವಣೆ ನಡೆಸದಂತೆ ತಡೆಯುತ್ತಿದೆ' ಎಂದು ಅವರು ಪ್ರತ್ಯೇಕ ಟ್ವೀಟ್‌ನಲ್ಲಿ ದೂರಿದ್ದಾರೆ.

ತನ್ನ ಅಧಿಕಾರವನ್ನು ರಾಜ್ಯ ಸರ್ಕಾರ ಕಸಿದುಕೊಂಡಿದೆ ಎಂದು ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್‌ಗೆ ಸಲ್ಲಿಸಿರುವ ಮೆಮೊದಲ್ಲಿ ತಿಳಿಸಿದೆ. ದೇಶದಲ್ಲಿ ಪ್ರಜಾಪ್ರಭುತ್ವ ಇನ್ನೂ ಜೀವಂತವಾಗಿದೆ ಎಂದು ಹೇಳಬಹುದಾ ಎಂದು ಕೇಳಿದ್ದಾರೆ.

ಉಚಿತ ಕಂಪ್ಯೂಟರ್ ತರಬೇತಿ

ಬೆಂಗಳೂರು: ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ ಮಹಿಳಾ ಉದ್ಯಮಿಗಳು ಹಾಗೂ ಗೃಹಿಣಿಯರಿಗಾಗಿ 15 ದಿನಗಳ ಕಂಪ್ಯೂಟರ್ ತರಬೇತಿ ಶಿಬಿರ ಹಮ್ಮಿಕೊಂಡಿದೆ.

'ಬೇಸಿಕ್ ಕಂಪ್ಯೂಟರ್, ನುಡಿ, ಅಂತರ್ಜಾಲ ಹಾಗೂ ಇ-ಮೇಲ್ ಬಳಕೆ, ದೈನಂದಿನ ಬ್ಯಾಂಕಿಂಗ್ ವ್ಯವಹಾರ, ಮೊಬೈಲ್‌ನಲ್ಲಿ ಜಾಲತಾಣಗಳ ಬಳಕೆ, ಸ್ಪೋಕನ್ ಇಂಗ್ಲಿಷ್, ಧ್ಯಾನ ಮತ್ತು ಯೋಗ ಕಲಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ: ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ, 3ನೇ ಮಹಡಿ, ಚಿತ್ರಾಪುರ ಭವನ, 8ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-55. ಸಂಪರ್ಕಕ್ಕೆ: 9900158885 ಅಥವಾ 080-23463580.

ಸುಧಾ ಮಯೂರ ಓದಿ

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395

ನೋಂದಾಯಿತ ಕಚೇರಿ: 6ನೇ ಮಹಡಿ, ಬಿಎಂಟಿಸಿ ವಾಣಿಜ್ಯ ಸಂಕೀರ್ಣ, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು 560095.
ಈ-ಮೇಲ್: corporateaffairs@teamlease.com ವೆಬ್‌ಸೈಟ್: https://group.teamlease.com/

ಮಾರ್ಚ್ 31, 2022ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷಕ್ಕೆ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕಿಗಳು ಲಕ್ಷ ರೂಪಾಯಿಗಳಲ್ಲಿ)

ವಿವರಗಳು	ಏಕೀಕೃತ			ಕ್ರೋಢೀಕೃತ		
	31.03.2022ಕ್ಕೆ ಕೊನೆಯಾದ 3 ತಿಂಗಳುಗಳು	31.03.2022ಕ್ಕೆ ಕೊನೆಯಾದ 12 ತಿಂಗಳುಗಳು	31.03.2021ಕ್ಕೆ ಕೊನೆಯಾದ 3 ತಿಂಗಳುಗಳು	31.03.2022ಕ್ಕೆ ಕೊನೆಯಾದ 3 ತಿಂಗಳುಗಳು	31.03.2022ಕ್ಕೆ ಕೊನೆಯಾದ 12 ತಿಂಗಳುಗಳು	31.03.2021ಕ್ಕೆ ಕೊನೆಯಾದ 3 ತಿಂಗಳುಗಳು
	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	154,161.62	564,033.82	123,562.72	181,741.02	647,982.31	134,052.29
ಸದರಿ ಅವಧಿಗೆ ತೆರಿಗೆ ಮುನ್ನ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	2,396.97	9,624.32	2,564.32	3,432.73	11,734.32	2,536.90
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಮತ್ತು/ಅಥವಾ ಅಸಾಧಾರಣ ಐಟಂಗಳ ನಂತರ]	2,847.59	2,249.63	2,366.70	3,162.67	3,945.46	1,964.01
ತೆರಿಗೆ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)	2,856.53	2,254.09	2,392.98	3,191.25	3,932.84	2,057.95
ಪೇಯ್ಡ್-ಅಪ್ ಇಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	1,709.68	1,709.68	1,709.68	1,709.68	1,709.68	1,709.68
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಹೊರತುಪಡಿಸಿ) – ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ	66,141.89	66,141.89	63,728.97	67,611.24	67,611.24	63,492.89
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕರಣಗೊಂಡಿಲ್ಲ)						
(ಎ) ಮೂಲ	16.66	13.16	13.84	18.05	22.48	11.06
(ಬಿ) ಡೈಲ್ಯೂಟೆಡ್	16.66	13.16	13.84	18.05	22.48	11.06

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, ಮಾರ್ಚ್ 31, 2022ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷದ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಪರಿಶೋಧಿತ ಪ್ರತ್ಯೇಕ ಮತ್ತು ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಾದ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (https://group.teamlease.com/) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ ಮಾರ್ಚ್ 31, 2022ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷದ ಕ್ರೋಢೀಕೃತ ಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಳಿಯು 18ನೇ ಮೇ, 2022ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ (IND-AS) ನಲ್ಲಿ ಹೇಳಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ನಿರ್ದೇಶಕ ಮಂಡಳಿಗಾಗಿ ಮತ್ತು ಅದರ ಪರವಾಗಿ
ಸಹಿ/-
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ದಿನಾಂಕ: ಮೇ 18, 2022
ಸ್ಥಳ: ಬೆಂಗಳೂರು

ತೋಟಗಾರಿಕೆ ಇಲಾಖೆ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ,
(ರಾಜ್ಯ ವಲಯ) ತುಮಕೂರು ದೂ:0816-2278647
ಇಮೇಲ್ :sadhsstmk@gmail.com

ಸಂ:ಹಿಸತೋನಿ/ರಾವ/ತು/ವಿನಿ1/04/2022-23 ದಿನಾಂಕ: 13.05.2022

ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾವ) ತುಮಕೂರು ರವರ ಅಧೀನದ ತೋಟಗಾರಿಕೆ ಕ್ಷೇತ್ರಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ತೋಟಗಾರರ ಸೇವೆಯನ್ನು ಒದಗಿಸಲು ಏಜೆನ್ಸಿ ನೇಮಕ ಮಾಡಿಕೊಳ್ಳಲು ಇ-ಟೆಂಡರ್ ದರಗಳನ್ನು ಆಹ್ವಾನಿಸಿದ್ದು, ಆಸಕ್ತರು ದಿನಾಂಕ: **13.06.2022** ರೊಳಗೆ ಇ-ಪೋರ್ಟಲ್ ನಲ್ಲಿ ಟೆಂಡರ್‌ಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ:0816-2278647ರ ಮೂಲಕ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
(ರಾಜ್ಯ ವಲಯ) ತುಮಕೂರು.

DIPR/TUM/122/MCA/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬಸವನಗುಡಿ ವಿಭಾಗ,
ಚನ್ನಮ್ಮನಕೆರೆ ಅಚ್ಚುಕಟ್ಟು, ನಗರ ಪಾಲಿಕೆ ಕಟ್ಟಡ, ವಿದ್ಯಾಪೀಠ,
ಬಿಎಸ್‌ಕೆ 3ನೇ ಹಂತ, ಬೆಂಗಳೂರು.

ಸಂಖ್ಯೆ: ಕಾಪಾಅ/ಬ.ಗು/ಪಿಆರ್/04/2022-23 ದಿನಾಂಕ: 18.05.2022

ಟೆಂಡರ್ ಪ್ರಕಟಣೆ ರದ್ದುಪಡಿಸುವ ಬಗ್ಗೆ

ವಿಷಯ: ಟೆಂಡರ್ ರದ್ದು ಪಡಿಸುವ ಬಗ್ಗೆ
ಉಲ್ಲೇಖ: ಕಾಪಾಅ(ಬಗು)/ಇ-ಪ್ರೊಕ್/ಟೆಂಡರ್/04/2021-22
ದಿನಾಂಕ: 09.05.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) ವಿಭಾಗ ಕಚೇರಿಯಿಂದ ದಿನಾಂಕ: 09.05.2022ರಂದು ಉಲ್ಲೇಖದಂತೆ ಆಹ್ವಾನಿಸಲಾಗಿದ್ದ ಟೆಂಡರ್ ಕಾಮಗಾರಿಗಳ ಅಧಿಸೂಚನೆಯನ್ನು ಈಗಾಗಲೇ ಟೆಂಡರ್ ಪ್ರಕಟಣೆಯನ್ನು ದಿ: 09.05.2022ರಂದು ನೀಡಲಾಗಿದ್ದು, ಅದರಂತೆ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 23.05.2022 ರಂದು (4:00 ಗಂಟೆಯವರೆಗೆ) ಹಾಗೂ ಟೆಂಡರ್ ತೆರೆಯುವ ದಿನಾಂಕ: 24.05.2022 (4:30 ಗಂಟೆಯವರೆಗೆ) ಎಂದು ತಿಳಿಸಲಾಗಿರುತ್ತದೆ.

ಆದರೆ ತಾಂತ್ರಿಕ ಕಾರಣದಿಂದ ಟೆಂಡರನ್ನು ರದ್ದುಪಡಿಸಲು ಮುಖ್ಯ ಅಭಿಯಂತರರು (ದ) ರವರಿಂದ ದಿನಾಂಕ: 18.05.2022 ರಂದು ಅನುಮೋದನೆ ಪಡೆದು ಸದರಿ ಪ್ರಕಟಣೆಯನ್ನು ಹಿಂಪಡೆಯಲಾಗಿದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು – ಬಸವನಗುಡಿ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಟೀಂಲೀಸ್ ಸರ್ವೀಸಸ್ ಲಿಮಿಟೆಡ್
TeamLease® Putting India to Work

CIN: L74140KA2000PLC118395
6ನೇ ಮಹಡಿ, ಬಿಎಂಟಿಸಿ ಕಮರ್ಷಿಯಲ್ ಕಾಂಪ್ಲೆಕ್ಸ್, 80 ಅಡಿ ರಸ್ತೆ,
ಕೋರಮಂಗಲ, ಬೆಂಗಳೂರು, ಕರ್ನಾಟಕ-560095, ಭಾರತ,
ದೂರವಾಣಿ: 91 80 6824 3000 / ಫ್ಯಾಕ್ಸ್: 91 80 6824 3001
corporateaffairs@teamlease.com, https://group.teamlease.com/

ಕಂಪನಿಯ ನೋಂದಾಯಿತ ಕಛೇರಿಯನ್ನು ಬೆಂಗಳೂರು ನಗರದ ಸ್ಥಳೀಯ ಮಿತಿಯೊಳಗೆ ಸ್ಥಳಾಂತರಿಸುವ ಬಗ್ಗೆ ಸೂಚನೆ

ಮೇಲೆ ಹೇಳಿರುವ ವಿಷಯಕ್ಕೆ ಸಂಬಂಧಿಸಿದಂತೆ ಮತ್ತು **ಸೆಬಿ ಎಲ್‌ಒಡಿಆರ್** ನಿಬಂಧನೆಗಳು, 2015ರ ನಿಬಂಧನೆ 30 ಮತ್ತು 47ರ ಅನುಸಾರ, ಕಂಪನಿಯ ನಿರ್ದೇಶಕರ ಮಂಡಳಿಯು ಮೇ 18, 2022 ರಂದು ನಡೆದ ತಮ್ಮ ಸಭೆಯಲ್ಲಿ ಕಂಪನಿಯ ನೋಂದಾಯಿತ ಕಚೇರಿಯನ್ನು ಜುಲೈ 01, 2022ರಿಂದ ಜಾರಿಗೆ ಬರುವಂತೆ ಈಗಿರುವ "6ನೇ ಮಹಡಿ, ಬಿಎಂಟಿಸಿ ವಾಣಿಜ್ಯ ಸಂಕೀರ್ಣ, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು- 560095, ಕರ್ನಾಟಕ, ಭಾರತ" ವಿಳಾಸದಿಂದ "ಸಲಾರಪುರಿಯಾ ಅಸೆಂಟ್, ಕೋರಮಂಗಲ ಇಂಡಸ್ಟ್ರಿಯಲ್ ಲೇ ಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು- 560095, ಕರ್ನಾಟಕ, ಭಾರತ" ಈ ವಿಳಾಸಕ್ಕೆ ಸ್ಥಳಾಂತರಿಸಲು ಸಮ್ಮತಿಯನ್ನು ನೀಡಿದೆ ಮತ್ತು ಹೊಸ ಮತ್ತು ಈಗಿರುವ ನೋಂದಾಯಿತ ಕಛೇರಿ ವಿಳಾಸಗಳೆರಡೂ ಕಂಪನಿಗಳ ರಿಜಿಸ್ಟ್ರಾರ್, ಬೆಂಗಳೂರು ಇವರ ವ್ಯಾಪ್ತಿಯಲ್ಲಿಯೇ ಇವೆ ಎಂದು ನಾವು ಎಲ್ಲಾ ಹಿತಾಸಕ್ತಿದಾರರಿಗೆ ತಿಳಿಸಲು ಬಯಸುತ್ತೇವೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/-
ಅಲಕಾ ಚಂದ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫಿಸರ್
(M. No. F10911)

ದಿನಾಂಕ: ಮೇ 18, 2022
ಸ್ಥಳ: ಬೆಂಗಳೂರು

ಟೀಂಲೀಸ್ ಸರ್ವೀಸಸ್ ಲಿಮಿಟೆಡ್
TeamLease® Putting India to Work

CIN: L74140KA2000PLC118395
6ನೇ ಮಹಡಿ, ಬಿಎಂಟಿಸಿ ಕಮರ್ಷಿಯಲ್ ಕಾಂಪ್ಲೆಕ್ಸ್, 80 ಅಡಿ ರಸ್ತೆ,
ಕೋರಮಂಗಲ, ಬೆಂಗಳೂರು, ಕರ್ನಾಟಕ – 560095, ಭಾರತ,
ದೂರವಾಣಿ: 91 80 6824 3000 / ಫ್ಯಾಕ್ಸ್: 91 80 6824 3001
corporateaffairs@teamlease.com
https://group.teamlease.com/

ವಿಡಿಯೊ ಕಾನ್ಫರೆನ್ಸಿಂಗ್ ಅಥವಾ ಇತರ ಶ್ರವಣ-ದೃಶ್ಯ ವಿಧಾನಗಳ ಮೂಲಕ ಟೀಂಲೀಸ್ ಸರ್ವೀಸಸ್ ಲಿಮಿಟೆಡ್‌ನ ಇಪ್ಪತ್ತೆರಡನೇ (22ನೇ) ವಾರ್ಷಿಕ ಸರ್ವಸದಸ್ಯರ ಸಭೆ, ಮತ್ತು ರಿಮೋಟ್ ಇ-ವೋಟಿಂಗ್ ವಿವರಗಳ ಬಗ್ಗೆ ಸೂಚನೆ

ಮಾನದಂಡಗಳು:– **1)** ಕಳೆದ 10 ವರ್ಷಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ನೇರವಾಗಿ ಪ್ರ.ದ.ಸ/ಎ.ದ.ಸ.,/ತತ್ಸಮಾನ ಹುದ್ದೆಗಳಿಗೆ ನೇಮಕವಾಗಿರುವವರಿಗೆ ಆದ್ಯತೆ ನೀಡಲಾಗುವುದು. **2)** ನಗರಾಭಿವೃದ್ಧಿ ಇಲಾಖೆ ಮತ್ತು ಕಂದಾಯ ಇಲಾಖೆಗಳಲ್ಲಿ ಪ್ರ.ದ.ಸ/ಎ.ದ.ಸ ಹಾಗೂ ತತ್ಸಮಾನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ನಿಯೋಜನೆಗೆ ಆದ್ಯತೆ ನೀಡಲಾಗುವುದು. **3)** ನಿಯೋಜನೆಯು ಕರ್ನಾಟಕ ನಾಗರಿಕ ಸೇವಾ ನಿಯಮಗಳು 1958ರ ನಿರ್ದೇಶನಗಳಿಗೆ ಒಳಪಟ್ಟಿರುತ್ತದೆ.

ಸಹಿ/– ಆಯುಕ್ತರು, ಬೆಂ.ಅ.ಪ್ರಾ, ಬೆಂಗಳೂರು

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಕೊಪ್ಪಳ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ&ನೈ/ವಿಕೊ/ಟೆಂಡರ್/2022–23/201 ದಿನಾಂಕ:17.05.2022

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ-ಪ್ರೋಕ್ಯೂರಮೆಂಟ್ ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2021–22 ನೇ ಸಾಲಿನ ಓ & ಎಮ್ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರವೆಂಟ್ ಪೋರ್ಟ್‌ಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ:18/05/2022 ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ : **ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ**

ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ **: 18/05/2022 ಸಮಯ 10:00 ಗಂಟೆಯಿಂದ 25/05/2022 ಸಮಯ 16:00 ಗಂಟೆವರೆಗೆ**

ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ : **18/05/2022 ಸಮಯ 16:00 ಗಂಟೆಯಿಂದ 25/05/2022 ಸಮಯ 17:00 ಗಂಟೆವರೆಗೆ**

ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **26/05/2022 ರಂದು 17:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ**

ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **30/05/2022 ರಂದು ಅಥವಾ ತಾಂತ್ರಿಕ ಬಿಡ್ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದ ನಂತರ**

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ 8 ದಿವಸದೊಳಗಾಗಿ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರ ಉಮೇದುವಾರಿಕೆಯನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/85/ಎಂಸಿಎ/2022–23

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ತುಮಕೂರು

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಸಂ–03/2022–23 ದಿನಾಂಕ: 12.05.2022

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಕಾ.ನೀ.ನಿ.ನಿ, ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ಈ ಕೆಳಗೆ ನಮೂದಿಸಿದ ಇಂಡೆಂಟ್ ನಂಬರ್‌ನ 11 ಸಂಖ್ಯೆಯ ತುರ್ತು ನಿರ್ವಹಣಾ ಕಾಮಗಾರಿಗಳು ಮತ್ತು 27 ಸಂಖ್ಯೆಯ ಮಾನವ ದಿನಗಳ ಸರಬರಾಜಿನ ನಿರ್ವಹಣಾ ಕಾಮಗಾರಿಗಳಿಗೆ ಐಟಂವಾರು ಟೆಂಡರ್‌ನ್ನು ಏಕ ಲಕೋಟೆ ಪದ್ಧತಿಯಲ್ಲಿ KW-1 ಮತ್ತು KW-2 ನಿಬಂಧನೆಗಳೊಂದಿಗೆ, ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ತುರ್ತು ನಿರ್ವಹಣಾ ಕಾಮಗಾರಿಗಳು:–

(Unreserved Works)INDENT Numbers:- (1) 37847 ಟೆಂಡರ್ ಮೊತ್ತ 20.94 ಲಕ್ಷಗಳು (2) 37840 ಟೆಂಡರ್ ಮೊತ್ತ 30.20 ಲಕ್ಷಗಳು (3) 37747 ಟೆಂಡರ್ ಮೊತ್ತ 42.34 ಲಕ್ಷಗಳು (4) 37901 ಟೆಂಡರ್ ಮೊತ್ತ 42.19 ಲಕ್ಷಗಳು (5) 37788 ಟೆಂಡರ್ ಮೊತ್ತ 25.15 ಲಕ್ಷಗಳು (6) 37789 ಟೆಂಡರ್ ಮೊತ್ತ 33.63 ಲಕ್ಷಗಳು (7) 37800 ಟೆಂಡರ್ ಮೊತ್ತ 2.73 ಲಕ್ಷಗಳು

Reserved Works:- (Schedule Caste Bidders Only) INDENT Numbers:- (1) 37845–ಟೆಂಡರ್ ಮೊತ್ತ– 21.13 ಲಕ್ಷಗಳು (2) 37801 ಟೆಂಡರ್ ಮೊತ್ತ 21.17 ಲಕ್ಷಗಳು (3) 37797 ಟೆಂಡರ್ ಮೊತ್ತ–15.78 ಲಕ್ಷಗಳು

Reserved Works:-(Schedule Tribe Bidders Only) INDENT Numbers:- (1) 37842 ಟೆಂಡರ್ ಮೊತ್ತ– 21.16 ಲಕ್ಷಗಳು

ಮಾನವ ದಿನಗಳ ಸರಬರಾಜಿನ ಕಾಮಗಾರಿಗಳು:–

(Unreserved Works)INDENT Numbers:- (1) 37843 ಟೆಂಡರ್ ಮೊತ್ತ– 3.39 ಲಕ್ಷಗಳು (2) 37841 ಟೆಂಡರ್ ಮೊತ್ತ– 3.43 ಲಕ್ಷಗಳು (3) 37810 ಟೆಂಡರ್ ಮೊತ್ತ– 15.74 ಲಕ್ಷಗಳು (4) 37809 ಟೆಂಡರ್ ಮೊತ್ತ– 4.77 ಲಕ್ಷಗಳು (5) 37805 ಟೆಂಡರ್ ಮೊತ್ತ– 3.78 ಲಕ್ಷಗಳು (6) 37825 ಟೆಂಡರ್ ಮೊತ್ತ– 4.21 ಲಕ್ಷಗಳು (7) 37817 ಟೆಂಡರ್ ಮೊತ್ತ– 8.47 ಲಕ್ಷಗಳು (8) 37816 ಟೆಂಡರ್ ಮೊತ್ತ– 6.72 ಲಕ್ಷಗಳು (9) 37844 ಟೆಂಡರ್ ಮೊತ್ತ– 1.68 ಲಕ್ಷಗಳು (10) 37822 ಟೆಂಡರ್ ಮೊತ್ತ– 4.20 ಲಕ್ಷಗಳು (11) 37819 ಟೆಂಡರ್ ಮೊತ್ತ– 3.78 ಲಕ್ಷಗಳು (12) 37738 ಟೆಂಡರ್ ಮೊತ್ತ– 4.72 ಲಕ್ಷಗಳು (13) 37742 ಟೆಂಡರ್ ಮೊತ್ತ– 5.69 ಲಕ್ಷಗಳು (14) 37743 ಟೆಂಡರ್ ಮೊತ್ತ– 16.59 ಲಕ್ಷಗಳು (15) 37791 ಟೆಂಡರ್ ಮೊತ್ತ– 2.51 ಲಕ್ಷಗಳು (16) 37792 ಟೆಂಡರ್ ಮೊತ್ತ– 9.86 ಲಕ್ಷಗಳು (17) 37793 ಟೆಂಡರ್ ಮೊತ್ತ– 4.20 ಲಕ್ಷಗಳು (18) 37794 ಟೆಂಡರ್ ಮೊತ್ತ– 4.20 ಲಕ್ಷಗಳು (19) 37796 ಟೆಂಡರ್ ಮೊತ್ತ– 8.11 ಲಕ್ಷಗಳು (20) 37740 ಟೆಂಡರ್ ಮೊತ್ತ– 28.67 ಲಕ್ಷಗಳು (21) 37808 ಟೆಂಡರ್ ಮೊತ್ತ–20.09 ಲಕ್ಷಗಳು

Reserved Works:- (Schedule Caste Bidders Only) INDENT Numbers:- (1) 37739 – ಟೆಂಡರ್ ಮೊತ್ತ– 1.89 ಲಕ್ಷಗಳು (2) 37741 ಟೆಂಡರ್ ಮೊತ್ತ– 5.67 ಲಕ್ಷಗಳು (3) 37790 ಟೆಂಡರ್ ಮೊತ್ತ– 2.88 ಲಕ್ಷಗಳು (4) 37798 ಟೆಂಡರ್ ಮೊತ್ತ– 12.67 ಲಕ್ಷಗಳು

Reserved Works:-(Schedule Tribe Bidders Only) INDENT Numbers:- (1) 37820 ಟೆಂಡರ್ ಮೊತ್ತ– 17.94 ಲಕ್ಷಗಳು (2) 37745 **ಟೆಂಡರ್ ಮೊತ್ತ– 12.50 ಲಕ್ಷಗಳು.**

ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: **20.05.2022** ಸಂಜೆ 4.00 ಗಂಟೆ ವರೆಗೆ ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ :– **18.05.2022 ರಿಂದ 26.05.2022** ಸಂಜೆ 4.00 ಗಂಟೆ ರವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **27.05.2022** ಸಂಜೆ 5.00 ಗಂಟೆಗೆ ಇ.ಎಂ.ಡಿ ವಿವರ, ಕಾಲಾವಧಿ, ಕಾಮಗಾರಿಯ ವಿವರ, ಟೆಂಡರ್ ಅರ್ಹತಾ ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಸಿಸ್ಟಮ್ https://eproc.karnataka.gov.in ಮೂಲಕ ಪಡೆಯಬಹುದು

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ವಿಭಾಗ, ತುಮಕೂರು

DIPR/TUM/128/MCA/2022-23

ಉದ್ಯಾನನಗರಿಗೆ 'ಜಲದಿಗ್ಬಂಧನ'

ತುರ್ತು ಕಾಮಗಾರಿಗೂ ಅನುದಾನ ಇಲ್ಲ

ಮಳೆ ಹಾನಿ ನಿಯಂತ್ರಣ: ₹ 411 ಕೋಟಿ ಕ್ರಿಯಾಯೋಜನೆಗೆ 5 ತಿಂಗಳಾದರೂ ಸಿಕ್ಕಿಲ್ಲ ಮಂಜೂರಾತಿ

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆ ಹಾನಿ ತಪ್ಪಿಸಲು ತುರ್ತಾಗಿ ಕೈಗೊಳ್ಳಬೇಕಾದ ಕಾಮಗಾರಿಗಳ ಸಲುವಾಗಿ ಬಿಬಿಎಂಪಿಯು ₹ 411.32 ಕೋಟಿ ಪ್ರಸ್ತಾವವನ್ನು 2021ರ ಡಿಸೆಂಬರ್‌ನಲ್ಲೇ ಸರ್ಕಾರಕ್ಕೆ ಕಳುಹಿಸಿತ್ತು. ಐದು ತಿಂಗಳ ಬಳಿಕವೂ ಈ ಪ್ರಸ್ತಾವಕ್ಕೆ ಮಂಜೂರಾತಿ ಸಿಕ್ಕಿಲ್ಲ.

ತುರ್ತು ಕಾಮಗಾರಿಗಳಿಗೆ ತಕ್ಷಣವೇ ಅನುದಾನ ಬಿಡುಗಡೆ ಮಾಡುವುದಾಗಿ ವಾಗ್ದಾನ ಮಾಡಿದ್ದ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಅನುದಾನ ಬಿಡುಗಡೆಗೆ ಯಾವುದೇ ಕ್ರಮಕೈಗೊಂಡಿಲ್ಲ.

ನಗರದಲ್ಲಿ ಯಲಹಂಕ ವಲಯದಲ್ಲಿ ಸುರಿದ ಭಾರಿ ಮಳೆಗೆ ನೀರು ನುಗ್ಗಿದ್ದ ಜಕ್ಕೂರಿನ ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ (ಜೆಎನ್‌ಆರ್‌ಸಿ) ಹಾಗೂ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಸಮುಚ್ಚಯ ಪ್ರದೇಶಗಳಿಗೆ 2021ರ ನ. 23ರಂದು ಹಾಗೂ ಪೈ ಬಡಾವಣೆ, ಗೆದ್ದಲಹಳ್ಳಿ, ಹಾಗೂ ಕೆ.ಆರ್. ಪುರ ಕ್ಷೇತ್ರದ ಜಲಾವೃತ ಪ್ರದೇಶಗಳಿಗೆ ನ.24ರಂದು ಮುಖ್ಯಮಂತ್ರಿ ಭೇಟಿ ನೀಡಿದ್ದರು. ತುರ್ತಾಗಿ ಕೈಗೊಳ್ಳಬೇಕಾದ ಕಾಮಗಾರಿಗಳಿಗೆ ತಕ್ಷಣವೇ ಕ್ರಿಯಾಯೋಜನೆ ರೂಪಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಈ ಸಂದರ್ಭದಲ್ಲಿ ಸೂಚನೆ ನೀಡಿದ್ದರು. ನ.24ರಂದು ಸಭೆ ನಡೆಸಿ ಮಳೆ ಹಾನಿ ತಡೆಯಲು ಕೈಗೊಳ್ಳಬೇಕಾದ ಶಾಶ್ವತ ಕ್ರಮ ಹಾಗೂ ತುರ್ತು ಕ್ರಮಗಳಿಗೆ ಪ್ರತ್ಯೇಕ ಕ್ರಿಯಾಯೋಜನೆ ರೂಪಿಸುವಂತೆ ನಿರ್ದೇಶನ ನೀಡಿದ್ದರು.

ನಗರದಲ್ಲಿ ಭಾರಿ ಮಳೆಯ ಸಂದರ್ಭದಲ್ಲಿ ಯಲಹಂಕ ವಲಯದ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಸಮುಚ್ಚಯ, ಟಾಟಾ ನಗರ, ಜಕ್ಕೂರಿನ ಜವಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ, ಮಹದೇವಪುರ ವಲಯದ ಕಸವನಹಳ್ಳಿ, ಗೆದ್ದಲಹಳ್ಳಿ. ಆರ್.ಆರ್. ನಗರ ವಲಯದ ಪ್ರಮೋದ್ ಬಡಾವಣೆ, ದೊಡ್ಡಬಿದರಕಲ್ಲು, ಬೊಮ್ಮನಹಳ್ಳಿ ವಲಯದ ಎಚ್‌ಎಸ್‌ಆರ್ ಬಡಾವಣೆ, ದಾಸರಹಳ್ಳಿ ವಲಯದ ಗುಂಡಪ್ಪ ಬಡಾವಣೆ, ದಕ್ಷಿಣ ವಲಯದ ಕೆ.ಪಿ. ಅಗ್ರಹಾರ, ಮನುವನ, ಪಶ್ಚಿಮ ವಲಯದ ಸಣ್ಣಕ್ಕಿ ಬಯಲು, ಪೂರ್ವ ವಲಯದ ಟೆಲಿಕಾಂ ಬಡಾವಣೆ, ನಾಗವಾರ ಪಾಳ್ಯ ಹಾಗೂ ಇತರ ಪ್ರದೇಶಗಳಲ್ಲಿ ಪದೇ ಪದೇ ಸಮಸ್ಯೆ ಎದುರಾಗುತ್ತಿದೆ.

ಈ ಸಮಸ್ಯೆಯನ್ನು ತಡೆಯಲು ಪ್ರಥಮ ಹಂತದ 69.83 ಕಿ.ಮೀ ರಾಜಕಾಲುವೆ, ದ್ವಿತೀಯ ಹಂತದ 97.10 ಕಿ.ಮೀ ರಾಜಕಾಲುವೆ ಸೇರಿ ಒಟ್ಟು 157.93 ಕಿ.ಮೀ ಉದ್ದದ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸಬೇಕಿದೆ. ಒಟ್ಟು 292 ಕಾಮಗಾರಿಗಳ ಅನುಷ್ಠಾನಕ್ಕೆ ₹1,479.55 ಕೋಟಿ ಅನುದಾನದ ಅಗತ್ಯ ಇದೆ ಎಂದು ಬಿಬಿಎಂಪಿಯು 2021ರ ಡಿ.30ರಂದು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಬಳಿಕ ಜಯನಗರ ಹಾಗೂ ಬಿಟಿಎಂ ಬಡಾವಣೆ ಕ್ಷೇತ್ರಗಳ ಕಾಮಗಾರಿಗಳನ್ನು ಸೇರಿಸಲಾಗಿತ್ತು. ತುರ್ತು ಕಾಮಗಾರಿ ಕೈಗೊಳ್ಳಲು ₹ 411.32 ಕೋಟಿ ಮಂಜೂರು ಮಾಡುವಂತೆ ಕೋರಿತ್ತು. ಬಿಬಿಎಂಪಿ ವ್ಯಾಪ್ತಿಯ ರಾಜಕಾಲುವೆ ಅಭಿವೃದ್ಧಿಗೆ ₹ 1,500 ಕೋಟಿ ಒದಗಿಸುವುದಾಗಿ ಮುಖ್ಯಮಂತ್ರಿಯವರು 2022–23ನೇ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸಿದ್ದರು.

2021ರ ಡಿ. 30ರಂದು ಕಳುಹಿಸಿದ ಕ್ರಿಯಾಯೋಜನೆಗೆ ಸರ್ಕಾರದಿಂದ ಮಂಜೂರಾತಿ ಸಿಗದ ಕಾರಣ ಬಿಬಿಎಂಪಿ ಮುಖ್ಯ ಆಯುಕ್ತರು 2022ರ ಏ. 8ರಂದು ನಗರಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಮತ್ತೊಮ್ಮೆ ಪತ್ರ ಬರೆದಿದ್ದರು. ರಾಜಕಾಲುವೆ ದುರಸ್ತಿ ಕುರಿತು ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಅದರ ಪ್ರಕಾರ, '60.59 ಕಿ.ಮೀ ಉದ್ದದ ಪ್ರಥಮ ಹಂತದ ರಾಜಕಾಲುವೆ ಹಾಗೂ ₹102.87 ಕಿ.ಮೀ ಉದ್ದದ ದ್ವಿತೀಯ ಹಂತದ ರಾಜಕಾಲುವೆ ಸೇರಿ 163.45 ಕಿ.ಮೀ ಉದ್ದದ ರಾಜಕಾಲುವೆ ಅಭಿವೃದ್ಧಿಪಡಿಸಬೇಕಾಗಿದೆ. ₹ 1,500 ಕೋಟಿ ಅನುದಾನದಲ್ಲಿ ಒಟ್ಟು 306 ಕಾಮಗಾರಿಗಳನ್ನು ಕೈಗೊಳ್ಳಬೇಕಿದೆ'.

'ಇದರಲ್ಲಿ ಪ್ರಥಮ ಹಂತದ 20.40 ಕಿ.ಮೀ ರಾಜಕಾಲುವೆ, ದ್ವಿತೀಯ ಹಂತದ 31.36 ಕಿ.ಮೀ ರಾಜಕಾಲುವೆ ಸೇರಿ ಒಟ್ಟು 51.77 ಕಿ.ಮೀ. ಉದ್ದದ ರಾಜಕಾಲುವೆಗಳನ್ನು ದುರಸ್ತಿಪಡಿಸುವ 123 ಕಾಮಗಾರಿಗಳನ್ನು ₹ 495.35 ಕೋಟಿ ವೆಚ್ಚದಲ್ಲಿ ಮುಂದಿನ ಮಳೆಗಾಲದ ಒಳಗೆ ತುರ್ತಾಗಿ ಕೈಗೊಳ್ಳಬೇಕಿದೆ. ರಾಜಕಾಲುವೆ ದುರಸ್ತಿಗೆ ಅಗತ್ಯ ಇರುವ ₹ 1,500 ಕೋಟಿಯಲ್ಲಿ ₹ 495.35 ಕೋಟಿ ಅನುದಾನವನ್ನು ತಕ್ಷಣವೇ ಒದಗಿಸಬೇಕು' ಎಂದು ಬಿಬಿಎಂಪಿ ಕೋರಿತ್ತು. ಇದಾಗಿ ಒಂದೂವರೆ ತಿಂಗಳು ಕಳೆದರೂ ಸರ್ಕಾರ ಈ ಪತ್ರಕ್ಕೆ ಸ್ಪಂದಿಸಿಲ್ಲ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

112 ಕಿ.ಮೀ.ರಾಜಕಾಲುವೆ ಅಭಿವೃದ್ಧಿ

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 842 ಕಿ.ಮೀ ಉದ್ದದ ನಾಲ್ಕು ಪ್ರಮುಖ ರಾಜಕಾಲುವೆಗಳಿದ್ದು, ಇವುಗಳಲ್ಲಿ 112.53 ಕಿ.ಮೀ ಉದ್ದದ ರಾಜಕಾಲುವೆಗಳನ್ನು 2018–19, 2019–20, 2020–21ನೇ ಸಾಲಿನ ಮುಖ್ಯಮಂತ್ರಿಗಳ ನವನಗರೋತ್ಥಾನ ಕಾರ್ಯಕ್ರಮದ ಅಡಿ ಅಭಿವೃದ್ಧಿಪಡಿಸಲಾಗುತ್ತಿದೆ.

ಮಳೆ ಪ್ರದೇಶಗಳಿಗೆ ಬಸವರಾಜ ಬೊಮ್ಮಾಯಿ ಭೇಟಿ

'ರಾಜಕಾಲುವೆ ಒತ್ತುವರಿ ತೆರವಿಗೆ ನಿರ್ದಾಕ್ಷಿಣ್ಯ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಕೆಲವೆಡೆ ಜನ ರಾಜಕಾಲುವೆ ಮೇಲೆ ಮನೆ ಕಟ್ಟಿಕೊಂಡು ನೀರಿನ ಹರಿವಿಗೆ ಅಡಚಣೆ ಉಂಟುಮಾಡುತ್ತಿದ್ದಾರೆ. ಇನ್ನು ಕೆಲವು ಕಡೆ ಕಾಲುವೆಯ ದಿಕ್ಕು ಬದಲಿಸಿದ್ದಾರೆ. ರಾಜಕಾಲುವೆ ಎಲ್ಲೆಲ್ಲಿ ಒತ್ತುವರಿಯಾಗಿದೆ ಎಂದು ಗುರುತಿಸಿದ್ದೇವೆ. ಕೆಲವೇ ಜನರಿಂದಾಗಿ ಇಡೀ ಊರಿಗೆ ತೊಂದರೆ ಆಗುವುದು ಬೇಡ. ಒತ್ತುವರಿಗಳೆಲ್ಲವನ್ನೂ ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಿಂದ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ ಪ್ರದೇಶಗಳಿಗೆ ಬುಧವಾರ ಭೇಟಿ ನೀಡಿ ಪರಿಶೀಲಿಸಿದ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ಬೆಂಗಳೂರಿನಲ್ಲಿ 90 ಮಿ.ಮೀ. ಗಿಂತ ಹೆಚ್ಚು ಮಳೆ ಆದಾಗಲೆಲ್ಲ ತಗ್ಗು ಪ್ರದೇಶಗಳಿಗೆ ನೀರು ನುಗ್ಗುವುದು ಸಹಜ. ಭೌಗೋಳಿಕವಾಗಿ ಇಳಿಜಾರು ಇರುವ ಕಡೆಗಳಲ್ಲಿ ಹೆಚ್ಚು ಸಮಸ್ಯೆ ಉಂಟಾಗುತ್ತದೆ. ತಗ್ಗು ಪ್ರದೇಶದಲ್ಲಿ ನೀರಿನ ಹರಿವಿಗೆ ಅಡ್ಡಿಯಾಗುವ ಕಡೆ ಸಮಸ್ಯೆಗಳನ್ನು ಆದ್ಯತೆ ಮೇರೆಗೆ ಬಗೆಹರಿಸುತ್ತೇವೆ' ಎಂದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ 842 ಕಿ.ಮೀ ಉದ್ದದ ರಾಜಕಾಲುವೆಗಳಿದ್ದು, 400 ಕಿ.ಮೀ ಕಾಲುವೆ ಅಭಿವೃದ್ಧಿ ಆಗಿದೆ. ಕೆಲವು ಕಡೆ ಕಾಮಗಾರಿ ಬಾಕಿ ಇದೆ. ಮಳೆಯಿಂದ ಪದೇ ಪದೇ ಅನಾಹುತ ಸಂಭವಿಸುವುದನ್ನು ತಡೆಯಲು ₹ 600 ಕೋಟಿ ಮೊತ್ತದ ಕ್ರಿಯಾಯೋಜನೆ ರೂಪಿಸಿದ್ದು, ಅನುದಾನವನ್ನೂ ಒದಗಿಸಿದ್ದೇವೆ. ಈ ವರ್ಷವೇ ಕಾಮಗಾರಿ ಕೈಗೆತ್ತಿಕೊಳ್ಳಲಿದ್ದೇವೆ. ಈ ಕಾಮಗಾರಿ ಪೂರ್ಣಗೊಳ್ಳದ ಹೊರತು ಸಮಸ್ಯೆ ಬಗೆಹರಿಯುವುದಿಲ್ಲ. ದ್ವಿತೀಯ ಮತ್ತು ತೃತೀಯ ಹಂತದ ರಾಜಕಾಲುವೆಗಳನ್ನೂ ದುರಸ್ತಿಪಡಿಸಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದು ನಮ್ಮ ಉದ್ದೇಶ' ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ಕಂದಾಯ ಸಚಿವರಾದ ಆರ್. ಅಶೋಕ, ತೋಟಗಾರಿಕಾ ಸಚಿವ ಮುನಿರತ್ನ, ಶಾಸಕ ಸಿ.ಟಿ.ರವಿ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ದಕ್ಷಿಣ ವಲಯ ಆಯುಕ್ತರಾದ ತುಳಸಿ ಮದ್ದಿನೇನಿ ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಸಿ.ಎಂ. ಪರಿವೀಕ್ಷಣೆ ಇಂದು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿಗೊಳಗಾಗಿರುವ ಪ್ರದೇಶಗಳಿಗೆ ಮುಖ್ಯಮಂತ್ರಿ ಅವರು ಗುರುವಾರ ಭೇಟಿ ನೀಡಲಿದ್ದಾರೆ ಎಂದು ಕಚೇರಿಯ ಪ್ರಕಟಣೆ ತಿಳಿಸಿದೆ.

'ಶಾಶ್ವತ ಪರಹಾರ ಒದಗಿಸಿ'

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಹೊಸಕೆರೆಹಳ್ಳಿ ವಾರ್ಡ್‌ನ ದತ್ತಾತ್ರೇಯ ನಗರ ಹಾಗೂ ರಾಜರಾಜೇಶ್ವರಿ ನಗರ ಕ್ಷೇತ್ರ ವ್ಯಾಪ್ತಿಯ ಐಡಿಯಲ್ ಬಡಾವಣೆಯಲ್ಲಿ ಮಳೆಯಿಂದ ಮನೆಗಳಿಗೆ ನೀರು ನುಗ್ಗಿದ ಪ್ರದೇಶಗಳಲ್ಲಿ ಮುಖ್ಯಮಂತ್ರಿ ಅವರು ಸಂತ್ರಸ್ತರ ಅಹವಾಲು ಆಲಿಸಿದರು.

'ಮಳೆಯಿಂದ ಬದುಕೇ ನಾಶವಾಗಿದೆ. ಸರ್ವಸ್ವವನ್ನೂ ಕಳೆದುಕೊಂಡಿದ್ದೇವೆ. ಮಳೆ ಬಂದಾಗ ಭರವಸೆ ನೀಡಿ ಮರಳಿದ ಬಳಿಕ ಯಾರೂ ಇತ್ತ ತಲೆ ಹಾಕುವುದಿಲ್ಲ. ನಮಗೆ ಶಾಶ್ವತ ಪರಿಹಾರ ಬೇಕು' ಎಂದು ಸಂತ್ರಸ್ತರು ಅಳಲು ತೋಡಿಕೊಂಡರು.

'1 ಸಾವಿರಕ್ಕೂ ಅಧಿಕ ಮನೆಗಳೊಳಗೆ ನೀರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ರಾಜಕಾಲುವೆಗಳಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ ವಿವಿಧ ವಲಯಗಳ ವ್ಯಾಪ್ತಿಯ ತಗ್ಗು ಪ್ರದೇಶಗಳಲ್ಲಿ ಸಾವಿರಕ್ಕೂ ಅಧಿಕ ಮನೆಗಳಿಗೆ ನೀರು ನುಗ್ಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ಮಳೆಯಿಂದ ಸಮಸ್ಯೆ ಉಂಟಾದ ಕುರಿತು ಪಾಲಿಕೆಯ ನಿಯಂತ್ರಣ ಕೊಠಡಿಗೆ 254 ದೂರುಗಳು ಬಂದಿವೆ. 170 ಪ್ರದೇಶಗಳು ಜಲಾವೃತವಾಗಿವೆ. 34 ಮರಗಳು ಧರೆಗುರುಳಿವೆ. 60 ಇತರೆ ದೂರುಗಳು ವರದಿಯಾಗಿವೆ. ಪಾಲಿಕೆಯ ವಿಪತ್ತು ನಿರ್ವಹಣಾ ತಂಡಗಳು ಪರಿಹಾರ ಕಾರ್ಯದಲ್ಲಿ ನಿರತವಾಗಿವೆ. 200ಕ್ಕೂ ಹೆಚ್ಚು ಅಧಿಕಾರಿ ಹಾಗೂ ಸಿಬ್ಬಂದಿಗಳು ಅಹೋರಾತ್ರಿ ಕಾರ್ಯನಿರ್ವಹಿಸಿದ್ದಾರೆ.

'ಕಂದಾಯ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿಗಳು ಮನೆಗಳಿಗೆ ನೀರು ನುಗ್ಗಿರುವ ಕುರಿತು ಸಮೀಕ್ಷೆ ನಡೆಸಿ ಸಂತ್ರಸ್ತರ ನಿಖರ ಮಾಹಿತಿಯನ್ನು ಎರಡು ದಿನಗಳೊಳಗಾಗಿ ಸಂಗ್ರಹಿಸಬೇಕು ಎಂದು ಆದೇಶ ನೀಡಲಾಗಿದೆ. ಅರ್ಹ ಸಂತ್ರಸ್ತರ ಬ್ಯಾಂಕ್ ಖಾತೆಗೆ ₹ 25,000 ಮೊತ್ತವನ್ನು ನೇರವಾಗಿ ಜಮೆ ಮಾಡಲಾಗುತ್ತದೆ' ಎಂದು ಬಿಬಿಎಂಪಿ ಪ್ರಕಟಣೆಯಲ್ಲಿ ತಿಳಿಸಿದೆ.

ಪೂರ್ವ ವಲಯದ ಡಾಲರ್ಸ್ ಕಾಲೊನಿ ಹಾಗೂ ಬೊಮ್ಮನಗಲ್ಲಿ ವಲಯದ ಎಚ್.ಎಸ್.ಆರ್ ಲೇಔಟ್‌ನ 6ನೇ ಸೆಕ್ಟರ್‌ನಲ್ಲಿ ಮಳೆನೀರು ನುಗ್ಗಿದ ತಗ್ಗು ಪ್ರದೇಶಗಳಿಗೆ ಪಾಲಿಕೆಯ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಂಗಳವಾರ ರಾತ್ರಿಯೇ ಭೇಟಿ ನೀಡಿ ಪರಿಶೀಲನೆ ನಡೆಸಿದರು. 'ಸ್ಥಳೀಯರಿಗೆ ಯಾವುದೇ ರೀತಿಯ ಸಮಸ್ಯೆ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಸಂತ್ರಸ್ತರ ಅಹವಾಲುಗಳಿಗೆ ಕೂಡಲೇ ಸ್ಪಂದಿಸಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಂಕರ ಮಠ ವಾರ್ಡ್‌ನ ಜೆ.ಸಿ ನಗರ 19ನೇ ಮುಖ್ಯ ರಸ್ತೆಯ ಬಳಿ ರಾಜಕಾಲುವೆ ತುಂಬಿ ಹರಿದು ಹಲವು ಮನೆಗಳಿಗೆ ನೀರು ನುಗ್ಗಿದ ಪ್ರದೇಶಗಳಿಗೆ ಅಬಕಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಬುಧವಾರ ಭೇಟಿ ನೀಡಿ ಪರಿಶೀಲಿಸಿದರು.

'ರಾಜಕಾಲುವೆಯನ್ನು ಹೂಳನ್ನು ನಿರಂತರವಾಗಿ ತೆರವುಗೊಳಿಸಬೇಕು. ರಾಜಕಾಲುವೆಗೆ ಸಂಪರ್ಕವಿರುವ ಚರಂಡಿಗಳಲ್ಲಿ ಹೂಳೆತ್ತಿ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕು' ಎಂದು ಮುಖ್ಯ ಆಯುಕ್ತರು ಅಧಿಕಾರಿಗಳಿಗೆ ಸೂಚನೆ ನೀಡಿದರು. ರಸ್ತೆ ಬದಿ ಚರಂಡಿಗಳಲ್ಲಿ ಹೂಳೆತ್ತಿ ಹಾಗೆಯೇ ಬಿಟ್ಟಿರುವುದನ್ನು ಗಮನಿಸಿದ ಅವರು, ಹೂಳನ್ನು ತೆರವುಗೊಳಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪ್ರಮೋದ ಲೇಔಟ್‌ನ ಮನೆಯೊಂದರ ಕೊಠಡಿಯಲ್ಲಿ ಸಂಗ್ರಹವಾಗಿದ್ದ ಕೆಸರನ್ನು ಮನೆಯವರು ಸ್ವಚ್ಛಗೊಳಿಸುತ್ತಿರುವುದು –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ವಲಯವಾರು ಸರಾಸರಿ ಮಳೆ ವಿವರ	
ವಲಯ	ಮಳೆ (ಮಿ.ಮೀ)
ಯಲಹಂಕ	96.67
ಪಶ್ಚಿಮ	95.50
ದಾಸರಹಳ್ಳಿ	82.70
ಪೂರ್ವ	81.91
ದಕ್ಷಿಣ	79.44
ಮಹದೇವಪುರ	67.81
ಆರ್.ಆರ್.ನಗರ	61.89
ಬೊಮ್ಮನಹಳ್ಳಿ	55.38

ಮಂಗಳವಾರ 11.4 ಸೆಂ.ಮೀ ಗರಿಷ್ಠ ಮಳೆ ದಾಖಲು

10 ವರ್ಷದ 'ಮೇ ದಾಖಲೆ ಮಳೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿ 24 ಗಂಟೆಗಳ ಅವಧಿಯಲ್ಲಿ 11.4 ಸೆಂ.ಮೀ ಗರಿಷ್ಠ ಮಳೆ ಮಂಗಳವಾರ (ಮೇ 17) ದಾಖಲಾಗಿದೆ. ಇದು ಕಳೆದ 10 ವರ್ಷಗಳ ಮೇ ತಿಂಗಳಿನಲ್ಲಿ ಸುರಿದಿರುವ ದಾಖಲೆ ಮಳೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

1909ರ ಮೇ 6ರಂದು 15.3 ಸೆಂ.ಮೀ ಮಳೆ ಬೆಂಗಳೂರಿನಲ್ಲಿ ಸುರಿದಿತ್ತು. ಇದು ಮೇ ತಿಂಗಳಲ್ಲಿ ಒಂದು ದಿನದ ಅವಧಿಯಲ್ಲಿನ ಸಾರ್ವಕಾಲಿಕ ದಾಖಲೆ ಮಳೆ ಎಂದು ಇಲಾಖೆ ವರದಿ ಮಾಡಿದೆ. 2012ರಿಂದ ಈ ವರ್ಷದ ಮೇನಲ್ಲಿ ಮಂಗಳವಾರ ಸುರಿದ ಮಳೆಯು ದಿನದಲ್ಲೇ ಅಧಿಕ ಎನ್ನಲಾಗಿದೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಹಾಗೂ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಎಂಡಿಸಿ) ಆವರಣದಲ್ಲಿ ತಲಾ 13 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಹೆಸರಘಟ್ಟ 10, ಎಚ್‌ಎಎಲ್ 8.6 ಹಾಗೂ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎಎಲ್) 6.6 ಸೆಂ.ಮೀ ಮಳೆ ದಾಖಲಾಗಿದೆ.

ಮೇ 1ರಿಂದ ಈವರೆಗೆ ಬೆಂಗಳೂರು ನಗರದಲ್ಲಿ ಒಟ್ಟು 40 ಸೆಂ.ಮೀ.ವರೆಗೆ ಮಳೆಯಾಗಿದೆ. ಇದೇ ಅವಧಿಯಲ್ಲಿ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಸುಮಾರು 37 ಸೆಂ.ಮೀ ಮಳೆ ದಾಖಲಾಗಿದೆ. ನಗರದಲ್ಲಿ ಮೇ 20ರ ನಂತರ ಮಳೆ ತಗ್ಗುವ ಸಾಧ್ಯತೆ ಇದೆ.

'ಹಿಂದಿನ 10 ವರ್ಷಗಳ ಮೇ ತಿಂಗಳ ಗರಿಷ್ಠ ಮಳೆಯ ಪ್ರಮಾಣವನ್ನು ಗಮನಿಸಿದರೆ, ಮಂಗಳವಾರ ಸುರಿದಿರುವ ಮಳೆ ದಾಖಲೆ ಬರೆದಿದೆ. ಇದು ಇಡೀ ಬೆಂಗಳೂರಿನಲ್ಲಿ 24 ಗಂಟೆಗಳಲ್ಲಿ ದಾಖಲಾಗಿರುವ ಗರಿಷ್ಠ ಮಳೆ. ಉಳಿದಂತೆ ನಗರದ ವಿವಿಧ ಸ್ಥಳಗಳಲ್ಲಿ ಕೆಲ ಕಾಲ ಹೆಚ್ಚು ಮಳೆ ವರದಿಯಾಗಿದೆ' ಎಂದು ಹವಾಮಾನ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಮೇ ತಿಂಗಳಲ್ಲಿ ದಾಖಲಾದ ಗರಿಷ್ಠ ಮಳೆ

ವರ್ಷ	ದಿನಾಂಕ	ಮಳೆ ಪ್ರಮಾಣ (ಸೆಂ.ಮೀ.ಗಳಲ್ಲಿ)
2021	13	3.5
2020	25	3.3
2019	1	3.7
2018	11	4.9
2017	27	8.3
2016	7	4.6
2015	17	6.6
2014	28	1.9
2013	23	3.6
2012	16	4.9

(ಹವಾಮಾನ ಇಲಾಖೆ ಮಾಹಿತಿ)

'ಬಿಜೆಪಿಗರ ಆಸ್ತಿ ಹರಾಜು ಹಾಕಿ ಪರಿಹಾರ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟ ಬಿಜೆಪಿ ನಾಯಕರ ಆಸ್ತಿ ಹರಾಜು ಹಾಕಿ, ಆ ಹಣದಿಂದ ಮಳೆಹಾನಿ ಸಂತ್ರಸ್ತರಿಗೆ ಪರಿಹಾರ ಕೊಡಬೇಕು' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಬೆಂಗಳೂರು ಘಟಕದ ಅಧ್ಯಕ್ಷ ಮೋಹನ್ ದಾಸರಿ ಹೇಳಿದರು.

ಮಾಧ್ಯಮಗಳ ಜತೆ ಬುಧವಾರ ಮಾತನಾಡಿದ ಅವರು,'ಬೆಂಗಳೂರಿನ ಜನ ಮಳೆಗೆ ತತ್ತರಿಸಿ, ಇಬ್ಬರು ಪ್ರಾಣ ಕಳೆದುಕೊಂಡಿರುವುದಕ್ಕೆ ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಹಾಗೂ ಬೇಜವಾಬ್ದಾರಿಯೇ ಕಾರಣ' ಎಂದು ದೂರಿದರು.

'ಬಿಜೆಪಿ ಸರ್ಕಾರ ರಾಜಕಾಲುವೆ ಹೆಸರಿನಲ್ಲಿ ಸಾವಿರಾರು ಕೋಟಿ ಲೂಟಿ ಮಾಡಿರುವ ಪರಿಣಾಮ, ಜನರು ರಸ್ತೆಗಳಲ್ಲಿ ಓಡಾಡಲು ದೋಣಿ ಬಳಸಬೇಕಾದ ಪರಿಸ್ಥಿತಿ ಎದುರಾಗಿದೆ. ಮಳೆಗಾಲ ಬಂದರೆ ಜೀವ ಭಯದಲ್ಲೇ ಜನ ದಿನ ಕಳೆಯುತ್ತಿದ್ದು, ಮಂಗಳವಾರ ರಾತ್ರಿ ಸುರಿದ ಮಳೆಗೆ ಇಬ್ಬರು ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಈ ಅನಾಹುತಗಳಿಗೆ ಕಾರಣವಾಗಿರುವ ರಾಜಕಾಲುವೆ ಒತ್ತುವರಿಗೆ ಮುಕ್ತಿಯೇ ಇಲ್ಲವಾಗಿದೆ. ನಗರದ ಬಹುತೇಕ ಆಸ್ಪತ್ರೆಗಳು, ವಾಣಿಜ್ಯ ಕಟ್ಟಡಗಳಿಗಾಗಿ ಉದ್ಯಮಿಗಳು, ರಾಜಕಾರಣಿಗಳು ಸೇರಿದಂತೆ ಹಲವು ಪ್ರಭಾವಿಗಳು ರಾಜಕಾಲುವೆ ಒತ್ತುವರಿ ಮಾಡಿಕೊಂಡಿದ್ದಾರೆ. ಇವುಗಳ ತೆರವು ಕಾರ್ಯಾಚರಣೆ ನಡೆಯುತ್ತಿಲ್ಲ' ಎಂದರು.

'ರಾಜಕಾಲುವೆ ಒತ್ತುವರಿ ಜಾಗದಲ್ಲಿರುವ 714 ಕಟ್ಟಡಗಳ ತೆರವಿಗೆ ಪಾಲಿಕೆ ಪಟ್ಟಿ ಸಿದ್ಧಪಡಿಸಿತ್ತು. ಆದರೆ, ಪಾಲಿಕೆ ಅಧಿಕಾರಿಗಳು ಒತ್ತುವರಿ ತೆರವು ಮಾಡಲು ಮೀನಮೇಷ ಎಣಿಸುತ್ತಿದ್ದಾರೆ' ಎಂದರು.

ಬೆಂಗಳೂರನ್ನು ಈಜುಕೊಳ ಮಾಡುತ್ತಿರುವ ಬಿಜೆಪಿ: ಎಚ್‌.ಡಿ.ಕುಮಾರಸ್ವಾಮಿ ಟೀಕೆ

ಬೆಂಗಳೂರು: 'ಬೆಂಗಳೂರನ್ನು ಸ್ಮಾರ್ಟ್ ಸಿಟಿ ಮಾಡುತ್ತೇವೆ ಎಂದು ಹೊರಟ ಬಿಜೆಪಿ ಸರ್ಕಾರ, ಈಜುಕೊಳ ಮಾಡಲು ಹೊರಟಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಬುಧವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಒಂದು ದಿನ ಸುರಿದ ಮಳೆ ಬಿಜೆಪಿ ಒಂದು ಬುರುಡೆ ಪಕ್ಷ ಎಂಬುದನ್ನು ಬಯಲು ಮಾಡಿದೆ. ಕೆಂಪೇಗೌಡರು ಕಟ್ಟಿದ ಭವ್ಯ ಬೆಂಗಳೂರಿನಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ರಸ್ತೆಗಳು ರಾಜಕಾಲುವೆಗಳಾಗಿ, ಮನೆಗಳು ಕೆರೆಗಳಾಗಿವೆ' ಎಂದಿದ್ದಾರೆ.

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 04/2022–23
ದಿನಾಂಕ: 12.05.2022
ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–Iರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.
ಕರ್ನಾಟಕ ರಾಜ್ಯದ ರಾಜ್ಯಪಾಲಕ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್ ಏಕ–ಲಕೋಟೆ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://eproc.karnataka.gov.in ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 13.06.2022ರ 16.30ರವರೆಗೆ. (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 14.06.2022ರಂದು 16.35 ನಂತರ. (3) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ.
ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಚಿಕ್ಕಬಳ್ಳಾಪುರ.
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ78/ಎಂಸಿಎ/2022–23
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೋಲಾರ
ದೂರವಾಣಿ ಸಂಖ್ಯೆ:08152–297070/297071
ಸಂಖ್ಯೆ:ಕೃಉಮಾಸ:ಕೋ:63:2022–23 ದಿನಾಂಕ:05.05.2022
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
(ಸ್ವಚ್ಛತಾ ಸೇವೆಯ ಟೆಂಡರ್)
ಕೋಲಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಸಮಿತಿಯ ಎಲ್ಲಾ ಕಟ್ಟಡಗಳ ಅಕ್ಕ–ಪಕ್ಕ ಹಾಗೂ ಪೇಟೆ ಕಾರ್ಯಕರ್ತರ ಎಲ್ಲಾ ಅಂಗಡಿ–ವಾ–ಗೋದಾಮುಗಳು, ಹರಾಜುಕಟ್ಟೆಗಳು, ಸಮಿತಿಯ ಕಾಂಪೌಂಡ್ ಒಳಗೆ ಮತ್ತು ಹೊರಗೆ, ಕೃಷಿ ಉತ್ಪನ್ನಗಳ ವಹಿವಾಟು ನಡೆಯುವ ಸ್ಥಳ, ರಸ್ತೆಗಳಲ್ಲಿ ಹಾಗೂ ಎಲ್ಲಾ ಚರಂಡಿಗಳಲ್ಲಿ ಶೇಖರಣೆಯಾಗುವ ಕಸ–ಕಡ್ಡಿ, ತರಕಾರಿ ಹಾಗೂ ಟೊಮೊಟೊ ತ್ಯಾಜ್ಯವನ್ನು ಕಾರ್ಮಿಕರಿಂದ ಗುಡಿಸಿ ಶೇಖರಿಸಿ ಅವರದೇ ಟ್ರಾಕ್ಟರುಗಳ ಮೂಲಕ ಪ್ರಾಂಗಣದಿಂದ ಹೊರಗೆ ಸಾಗಿಸಿ ಪರಿಸರ ಹಾಳಾಗದಂತೆ ಜನವಸತಿ ಪ್ರದೇಶಗಳಿಂದ ದೂರದಲ್ಲಿ ಜಮೀನು ವ್ಯವಸ್ಥೆ ಮಾಡಿಕೊಂಡು ಯಾವುದೇ ದೂರುಗಳಿಗೆ ಆಸ್ಪದವಾಗದಂತೆ ವಿಲೇಗೊಳಿಸುವ ಕೆಲಸಕ್ಕಾಗಿ 2022–23ನೇ ಸಾಲಿಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ 31.05.2023ರವರೆಗಿನ ಅವಧಿಗೆ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಲು ಕಾರ್ಮಿಕ ಇಲಾಖೆಯಿಂದ ಪರವಾನಗಿ ಪಡೆದಿರುವ ವ್ಯಕ್ತಿ/ ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ.ರೂ.50,000, ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:06.06.2022 ಸಂಜೆ 5.00 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ:10.06.2022 ಬೆಳಿಗ್ಗೆ 11.00 ಗಂಟೆಗೆ. ವಿವರವಾದ ಟೆಂಡರ್ ಪ್ರಕಟಣೆಯನ್ನು ಹಾಗೂ ಟೆಂಡರ್ ಷರತ್ತು–ವಾ–ನಿಬಂಧನೆಗಳನ್ನು ಕರ್ನಾಟಕ ಸರ್ಕಾರದ ವೆಬ್‌ಸೈಟ್: www.eproc.karnataka.gov.in ನಲ್ಲಿ ಅಥವಾ ಸರ್ಕಾರದ ಸಹಾಯವಾಣಿ ಸಂಖ್ಯೆ:080–25501216/25501227 ರಲ್ಲಿ ಅಥವಾ ಈ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– (ಎನ್.ವಿಜಯಲಕ್ಷ್ಮಿ) ಕಾರ್ಯದರ್ಶಿ
ಸಹಿ/– (ವೆಂಕಟ್ ರಾಜಾ) ಆಡಳಿತಾಧಿಕಾರಿಗಳು
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 81/ಎಂ.ಸಿ.ಎ/2022–23
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಎಚ್‌ಎಸ್‌ಆರ್ ಲೇಔಟ್ 14ನೇ ಕ್ರಾಸ್‌ನಲ್ಲಿ ಮನೆಗಳಿಗೆ ನೀರು ನುಗ್ಗಿರುವುದು

ಅಪಾರ್ಟ್‌ಮೆಂಟ್‌ಗೆ ನೀರು ನುಗ್ಗಿ ಅವಾಂತರ

ಯಲಹಂಕ: ಮಂಗಳವಾರ ರಾತ್ರಿ ಯಲಹಂಕ ಸುತ್ತಮುತ್ತ ಸುರಿದ ಭಾರಿ ಮಳೆಗೆ ರಾಜಕಾಲುವೆ ತುಂಬಿಹರಿದು ಕೋಗಿಲು ವೃತ್ತದ ಬಳಿಯಿರುವ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ನೀರು ನುಗ್ಗಿದ ಪರಿಣಾಮ, ಪಾರ್ಕಿಂಗ್ ಪ್ರದೇಶ ಜಲಾವೃತಗೊಂಡು ನಿವಾಸಿಗಳು ತೊಂದರೆ ಅನುಭವಿಸಿದರು.

2021ರ ನವೆಂಬರ್ ತಿಂಗಳಲ್ಲಿ ಸುರಿದ ಭಾರಿ ಮಳೆಗೆ ಯಲಹಂಕ ಕೆರೆ ಕೋಡಿ ಹರಿದ ಪರಿಣಾಮ, ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಮೂರ್ನಾಲ್ಕು ದಿನ ಜಲದಿಗ್ಬಂಧನಕ್ಕೆ ಒಳಗಾಗಿತ್ತು. ಮೂರ್ನಾಲ್ಕು ಅಡಿಗಳಷ್ಟು ನೀರುಸಂಗ್ರಹವಾಗಿ ನಿವಾಸಿಗಳು ಹೊರಬರಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಶಾಸಕ ಎಸ್.ಆರ್. ವಿಶ್ವನಾಥ್, ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ಅಧಿಕಾರಿಗಳಿಗೆ ಆದೇಶಿಸಿದ್ದರು. ಅಂದಿನಿಂದಲೂ ರಾಜಕಾಲುವೆ ಕಾಮಗಾರಿ ಭರದಿಂದ ಸಾಗುತ್ತಿದೆ.

ರಾತ್ರಿ ಸುರಿದ ಭಾರಿ ಮಳೆಗೆ ಕೋಗಿಲು ವೃತ್ತದ ಬಳಿಯ ರಾಜಕಾಲುವೆಯಲ್ಲಿ ನೀರು ಮುಂದಕ್ಕೆ ಹರಿಯದೆ, ಹಿಮ್ಮುಖವಾಗಿ ಹರಿದ ಪರಿಣಾಮ, ಅಪಾರ್ಟ್‌ಮೆಂಟ್‌ನ ಪಾರ್ಕಿಂಗ್ ಪ್ರದೇಶದಲ್ಲಿ ನೀರುನಿಂತು ಸಮಸ್ಯೆಯಾಗಿತ್ತು.

ಅಸ್ಸಾಂ: ಪ್ರವಾಹ ಪರಿಸ್ಥಿತಿ ಅಲ್ಪ ಸುಧಾರಣೆ

ಗುವಾಹಟಿ (ಪಿಟಿಐ): ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಪ್ರವಾಹದಲ್ಲಿ ಸಿಲುಕಿರುವ ಅಸ್ಸಾಂನಲ್ಲಿ ಬುಧವಾರ ಪರಿಸ್ಥಿತಿ ಅಲ್ಪಮಟ್ಟಿಗೆ ಸುಧಾರಿಸಿದೆ. ಆದಾಗ್ಯೂ ದಕ್ಷಿಣ ಅಸ್ಸಾಂನಲ್ಲಿ ಮನೆಯಿಂದ ಹೊರಬರ|ದಂತೆ ನಾಗರಿಕರಿಗೆ ಎಚ್ಚರಿಕೆ ನೀಡಲಾಗಿದೆ.

ಬುಧವಾರ ಅಸ್ಸಾಂ–ಅಗರ್ತಲಾ ರಾಷ್ಟ್ರೀಯ ಹೆದ್ದಾರಿಯನ್ನು ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.

ಹಲವೆಡೆ ಭೂಕುಸಿತ ಸಂಭವಿಸಿರುವುದರಿಂದ ರೈಲುಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯ ಉಂಟಾಗಿದೆ. ಹೀಗಾಗಿ ಅಸ್ಸಾಂ ಮತ್ತು ಬಿಹಾರ ರಾಜ್ಯಗಳಿಗೆ ಅಗತ್ಯ ವಸ್ತುಗಳ ಸಾಗಣೆಗೆ ತೊಡಕುಂಟಾಗುವ ಭೀತಿ ಎದುರಾಗಿದೆ. ಈ ಬೆನ್ನಲ್ಲೇ ಬಿಹಾರ ಸರ್ಕಾರ ಪೆಟ್ರೋಲ್ ಡೀಸೆಲ್ ಖರೀದಿಗೆ ಮಿತಿ ಹೇರಿದೆ. ಬಾಂಗ್ಲಾದೇಶದ ಚಿತ್ತಗಾಂಗ್ ಬಂದರಿನ ಮೂಲಕ ಅಗತ್ಯ ವಸ್ತುಗಳನ್ನು ಪಡೆಯುವ ಬಗ್ಗೆ ಚಿಂತನೆ ನಡೆಸುತ್ತಿದೆ.

ದಿಬ್ಬ ನಿರ್ಮಾಣ: ಪ್ರವಾಹ ಸಂದರ್ಭದಲ್ಲಿ ವನ್ಯಜೀವಿಗಳು ರಕ್ಷಣೆ ಪಡೆಯಲು ಕಾಜಿರಂಗ ರಾಷ್ಟ್ರೀಯ ಉದ್ಯಾನವನ ಮತ್ತಿತರ ಅರಣ್ಯ ಪ್ರದೇಶಗಳಲ್ಲಿ ವೈಜ್ಞಾನಿಕವಾಗಿ ವಿನ್ಯಾಸಗೊಳಿಸಲಾದ 40 ನೂತನ ದಿಬ್ಬಗಳನ್ನು ನಿರ್ಮಾಣ ಮಾಡಲಾಗಿದೆ.

ನಗರದಲ್ಲಿ ಇಂದು

ಸರ್ಕಾರಿ ಶಾಲಾ ಎಲ್.ಕೆ.ಜಿ ವಿದ್ಯಾರ್ಥಿಗಳಿಗೆ ಅಕ್ಷರಾಭ್ಯಾಸ: ಸಾನ್ನಿಧ್ಯ–ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿಗಳು–ಡಿ.ವಿ.ಸದಾನಂದಗೌಡ, ಅಧ್ಯಕ್ಷತೆ–ಕೆ.ಗೋಪಾಲಯ್ಯ, ಉದ್ಘಾಟನೆ–ಬಿ.ಸಿ. ನಾಗೇಶ್, ಸ್ಥಳ–ಅಟಲ್ ಬಿಹಾರಿ ವಾಜಪೇಯಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಕಮಲಾನಗರ, ಬೆಳಿಗ್ಗೆ 10

'ಭಾರತೀಯ ಜ್ಞಾನ ವ್ಯವಸ್ಥೆ' ಕುರಿತು ದತ್ತಿ ಉಪನ್ಯಾಸ: ಪ್ರೊ.ಕೆ.ಇ.ದಯಾನಂದ, ಅಧ್ಯಕ್ಷತೆ–ವೂಡೇ ಪಿ.ಕೃಷ್ಣ, ಆಯೋಜನೆ–ದಿ ಮಿಥಿಕ್ ಸೊಸೈಟಿ, ಶೇಷಾದ್ರಿಪುರ ಕಾಲೇಜು, ಸ್ಥಳ–ಶೇಷಾದ್ರಿಪುರ ಕಾಲೇಜಿನ ಸಭಾಂಗಣ, ಬೆಳಿಗ್ಗೆ 10.30

ದಿವಾಕರ ಹೆಗಡೆ ಅವರಿಂದ ಏಕವ್ಯಕ್ತಿ ತಾಳಮದ್ದಳೆ: ಪ್ರಸಂಗ–ಅನಭಿಷಿಕ್ತ, ಆಯೋಜನೆ ಮತ್ತು ಸ್ಥಳ–ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಎನ್.ಆರ್. ಕಾಲೊನಿ, ಸಂಜೆ 6

ಸಹನಾ ಶ್ರೀವತ್ಸ ಅವರಿಂದ ವೀಣಾ ವಾದನ: ಮೃದಂಗ–ಆರ್. ವಿಶ್ವನಾಥ್, ಸ್ಥಳ–ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಸಹನಾ ಶ್ರೀವತ್ಸ

ಬಿಜೆಪಿ ಮುಖಂಡ ಆತ್ಮಹತ್ಯೆ: ಗೆಳತಿ ಬಂಧನ

ಬೆಂಗಳೂರು: ಹೆರೋಹಳ್ಳಿ ವಾರ್ಡ್‌ನ ಬಿಜೆಪಿ ಮುಖಂಡ ಬಿ.ಪಿ. ಅನಂತರಾಜು (46) ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರ ಗೆಳತಿ ರೇಖಾ (38) ಎಂಬುವರನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೆ.ಆರ್.ಪುರ ನಿವಾಸಿಯಾದ ರೇಖಾ ತನ್ನ ಪತಿಯನ್ನು ಹನಿ ಟ್ರ್ಯಾಪ್ ಜಾಲಕ್ಕೆ ಸಿಲುಕಿಸಿದ್ದಳು. ಹೀಗಾಗಿಯೇ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿ ಅನಂತರಾಜು ಪತ್ನಿ ಪೊಲೀಸರಿಗೆ ದೂರು ನೀಡಿದ್ದರು.

'ಅನಂತರಾಜು ಆತ್ಮಹತ್ಯೆಯ ವಿಷಯ ತಿಳಿದೊಡನೆ ರೇಖಾ ನಾಪತ್ತೆಯಾಗಿದ್ದರು. ಮಂಗಳವಾರ ಮಧ್ಯಾಹ್ನ ಆಕೆಯನ್ನು ಬಂಧಿಸಲಾಗಿದೆ' ಎಂದು ಬ್ಯಾಡರಹಳ್ಳಿ ಠಾಣೆ ಮೂಲಗಳು ತಿಳಿಸಿವೆ.

'ಅನಂತರಾಜು ಹಾಗೂ ರೇಖಾ ಆರು ವರ್ಷಗಳಿಂದ ಪರಿಚಿತರಾಗಿದ್ದರು. ಅನಂತರಾಜು ಮನೆಯಲ್ಲಿ ಸಿಕ್ಕಿದ್ದ ಮರಣ ಪತ್ರದಲ್ಲಿ ಆಕೆಯ ಹೆಸರೂ ಇತ್ತು. ಈ ಪ್ರಕರಣದಲ್ಲಿ ರೇಖಾ ಪತಿ ವಿನೋದ್ ಹಾಗೂ ಆಕೆಯ ಸ್ನೇಹಿತೆಯ ಪಾತ್ರವಿಲ್ಲ' ಎಂದೂ ಮೂಲಗಳು ಹೇಳಿವೆ.

'ರೇಖಾ ಹಾಗೂ ಅನಂತರಾಜು ದೈಹಿಕ ಸಂಪರ್ಕ ಹೊಂದಿದ್ದರು. ಇದನ್ನು ನೋಡಿದ್ದ ಪತ್ನಿ ಇಬ್ಬರಿಗೂ ಎಚ್ಚರಿಕೆ ಕೊಟ್ಟಿದ್ದರು. ಆ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಈ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದೂ ಮಾಹಿತಿ ನೀಡಿವೆ.

ಶಿಕ್ಷಣ ಮತ್ತು ಉದ್ಯೋಗ ಉತ್ತೇಜಿಸಲು 'ಯುವ ನೀತಿ'

ಒಂದನೇ ಪುಟದಿಂದ...

2021–22ರಲ್ಲಿ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ 2.11 ಕೋಟಿ (ಶೇಕಡ 29) ಮಂದಿ ಯುವಜನರೇ ಇದ್ದಾರೆ ಎಂಬ ಮಾಹಿತಿ ಕರಡಿನಲ್ಲಿದೆ.

ಯುವಜನರು ಶಿಕ್ಷಣದಿಂದ ಹೊರಗುಳಿಯದಂತೆ ಎಚ್ಚರ ವಹಿಸಬೇಕು. ಇದಕ್ಕಾಗಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ವಿಶೇಷ ನಿಗಾ ಇರಿಸುವುದು, ಯುವಜನರನ್ನು ವ್ಯಸನಗಳಿಂದ ಮುಕ್ತಗೊಳಿಸಲು ವಿಶೇಷ ಕಾರ್ಯಕ್ರಮ ನಡೆಸುವುದು, ನಿಯಮಿತ ಆರೋಗ್ಯ ತಪಾಸಣೆ ಮತ್ತು ದೈಹಿಕ ಸಾಮರ್ಥ್ಯ ಕಾಪಾಡಿಕೊಳ್ಳಲು ಸೌಲಭ್ಯ ಒದಗಿಸುವುದು, ಕ್ರೀಡಾ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕೆಂಬ ಶಿಫಾರಸು ಮಾಡಲಾಗಿದೆ.

ಇಲಾಖೆ ಪುನರ್‌ರಚನೆಗೂ ಸಲಹೆ: ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯನ್ನು ಪುನರ್‌ರಚನೆ ಮಾಡಬೇಕು. ಯುವಜನ ಸಬಲೀಕರಣ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಪ್ರತ್ಯೇಕವಾದ ನಿರ್ದೇಶನಾಲಯಗಳನ್ನು ಸ್ಥಾಪಿಸಬೇಕು ಎಂಬ ಸಲಹೆಯನ್ನೂ ಕರಡು ನೀತಿಯಲ್ಲಿ ನೀಡಲಾಗಿದೆ. ಪ್ರತ್ಯೇಕ ಯುವ ಬಜೆಟ್ ರೂಪಿಸಬೇಕೆಂಬ ಶಿಫಾರಸನ್ನೂ ಮಾಡಲಾಗಿದೆ.

ನಟಿ ಸಾವು: 'ಶಸ್ತ್ರಚಿಕಿತ್ಸೆಗೆ ಪರವಾನಗಿ ಪಡೆಯದ ಕೇಂದ್ರ'

ಬೆಂಗಳೂರು: 'ರಾಜಾಜಿನಗರದ ಡಾ. ಶೆಟ್ಟೀಸ್ ಕಾಸ್ಮೆಟಿಕ್ ಸೆಂಟರ್ ಶಸ್ತ್ರಚಿಕಿತ್ಸೆ ನಡೆಸಲು ಪರವಾನಗಿ ಹೊಂದಿರಲಿಲ್ಲ. ಪಾಲಿಕ್ಲಿನಿಕ್ ಪರವಾನಗಿ ಮಾತ್ರ ಹೊಂದಿದೆ' ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದರು.

ಅನುಮಾನಾಸ್ಪದವಾಗಿ ಮೃತಪಟ್ಟ ಕಿರುತೆರೆ ನಟಿ ಚೇತನಾ ರಾಜ್, ದೇಹದಲ್ಲಿದ್ದ ಕೊಬ್ಬಿನಾಂಶ (ಫ್ಯಾಟ್) ಕರಗಿಸಿಕೊಳ್ಳಲು ಈ ಕೇಂದ್ರದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. 'ಮೇಲ್ನೋಟಕ್ಕೆ ಕಾನೂನಿನ ಉಲ್ಲಂಘನೆಯಾಗಿದೆ.ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿ ಅಧೀನದಲ್ಲಿರುವ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ (ಕೆಪಿಎಂಇ) ಸಮಿತಿ ಅಲ್ಲಿನ ವೈದ್ಯಕೀಯ ಸೌಲಭ್ಯದ ಬಗ್ಗೆ ಪರಿಶೀಲಿಸಿ, ಕ್ರಮಕೈಗೊಳ್ಳಲಿದೆ' ಎಂದು ಡಿ. ರಂದೀಪ್ ಹೇಳಿದರು.

ಕೆಪಿಎಂಇ ಉಪನಿರ್ದೇಶಕ ಡಾ. ವಿವೇಕ್ ದೊರೈ ನೇತೃತ್ವದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಅಧಿಕಾರಿ ಹಾಗೂ ತಾಲ್ಲೂಕು ಆರೋಗ್ಯ ಅಧಿಕಾರಿ ಸ್ಥಳಕ್ಕೆ ಬುಧವಾರ ಭೇಟಿ ನೀಡಿದ್ದಾರೆ. ಆದರೆ, ಮಂಗಳವಾರದಿಂದಲೇ ಈ ಕೇಂದ್ರ ಬಾಗಿಲು ಮುಚ್ಚಿದೆ.

'ಈ ಸಂಬಂಧ 24 ಗಂಟೆಗಳಲ್ಲಿ ಉತ್ತರಿಸುವಂತೆ ಕೇಂದ್ರಕ್ಕೆ ನೋಟಿಸ್ ನೀಡಲಾಗಿದೆ. ಅವರು ಉತ್ತರ ನೀಡಿದರೂ, ನೀಡದಿದ್ದರೂ ಬೆಂಗಳೂರು ನಗರ ಜಿಲ್ಲಾಧಿಕಾರಿ ಅಧೀನ ಸಮಿತಿಯು ಕೇಂದ್ರದ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಲಿದೆ. ಕೇಂದ್ರವು ಪಾಲಿಕ್ಲಿನಿಕ್ ಪರವಾನಗಿ ಹೊಂದಿದೆ. ಹೆಚ್ಚೆಂದರೆ ಗಾಯ ಅಥವಾ ಶಸ್ತ್ರಚಿಕಿತ್ಸೆಗೆ ಹೊಲಿಗೆ ಹಾಕಬಹುದು' ಎಂದು ಡಾ. ವಿವೇಕ್ ದೊರೈ ತಿಳಿಸಿದರು. 'ಈ ಘಟನೆ ಬಗ್ಗೆ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸಕ ತಜ್ಞರ ಅಭಿಪ್ರಾಯವನ್ನೂ ಪಡೆದು, ಬಳಿಕ ಡಾ. ಶೆಟ್ಟೀಸ್ ಕಾಸ್ಮೆಟಿಕ್ ಸೆಂಟರ್ ಮುಚ್ಚಿಸಲಾಗುತ್ತದೆ' ಎಂದು ವಿವರಿಸಿದರು.

'ಬೆಂಗಳೂರು ದರ್ಶನ' ಸಂಪುಟ: ರಿಯಾಯಿತಿ ವಿಸ್ತರಣೆ

ಬೆಂಗಳೂರು: ಉದಯಭಾನು ಕಲಾ ಸಂಘವು ತನ್ನ 58ನೇ ಸಂಸ್ಥಾಪನಾ ದಿನಾಚರಣೆ ಹಾಗೂ ವಿಶ್ವ ಪುಸ್ತಕ ದಿನಾಚರಣೆ ಅಂಗವಾಗಿ 'ಬೆಂಗಳೂರು ದರ್ಶನ' ತ್ರಿವಳಿ ಸಂಪುಟವನ್ನು ರಿಯಾಯಿತಿ ದರ ದಲ್ಲಿ ಮಾರಾಟ ಮಾಡುತ್ತಿದ್ದು, ಇದರ ದಿನಾಂಕವನ್ನು ಈ ತಿಂಗಳ ಅಂತ್ಯದವರೆಗೂ ವಿಸ್ತರಿಸಿದೆ.

'ತಲಾ 1 ಸಾವಿರ ಪುಟಗಳು ಹಾಗೂ 7 ಸಾವಿರಕ್ಕೂ ಹೆಚ್ಚು ಚಿತ್ರಗಳನ್ನು ಒಳಗೊಂಡಿರುವ ಈ ಸಂಪುಟಗಳು ನಗರದ ಸಮಗ್ರ ಪರಿಚಯ ನೀಡುವ ಪ್ರಕಟಣೆಗಳಾಗಿವೆ. ಈ ಗ್ರಂಥಗಳ ಮುಖಬೆಲೆ ₹3,750. ಓದುಗರ ಅನುಕೂಲಕ್ಕಾಗಿ ₹2 ಸಾವಿರಕ್ಕೆ ಒದಗಿಸಲಾಗುತ್ತಿದೆ. ಗ್ರಂಥ ಖರೀದಿಸುವವರಿಗೆ 3 ಸಂಪುಟಗಳ ಡಿವಿಡಿಗಳನ್ನು ₹300ಕ್ಕೆ ನೀಡಲಾಗುತ್ತದೆ' ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ: 080–26609343 ಅಥವಾ 26601831.

1. ಹೊರಮಾವು ಶ್ರೀ ಸಾಯಿ ಲೇಔಟ್ ಜಲಾವೃತಗೊಂಡಿರುವುದು 2. ನೀರಿನಲ್ಲಿ ಮುಳುಗಿರುವ ಮನೆಯ ಸಲಕರಣೆಗಳನ್ನು ಹೊತ್ತು ತರುತ್ತಿರುವ ನಿವಾಸಿ 3. ಟ್ರ್ಯಾಕ್ಟರ್ ಮೂಲಕ ಸಂತ್ರಸ್ತರಿಗೆ ಆಹಾರ ಪೊಟ್ಟಣ ವಿತರಿಸುತ್ತಿರುವುದು —ಪ್ರಜಾವಾಣಿ ಚಿತ್ರಗಳು

ನಿದ್ರೆ ಇಲ್ಲದೆ ರಾತ್ರಿ ಕಳೆದ ನಾಗರಿಕರು: ಮನೆಗಳಿಗೆ ನುಗ್ಗಿದ ನೀರು • ಅಧಿಕಾರಿ, ಜನಪ್ರತಿನಿಧಿಗಳ ವಿರುದ್ಧ ಸಾರ್ವಜನಿಕರ ಕಿಡಿ

ಮಳೆಗೆ ನಲುಗಿದ ಮಹಾನಗರಿ: ಕಟ್ಟೆಯೊಡೆದ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳವಾರ ರಾತ್ರಿ ಸುರಿದ 'ಮಹಾ' ಮಳೆಗೆ ಮಹಾ ನಗರಿಯೇ ಜಲದಿಗ್ಬಂಧನಕ್ಕೆ ಒಳಗಾಗಿ ಜನಜೀವನ ಸಂಪೂರ್ಣ ಅಸ್ತವ್ಯಸ್ತ ಗೊಂಡಿತ್ತು.

ಸ್ಮಾರ್ಟ್ ರಸ್ತೆಗಳು ಹೊಳೆ ಯಂತಾದವು, ಬಡಾವಣೆಗಳೆಲ್ಲವೂ ನದಿಗಳಾದವು, ಬಹುತೇಕ ಬಡಾವಣೆ ಗಳ ನೆಲ ಮಹಡಿ ಮನೆಗಳಿಗೆ ನೀರು ಪ್ರವಾಹದಂತೆ ನುಗ್ಗಿತು. ಮನೆಯಲ್ಲಿದ್ದ ಬೆಲೆಬಾಳುವ ವಸ್ತುಗಳು ನೀರಿನಲ್ಲಿ ತೇಲಾಡಿದರೆ, ಮನೆಯ ಹೊರಗಿದ್ದ ಕಾರು, ದ್ವಿಚಕ್ರ ವಾಹನಗಳು, ಆಟೋ ರಿಕ್ಷಾಗಳು ನೀರಿನಲ್ಲಿ ಮುಳಗಿದವು. ಮಂಗಳವಾರ ಇಡೀ ರಾತ್ರಿ ನಿರಂತರ ವಾಗಿ ಸುರಿದ ಮಹಾಮಳೆ ಸಿಲಿಕಾನ್ ಸಿಟಿಯ ಜನರನ್ನು ಕ್ಷಣಮಾತ್ರದಲ್ಲೇ ಬೀದಿಗೆ ತಂದು ನಿಲ್ಲಿಸಿತು. ವರುಣನ ಆರ್ಭಟಕ್ಕೆ ನಲುಗಿದ ಜನ, ಮನೆಯಲ್ಲಿ ಸಂಗ್ರಹವಾಗಿದ್ದ ನೀರನ್ನು ಹೊರಹಾಕಲು ಮುಂಜಾನೆ ತನಕ ಹರಸಾಹಸಪಟ್ಟರು.

ಶ್ರೀರಾಮಪುರ ಮೆಟ್ರೊ ನಿಲ್ದಾಣ ದೊಳಗೆ ಮಳೆ ನೀರು ನುಗ್ಗಿತ್ತು. ಆನೆಪಾಳ್ಯ ಮತ್ತು ಬಸವೇಶ್ವರನಗರ ದಲ್ಲಿ ಪ್ರವಾಹದ ಸ್ಥಿತಿ ನಿರ್ಮಾಣವಾಗಿತ್ತು. ಡಾಲರ್ಸ್ ಕಾಲೊನಿಯಂತಹ ಪ್ರತಿಷ್ಠಿತ ಬಡಾವಣೆಯಲ್ಲೂ ನಿವಾಸಿಗಳು ಸಂಕಷ್ಟ ಅನುಭವಿಸಿದರು.

ದೊಡ್ಡನೆಕ್ಕುಂದಿಯಲ್ಲಿರುವ ಅಕ್ಮೆ ಬ್ಯಾಲೇಟ್ ವಸತಿ ಸಮುಚ್ಚಯದ ನೆಲ ಮಹಡಿಗೆ ನೀರು ನುಗ್ಗಿದ್ದರಿಂದ ಸುಮಾರು 300ಕ್ಕೂ ಹೆಚ್ಚು ಕಾರುಗಳು ಮುಳುಗಡೆಯಾಗಿದ್ದವು. ಎಚ್‌ಬಿಆರ್ ಬಡಾವಣೆಯಲ್ಲಿರುವ ಎಸ್‌ಎಲ್‌ವಿ ವಸತಿ ಸಮುಚ್ಚಯದ ನೆಲಮಹಡಿ ಕೂಡ ಕೆರೆಯಂತಾಗಿತ್ತು. ಕಾರು ಮತ್ತು ದ್ವಿಚಕ್ರವಾಹನಗಳು ನೀರಿನಲ್ಲಿ ಮುಳುಗಿ ದ್ದವು. ವಾಹನಗಳು ಕೆಟ್ಟುನಿಂತಿದ್ದರಿಂದ ಬುಧವಾರ ಕಚೇರಿ ಹಾಗೂ ಇತರೆ ಕೆಲಸಗಳಿಗೆ ಹೋಗಲಾಗದೆ ನಿವಾಸಿಗಳು ಪರಿತಪಿಸುವಂತಾಗಿತ್ತು.

'ವಸತಿ ಸಮುಚ್ಚಯವು ತಗ್ಗು ಪ್ರದೇಶ ದಲ್ಲಿದೆ. ಹೀಗಾಗಿ ಪ್ರತಿ ಬಾರಿ ಮಳೆ ಸುರಿದಾಗಲೂ ನೆಲ ಮಹಡಿಯಲ್ಲಿ ನೀರು ಶೇಖರಣೆಯಾಗುತ್ತದೆ. ಮಕ್ಕಳು, ವೃದ್ಧರು ಮನೆಯಿಂದ ಹೊರಬರುವುದಕ್ಕೂ ಭಯಪಡಬೇಕಾದ ವಾತಾವರಣ ಸೃಷ್ಟಿ-ಯಾಗುತ್ತದೆ. ರಾತ್ರಿಯೆಲ್ಲಾ ನೀರು ಹೊರ ಹಾಕುವ ಕೆಲಸ ಮಾಡಿದ್ದೇವೆ' ಎಂದು ನಿವಾಸಿಗಳು ತಿಳಿಸಿದರು.

ಪ್ರಮೋದ ಲೇಔಟ್‌ನ 3ನೇ ತಿರುವಿ ನಲ್ಲೂ ಹಲವು ಮನೆಗಳಿಗೆ ನೀರು ನುಗ್ಗಿತ್ತು. ಟಿವಿ, ಬಟ್ಟೆ ಸೇರಿ ಹಲವು ವಸ್ತು ಗಳು ನೀರು ಪಾಲಾಗಿದ್ದವು. ಮನೆಯಲ್ಲಿ ಸುಮಾರು 4 ಅಡಿ ನೀರು ನಿಂತಿತ್ತು.

'14 ವರ್ಷದಿಂದ ಬಡಾವಣೆಯಲ್ಲಿ ನೆಲೆಸಿದ್ದೇವೆ. ಮಂಗಳವಾರ ಉಂಟಾದ ಪ್ರವಾಹ ಹಿಂದೆಂದೂ ಕಂಡಿರಲಿಲ್ಲ. ಮನೆಯ ಅರ್ಧಭಾಗ ಕೊಳಚೆ ನೀರಿನಿಂದ ತುಂಬಿ ಹೋಗಿತ್ತು. ಮಂಗಳವಾರ ರಾತ್ರಿ 9 ಗಂಟೆ ಸುಮಾರಿಗೆ ಮನೆಯೊಳಗೆ ಏಕಾಏಕಿ ನೀರು ನುಗ್ಗಿದ್ದನ್ನು ಕಂಡು ಹೌಹಾರಿದೆವು. ಕ್ರಮೇಣ ಮನೆಯಲ್ಲೆಲ್ಲಾ ಕೊಳಚೆ ನೀರು ತುಂಬಿಕೊಂಡಿತು. ಅದನ್ನು ಹೊರಹಾಕಲು ರಾತ್ರಿಯೆಲ್ಲಾ ಹರಸಾಹಸಪಟ್ಟೆವು. ನೀರಿನ ಸಂಪ್‌ನಲ್ಲೂ ಕೊಳಚೆ ನೀರು ಸಂಗ್ರಹವಾಗಿತ್ತು. ಅದನ್ನು ಹೊರ ಹಾಕುವುದರಲ್ಲಿ ಸಾಕಾಗಿ ಹೋಗಿದೆ' ಎಂದು ಪ್ರಮೋದ ಲೇಔಟ್‌ನ ಗೀತಾ ಹೇಳಿದರು.

'ಕಚೇರಿ ಕೆಲಸ ಮುಗಿಸಿ ರಾತ್ರಿ 10.30ರ ಸುಮಾರಿಗೆ ಮನೆಗೆ ಹೋದಾಗ ಇಡೀ ರಸ್ತೆ ಹೊಳೆ ಯಂತಾಗಿತ್ತು. ರಾತ್ರಿ 1 ಗಂಟೆಯವರೆಗೂ ರಸ್ತೆ ಬದಿಯಲ್ಲೇ ನಿಂತುಕೊಂಡಿದ್ದೆ. ಪ್ರವಾಹ ಇಳಿದ ಬಳಿಕ ಮನೆ ತಲುಪಿದೆ' ಎಂದು ಐಟಿ ಉದ್ಯೋಗಿ ಬಿಂದು ಹೇಳಿದರು.

ಇಟ್ಟಮಡು 8ನೇ 'ಎ' ತಿರುವಿನಲ್ಲಿ ಮೂರು ಮನೆಗಳಿಗೆ ನೀರು ನುಗ್ಗಿತ್ತು. ಮನೆಗಳಲ್ಲಿದ್ದ ವಸ್ತುಗಳೆಲ್ಲಾ ಜಲಾವೃತ-ವಾಗಿದ್ದವು. 'ರಾತ್ರಿ ಇಡೀ ಬಿಬಿಎಂಪಿ, ಪೊಲೀಸ್ ಸಿಬ್ಬಂದಿಗೆ ಕರೆ ಮಾಡಿದರೂ ಯಾರೂ ಕರೆ ಸ್ವೀಕರಿಸಲಿಲ್ಲ. ನೀರಿನಲ್ಲಿ ನಿಂತುಕೊಂಡೇ ರಾತ್ರಿ ಕಳೆದೆವು' ಎಂದು ಸಂತ್ರಸ್ತರು ಅಳಲು ತೋಡಿಕೊಂಡರು.

ಕೋರಮಂಗಲದ 6ನೇ ಬ್ಲಾಕ್ ಕೂಡ ಜಲಾವೃತವಾಗಿತ್ತು. ರಾಜರಾಜೇಶ್ವರಿ ನಗರದ ಐಡಿಯಲ್ ಹೋಮ್ಸ್ ಟೌನ್‌ಶಿಪ್‌ನ ಜನರೂ ಮಳೆ ನೀರಿನಿಂದ ಸಂಕಷ್ಟ ಎದುರಿಸಿದರು.

'ಮನೆಯ ನೆಲಮಹಡಿ ಯಲ್ಲಿ ಸುಮಾರು 5 ಅಡಿಯಷ್ಟು ನೀರು ಶೇಖರಣೆಯಾಗಿತ್ತು. ಪ್ರತಿವರ್ಷವೂ ಇದೇ ರೀತಿಯಾಗುತ್ತಿದೆ. ಇದರಿಂದ ರೋಸಿ ಹೋಗಿದ್ದೇವೆ. ಬಿಬಿಎಂಪಿ ಹಾಗೂ ಜಲಮಂಡಳಿಯವರಿಗೆ ಲೂಟಿ ಮಾಡುವುದೊಂದೆ ಗೊತ್ತು. ಅವರು ನಾಗರಿಕರ ಸಮಸ್ಯೆಗಳಿಗೆ ಸ್ಪಂದಿಸುವು ದಿಲ್ಲ' ಎಂದು ಡಾಲರ್ಸ್ ಕಾಲೊನಿ ನಿವಾಸಿ ಲಹರಿ ವೇಲು ಕಿಡಿಕಾರಿದರು.

ಮಳೆಯಿಂದಾಗಿ ಮೈಸೂರು ರಸ್ತೆಯಲ್ಲಿರುವ ಮೆಟ್ರೊ ಪಿಲ್ಲರ್ (489) ಬಳಿ ರಸ್ತೆ ಗುಂಡಿ ಬಿದ್ದಿರುವುದು (ಎಡಚಿತ್ರ) ಎಚ್‌ಎಸ್‌ಆರ್ ಲೇಔಟ್‌ನ 14ನೇ ಕ್ರಾಸ್‌ನಲ್ಲಿ ಮನೆಗೆ ನುಗ್ಗಿದ ನೀರನ್ನು ಹೊರ ತೆಗೆದರು

ಕಿತ್ತುಹೋದ ರಸ್ತೆಗಳು

ಶ್ರೀನಿವಾಸನಗರದ ಸೀತಾ ವೃತ್ತದ ಬಳಿಯ ರಸ್ತೆಗೆ ಇತ್ತೀಚೆಗೆ ಹಾಕಲಾಗಿದ್ದ ಡಾಂಬರ್, ಒಂದೇ ಮಳೆಗೆ ಕಿತ್ತುಹೋಗಿದೆ.

ದಾಸರಹಳ್ಳಿಯ ರುಕ್ಮಿಣಿನಗರದ ರಸ್ತೆಯೊಂದಕ್ಕೆ ಕೆಲವೇ ದಿನಗಳ ಹಿಂದೆ ಹಾಕಲಾಗಿದ್ದ ಡಾಂಬರು ಹಾಗೂ 10 ದಿನಗಳ ಹಿಂದೆ ರಾಜಾಜಿನಗರದ ಪ್ರಕಾಶನಗರದಲ್ಲಿ ಹಾಕಿದ್ದ ಡಾಂಬರು ಕೊಚ್ಚಿ ಹೋಗಿದೆ. ಒಂದೇ ಮಳೆಗೆ ರಸ್ತೆಯ ಡಾಂಬರ್ ಕೊಚ್ಚಿ ಹೋಗಿರುವುದು ಕಳಪೆ ಕಾಮಗಾರಿ ಉದಾಹರಣೆ ಎಂದು ಸ್ಥಳೀಯರು ಆರೋಪಿಸಿದರು. ರಾಜರಾಜೇಶ್ವರಿ ನಗರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಬೆಳಿಗ್ಗೆ ಭೇಟಿ ನೀಡಿದ್ದರು. ಅವರು ಸಂಚರಿಸುವ ರಸ್ತೆಗಳನ್ನೆಲ್ಲಾ ಪೌರ ಕಾರ್ಮಿಕರು ಸ್ವಚ್ಛಗೊಳಿಸುತ್ತಿದ್ದರು. ಇದಕ್ಕೂ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.



ಗೆದ್ದಲಹಳ್ಳಿಯಲ್ಲೂ ಜಲದಿಗ್ಬಂಧನ

ಹೆಣ್ಣೂರು ಸಮೀಪದ ಗೆದ್ದಲಹಳ್ಳಿಯ ನಿವಾಸಿಗಳೂ ಜಲ ದಿಗ್ಬಂಧನಕ್ಕೆ ಒಳಗಾಗಿದ್ದರು. 20ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದ್ದರಿಂದ ನಿವಾಸಿಗಳು ಕಂಗಾಲಾಗಿದ್ದರು. ದವಸ ಧಾನ್ಯಗಳು ತೊಯ್ದು ಹೋಗಿದ್ದವು. ಪೀಠೋಪಕ-ರಣಗಳೂ ಒದ್ದೆಯಾಗಿದ್ದವು. ಮನೆಗಳ ಸುತ್ತಮುತ್ತ ಮಂಡಿಯವರೆಗೂ ನೀರು ನಿಂತಿದ್ದರಿಂದ ಬೇರೆಡೆ ಹೋಗಲೂ ಆಗದಂತಹ ಸ್ಥಿತಿ ನಿರ್ಮಾಣವಾಗಿತ್ತು. ಹೀಗಾಗಿ ಎತ್ತರದ ಪ್ರದೇಶಗಳಲ್ಲಿನ ನಿವಾಸಿಗಳು ಸಂತ್ರಸ್ತರಿಗೆ ಆಹಾರ ಹಾಗೂ ಕುಡಿಯುವ ನೀರು ಪೂರೈಸುತ್ತಿದ್ದರು.

'ಹಾವು ಸೇರಿದಂತೆ ಇತರೆ ಕ್ರಿಮಿಗಳು ಮನೆಗಳಿಗೆ ನುಗ್ಗುವ ಭೀತಿ ಎದುರಾಗಿದೆ. ಈಗಲೇ ಹೀಗಾದರೆ ಮಳೆಗಾಲದಲ್ಲಿ ನಮ್ಮ ಪರಿಸ್ಥಿತಿ ಹೇಗಾಗಬಹುದು. ಅದನ್ನು ಊಹಿಸಿಕೊಳ್ಳುವುದಕ್ಕೂ ಕಷ್ಟ' ಎಂದು ಅಳಲು ತೋಡಿಕೊಂಡರು.

ನೀರಿನಲ್ಲಿ ಮುಳುಗಿದ ಬಿಎಂಟಿಸಿ ಬಸ್

ಕಲ್ಯಾಣನಗರದ ಜಂಕ್ಷನ್‌ನ ಕೆಳಸೇತುವೆಯಲ್ಲಿ ಮಳೆ ನೀರಿನಲ್ಲಿ ಬಿಎಂಟಿಸಿ ಬಸ್ ಅರ್ಧದಷ್ಟು ಮುಳುಗಿ ಪ್ರಯಾಣಿಕರು ಪರದಾಡಿದರು.

ಬಸ್‌ನಲ್ಲಿನ ಸೀಟುಗಳು ಮುಳುಗಿದ್ದರಿಂದ ಪ್ರಯಾಣಿಕರು ಸೀಟಿನ ಮೇಲೆ ಹತ್ತಿ ನಿಂತಿದ್ದರು. ಕೆಳ ಸೇತುವೆಯಲ್ಲಿ ಹೆಚ್ಚಿನ ನೀರು ಇದ್ದುದರಿಂದ ಚಾಲಕ ಅರ್ಧದಲ್ಲೇ ಬಸ್ ನಿಲ್ಲಿಸಿದ್ದರು. ಕಚೇರಿಗಳಿಗೆ ಕೆಲಸಕ್ಕೆ ತೆರಳಬೇಕಿದ್ದ ಪ್ರಯಾಣಿಕರು ಬಸ್‌ನಲ್ಲಿ ಸಿಲುಕಿ ಪರದಾಡಿದರು. ಬಸ್ ಮುಳುಗುವ ಭಯದಲ್ಲಿ ಕೆಲವರು ಕಣ್ಣೀರಿಟ್ಟರು. ನೀರು ಕಡಿಮೆಯಾದ ಬಳಿಕ ಬಸ್ ಮುಂದಕ್ಕೆ ಚಲಿಸಿತು.

ಊಟವಿಲ್ಲದೆ ಪರದಾಡಿದರು

ಮಳೆಯ ನೀರು ಮನೆಗೆ ನುಗ್ಗಿ ದವಸ–ಧಾನ್ಯ ಮತ್ತು ಅಡುಗೆ ಸಾಮಗ್ರಿಗಳೆಲ್ಲವೂ ನೀರುಪಾಲಾಗಿದ್ದರಿಂದ ನಿವಾಸಿಗಳು ಊಟಕ್ಕೂ ಪರದಾಡುವಂತಾಯಿತು.

'ರಾತ್ರಿಯಿಂದ ಊಟವಿಲ್ಲ. ಕುಡಿಯಲು ನೀರೂ ಇಲ್ಲ. ಮುಂಜಾನೆಯವರೆಗೂ ಮನೆ ಸ್ವಚ್ಛಗೊಳಿಸುವುದರಲ್ಲೇ ಮಗ್ನರಾಗಿದ್ದೇವೆ. ಮತ್ತೆ ಮಳೆ ಸುರಿದರೆ ನಮ್ಮ ಕಥೆ ಮುಗಿದಂತೆ' ಎಂದು ಪ್ರಮೋದ್ ಲೇಔಟ್ ನಿವಾಸಿಗಳು ಅಸಹಾಯಕತೆ ವ್ಯಕ್ತಪಡಿಸಿದರು. ಮಹಾಲಕ್ಷ್ಮೀ ಲೇಔಟ್, ಹೊರಮಾವು ವಡ್ಡರಪಾಳ್ಯದಲ್ಲೂ ನಿವಾಸಿಗಳ ಸ್ಥಿತಿ ಇದೇ ರೀತಿ ಇತ್ತು. ವಡ್ಡರಪಾಳ್ಯದಲ್ಲಿ ಟ್ರ್ಯಾಕ್ಟರ್‌ನಲ್ಲಿ ಆಹಾರದ ಪೊಟ್ಟಣಗಳನ್ನು ತಂದು ಸ್ಥಳೀಯರು ಸಂತ್ರಸ್ತರಿಗೆ ವಿತರಿಸಿದರು.

ಪಶ್ಚಿಮ ವಲಯ: ಸಾವಿರ ಮನೆಗಳಿಗೆ ನೀರು

ಮಹಾಲಕ್ಷ್ಮಿ ಲೇಔಟ್, ನಂದಿನಿ ಲೇಔಟ್, ವೃಷಭಾವತಿ ನಗರ, ಜೆ.ಸಿ.ನಗರ, ಕಮಲಾನಗರ, ನಂದಿನಿ ಲೇಔಟ್, ಕಂಠೀರವನಗರ ಸೇರಿ ಬಿಬಿಎಂಪಿ ಪಶ್ಚಿಮ ವಲಯವೊಂದರಲ್ಲೇ ಒಂದು ಸಾವಿರಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿ ಜನ ಜೀವನ ಅಸ್ತವ್ಯಸ್ತಗೊಂಡಿತ್ತು.

ಬುಧವಾರ ಬೆಳಿಗ್ಗೆ ಮಳೆಹಾನಿ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಮಹಾಲಕ್ಷ್ಮೀ ಲೇಔಟ್ ಕ್ಷೇತ್ರ ಶಾಸಕರೂ ಆಗಿರುವ ಅಬಕಾರಿ ಸಚಿವ ಕೆ.ಗೋಪಾಲಯ್ಯ, 'ನನ್ನ ಕ್ಷೇತ್ರವೊಂದರಲ್ಲೇ 850ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ' ಎಂದರು.

ರುಕ್ಮಿಣಿನಗರ ಮತ್ತೆ ಜಲಾವೃತ

ದಾಸರಹಳ್ಳಿಯ ವ್ಯಾಪ್ತಿಯ ರುಕ್ಮಿಣಿನಗರ, ಗುಂಡಪ್ಪ ಲೇಔಟ್, ಬೆಲ್ಮಾರ್ ಲೇಔಟ್‌ನಲ್ಲಿ ಈ ಬಾರಿಯೂ ಮಳೆ ನೀರು ನಿವಾಸಿಗಳನ್ನು ಕಾಡಿತು.

ಚೊಕ್ಕಸಂದ್ರ ಕೆರೆಯಿಂದ ದೊಡ್ಡಬಿದರಕಲ್ಲು ಕೆರೆಗೆ ನೀರು ಹರಿಯುವ ರಾಜಕಾಲುವೆ ಕಿರಿದಾಗಿದ್ದು, ರಾತ್ರಿ ಏಕಾಏಕಿ ಉಕ್ಕಿದ ನೀರು ಸರಾಗವಾಗಿ ಹರಿದು ಹೋಗದೆ ಬಡಾವಣೆಗಳಿಗೆ ನುಗ್ಗಿತು.

ಮನೆಯಿಂದ ನೀರು ಹೊರಹಾಕಲು ನಿವಾಸಿಗಳು ರಾತ್ರಿ ಇಡೀ ಜಾಗರಣೆ ಮಾಡಿದರು. ಬೆಳಿಗ್ಗೆ ಸ್ಥಳಕ್ಕೆ ಬಂದು ಬಿಬಿಎಂಪಿ ಅಧಿಕಾರಿಗಳನ್ನು ನಿವಾಸಿಗಳು ತರಾಟೆಗೆ ತೆಗೆದುಕೊಂಡರು. 'ಪ್ರತಿ ಮಳೆಯಲ್ಲೂ ನಾವು ಸಮಸ್ಯೆ ಅನುಭ-ವಿಸುತ್ತಿದ್ದೇವೆ. ರಾಜಕಾಲುವೆ ಒತ್ತುವರಿ ತೆರವುಗೊಳಿಸಿ ವಿಸ್ತರಣೆ ಮಾಡದೆ ಅಮಾಯಕರನ್ನು ಸಂಕಷ್ಟಕ್ಕೆ ತಳ್ಳುವುದು ಎಷ್ಟು ಸರಿ' ಎಂದು ಪ್ರಶ್ನಿಸಿದರು.

ರುಕ್ಮಿಣಿನಗರದಲ್ಲಿ ಮನೆಗೆ ನುಗ್ಗಿರುವ ನೀರು ಹೊರ ಹಾಕುತ್ತಿರುವುದು

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ವಡ್ಡರಪಾಳ್ಯ: ಸಚಿವ ಬೈರತಿ ಬಸವರಾಜ್‌ಗೆ ತರಾಟೆ

ಹೊರಮಾವು ವಡ್ಡರಪಾಳ್ಯ, ಅನುಗ್ರಹ ಲೇಔಟ್, ಕಾವೇರಿನಗರದ ಶ್ರೀಸಾಯಿ ಬಡಾವಣೆಗಳಿಗೆ ಈ ಬಾರಿಯೂ ಮಳೆ ನೀರು ನುಗ್ಗಿದ್ದು, ರೋಸಿ ಹೋಗಿರುವ ನಿವಾಸಿಗಳು ಸಚಿವ ಬೈರತಿ ಬಸವರಾಜ್ ಅವರನ್ನು ತರಾಟೆಗೆ ತೆಗೆದುಕೊಂಡರು.

ರಾಜಕಾಲುವೆಗೆ ಅಡ್ಡಲಾಗಿರುವ ರೈಲ್ವೆ ಸೇತುವೆ ಕಿರಿದಾಗಿದ್ದು, ಅದರಲ್ಲಿ ನೀರು ಸರಾಗವಾಗಿ ಹರಿದು ಹೋಗಲು ಸಾಧ್ಯವಾಗದೆ ಬಡಾವಣೆಗಳಿಗೆ ನೀರು ನುಗ್ಗುತ್ತಿದೆ. ಪ್ರತಿ ಮಳೆಯಲ್ಲೂ ವಡ್ಡರಪಾಳ್ಯ ಜಲಾವೃತವಾಗು ವುದು ಸಾಮಾನ್ಯವಾಗಿದ್ದು, ಆಕಾಶದಲ್ಲಿ ಮೋಡ ಕಟ್ಟಿದರೆ ನಿವಾಸಿಗಳು ಭಯಪಡುವ ಸ್ಥಿತಿ ಇದೆ.

ಮಂಗಳವಾರ ಸುರಿದ ಮಹಾಮಳೆಯಲ್ಲಿ ವಡ್ಡರಪಾಳ್ಯ ಹಿಂದಿನ ಎಲ್ಲಾ ದಿನಗಳಿಂತ ಹೆಚ್ಚಿನ ಸಮಸ್ಯೆಗೆ ಸಿಲುಕಿತ್ತು. 200ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಹಾನಿ ಉಂಟಾಗಿದೆ. ಇಡೀ ರಾತ್ರಿ ನೀರು ಹೊರ ಹಾಕಲಾಗದೆ ನಿವಾಸಿಗಳು ಪರದಾಡಿದರು.

'ಪ್ರತಿ ಮಳೆಗೂ ಮನೆಗೆ ಬರುವ ನೀರನ್ನು ಹೊರ ಹಾಕುವುದೇ ಕೆಲಸವಾಗಿದೆ. ದವಸ –ಧಾನ್ಯವೆಲ್ಲ ನೀರುಪಾಲಾಗಿದೆ, ಮಾಡಿಟ್ಟಿದ್ದ ಅನ್ನ ಕೊಚ್ಚಿ ಹೋಯಿತು' ಎಂದು ನಿವಾಸಿಗಳು ಕಣ್ಣೀರಿಟ್ಟರು.

ಬೆಲೆಬಾಳುವ ಗೃಹ ಉಪಯೋಗಿ ವಸ್ತುಗಳು, ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ, ಕಾರು ಹಾಗೂ ಆಟೋರಿಕ್ಷಾಗಳು ನೀರಿನಲ್ಲಿ ಮುಳುಗಿ ಹೋದವು. ಮನೆಗಳಿಗೆ ನೀರು ನುಗ್ಗಿದ್ದರಿಂದ ನಿವಾಸಿಗಳು ಮನೆಯ ಟೆರೇಸ್ ಮತ್ತು ಮಹಡಿ ಮೇಲೆ ಆಶ್ರಯ ಪಡೆದಿದ್ದರು.

ಮೂರು ಬಾರಿ ಪ್ರವಾಹದಂತೆ ನೀರು ನುಗ್ಗಿದೆ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಬಂದು ಹೋಗುತ್ತಾರೆಯೇ ಹೊರತು ಶಾಶ್ವತ ಪರಿಹಾರ ಕಲ್ಪಿ-ಸುತ್ತಿಲ್ಲ. ಮತ್ತೆ ಮಳೆ ಬಂದರೆ ಏನು ಮಾಡುವುದು ಎಂದು ನಿವಾಸಿ ಗೀತಾ ಅಳಲು ತೋಡಿಕೊಂಡರು.

ಬುಧವಾರ ಬೆಳಿಗ್ಗೆ ಸ್ಥಳಕ್ಕೆ ಬಂದ ಬೈರತಿ ಬಸವರಾಜ್ ಅವರನ್ನು ಮಾಧ್ಯಮಗಳ ಎದುರೇ ನಿವಾಸಿಗಳು ತರಾಟೆಗೆ ತೆಗೆದುಕೊಂಡರು.

'ಹಿಂದಿನ ಎರಡು ವರ್ಷಗಳಿಂದ ನೀಡಿರುವ ಭರವಸೆ ಏನಾಯಿತು? ಮೂರು ತಿಂಗಳ ಹಿಂದೆಯೂ ಇದೇ ಮಾತು ಹೇಳಿ ಹೋಗಿದ್ದಿರಿ. ಮತ್ತೆ ಭರವಸೆಯನ್ನೇ ನೀಡುವುದರಿಂದ ಏನು ಪ್ರಯೋಜನ' ಎಂದು ಮಹಿಳೆಯೊಬ್ಬರು ಆಕ್ರೋಶ ವ್ಯಕ್ತಪಡಿಸಿದರು.

'ರಾತ್ರಿ ಜೋರು ಮಳೆಯಾಗಿದ್ದರಿಂದ ಸಮಸ್ಯೆಯಾಗಿದೆ. ₹27 ಕೋಟಿ ಮೊತ್ತದಲ್ಲಿ ಸೇತುವೆ ವಿಸ್ತರಣೆ ಕಾಮಗಾರಿ ಆರಂಭಿಸಲು ಅನುಮತಿ ದೊರೆತಿದೆ. ಹದಿನೈದು ದಿನದೊ ಳಗೆ ಟೆಂಡರ್ ಆಹ್ವಾನಿಸಲಾಗುವುದು' ಎಂದು ಭರವಸೆ ನೀಡಿದರು.

'ಇಲ್ಲಿನ ಸಮಸ್ಯೆಗಳ ಕುರಿತು ಈಗಾಗಲೇ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಮುಂದಿನ ಫೆಬ್ರುವರಿ ಅಂತ್ಯದೊಳಗೆ ಇಲ್ಲಿನ ಸಮಸ್ಯೆ ನಿವಾರಿಸದಿದ್ದರೆ ಮತ ಕೇಳಲು ಬರುವುದಿಲ್ಲ' ಎಂದು ಹೇಳಿದರು.

'ಕೂಗಿದರೂ ಕೇಳಲಿಲ್ಲ; ಮೇಲೆ ಎಳೆಯಲೂ ಆಗಲಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಡನಾಡಿಗಳಿಬ್ಬರು ಜೀವ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದ ದೃಶ್ಯ ಈಗಲೂ ಕಣ್ಣೆದುರು ಸುಳಿಯುತ್ತಿದೆ. ಅದು ಮನಸ್ಸನ್ನು ಘಾಸಿ-ಗೊಳಿಸುತ್ತಿದೆ. ಅವರನ್ನು ಬದುಕಿಸಲು ಆಗಲಿಲ್ಲವಲ್ಲ ಎಂಬ ಕೊರಗು ವಿಪರೀತ ಕಾಡುತ್ತಿದೆ'...

ನೀರು ಸರಬರಾಜು ಮಾಡಲು ಅಳ ವಡಿಸಲಾಗುತ್ತಿದ್ದ ಕಬ್ಬಿಣದ ಪೈಪ್ ಗಳಲ್ಲಿ ಸಿಲುಕಿ ಮೃತಪಟ್ಟ ದೇವ್‌ಭರತ್ ಹಾಗೂ ಅಂಕಿತ್‌ಕುಮಾರ್ ಅವರ ಜೊತೆ ಕೆಲಸ ಮಾಡುತ್ತಿದ್ದ ತ್ರಿಲೋಕಿ ಅವರ ಭಾವುಕ ಮಾತಿದು.

'ದೇವ್‌ಭರತ್ ಮತ್ತು ಅಂಕಿತ್ 'ಮ್ಯಾನ್‌ಹೋಲ್' ಮೂಲಕ ಪೈಪ್ ನೊಳಗೆ ಇಳಿದು ವೆಲ್ಡಿಂಗ್ ಮಾಡುತ್ತಿ ದ್ದರು. ಸಂಜೆಯಿಂದ ಜಿಟಿ ಜಿಟಿ ಮಳೆ-ಯಾಗುತ್ತಿತ್ತು. ರಾತ್ರಿ 7 ಗಂಟೆ ಸುಮಾರಿಗೆ ಮಳೆ ಜೋರಾಗಿ ರಸ್ತೆಯ ಮೇಲಿನಿಂದ ನೀರು ನುಗ್ಗಿ ಬಂದು ಪೈಪ್‌ನೊಳಗೆ ಶೇಖರಣೆಯಾಯಿತು. ಅದನ್ನು ಕಂಡು ಗಾಬರಿಯಾದೆ. ಮೇಲೆ ಬರುವಂತೆ ಕೂಗಿದೆ. ಅದು ಅವರಿಗೆ ಕೇಳಿಸಲೇ ಇಲ್ಲ. 'ಮ್ಯಾನ್‌ಹೋಲ್' ಕಿರಿದಾಗಿತ್ತು. ಅದರಿಂದ ಹೊರಬರಲು ಪ್ರಯತ್ನಿ-ಸುತ್ತಿದ್ದ ಹಾಗೆ ಪ್ರವಾಹ ಹೆಚ್ಚಾಯಿತು. ಮಳೆ ನೀರಿನಿಂದ ಗುಂಡಿ ಹಾಗೂ ಪೈಪ್ ತುಂಬಿ ಹೋಯಿತು' ಎಂದು ತಿಳಿಸಿದರು.

'ನಾವೆಲ್ಲಾ ಕಡಬಗೆರೆ ಯಲ್ಲಿ ವಾಸವಿದ್ದೆವು. ಪ್ರತಿದಿನ ಬೆಳಿಗ್ಗೆ 8ರಿಂದ ಸಂಜೆ 6ಗಂಟೆವರೆಗೂ ಕೆಲಸ ಮಾಡುತ್ತಿದ್ದೆವು. ಎಂದಿನಂತೆ ಮಂಗಳವಾರ ಒಟ್ಟು 9 ಮಂದಿ ಕೆಲಸಕ್ಕೆ ಹೋಗಿದ್ದೆವು. ಮಳೆ ಬರುತ್ತಿದ್ದರಿಂದ ಬೇಗನೆ ಮನೆಗೆ ಹೋಗುವ ಆಲೋಚನೆ ಇತ್ತು. ಆದರೂ 6 ಗಂಟೆವರೆಗೂ ಕೆಲಸ ಮಾಡಿದೆವು. ಮನೆಗೆ ಹೊರಡುವ ವೇಳೆ ಸ್ಥಳಕ್ಕೆ ಬಂದ ಎಂ.ಇ.ಐ.ಎಲ್. ಕಂಪನಿಯ ನಾಲ್ವರು ಸಿಬ್ಬಂದಿ ರಾತ್ರಿ 9 ಗಂಟೆವರೆಗೂ ಇದ್ದು, ವೆಲ್ಡಿಂಗ್ ಕೆಲಸ ಮುಗಿಸಿ ಹೋಗುವಂತೆ ದೇವ್‌ಭರತ್, ಅಂಕಿತ್ ಹಾಗೂ ನನಗೆ ಸೂಚಿಸಿದರು. ಮಳೆ ಬರುತ್ತಿದೆ, ನಾಳೆ ಬಂದು ಕೆಲಸ ಮುಗಿಸುತ್ತೇವೆ ಎಂದು ಮನವಿ ಮಾಡಿದರೂ ಕೇಳಲಿಲ್ಲ. ನಮ್ಮ ಮನವಿಗೆ ಅವರು ಒಪ್ಪಿದ್ದರೆ ಇಬ್ಬರ ಜೀವ ಉಳಿಯುತ್ತಿತ್ತು' ಎಂದು ಗದ್ಗದಿ-ತರಾದರು.

'ಪೈಪ್‌ನೊಳಗೆ ಇಳಿಯಲು ಏಣಿಯ ವ್ಯವಸ್ಥೆಯನ್ನೂ ಮಾಡಿರಲಿಲ್ಲ. ಎರಡು ಅಡಿಯಷ್ಟು ಅಗಲದ 'ಮ್ಯಾನ್ ಹೋಲ್' ಮೂಲಕವೇ ಇಬ್ಬರೂ ಒಳಗೆ ಹೋದರು. ಏಣಿಯನ್ನಾದರೂ ತಂದುಕೊಟ್ಟಿದ್ದರೆ ಅವರು ಬದುಕಿಬಿ-ಡುತ್ತಿದ್ದರೇನೊ. ಅವರು ಮೃತಪಟ್ಟ ವಿಷಯವನ್ನು ರಾತ್ರಿಯೇ ಸಿಬ್ಬಂದಿಯ ಗಮನಕ್ಕೆ ತಂದೆ. ಹೀಗಿದ್ದರೂ ಯಾರೊಬ್ಬರೂ ಅತ್ತ ಸುಳಿಯಲಿಲ್ಲ. ಬುಧವಾರ ಬೆಳಿಗ್ಗೆಯವರೆಗೂ ಮೃತದೇಹಗಳು ಪೈಪ್‌ನೊಳಗೆ ಇದ್ದವು' ಎಂದು ಹೇಳಿದರು.

ನಾಲ್ವರ ಬಂಧನ

'ತ್ರಿಲೋಕ್ ಅವರು ನೀಡಿದ ದೂರಿನ ಆಧಾರದಲ್ಲಿ ಮೆಗಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಎಸ್ಟೇಟ್ ಸಂಸ್ಥೆಯ ಯೋಜನಾ ವ್ಯವಸ್ಥಾಪಕ ಶಿವಕುಮಾರ್, ಕಾಮಗಾರಿ ವಿಭಾಗದ ಎಂಜಿನಿಯರ್ ಹರೀಶ್ ರೆಡ್ಡಿ, ಮಾನವ ಸಂಪನ್ಮೂಲ ವಿಭಾಗದ ಮ್ಯಾನೇಜರ್ ನರಸಿಂಹರಾಜು, ಮೇಸ್ತ್ರಿ ಮನೋಜ್ ಯಾದವ್ ಎಂಬುವರ ಮೇಲೆ ಪ್ರಕರಣ ದಾಖಲಿಸಿ, ನಾಲ್ವರನ್ನೂ ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕಾರ್ಮಿಕರು ಮೃತಪಟ್ಟ ಸ್ಥಳ–ಪ್ರಜಾವಾಣಿ ಚಿತ್ರ

ಪೈಪ್‌ನಲ್ಲಿ ಸಿಲುಕಿ ಇಬ್ಬರು ಕಾರ್ಮಿಕರು ಸಾವು

ಬೆಂಗಳೂರು: ನೀರು ಸರಬರಾಜಿಗಾಗಿ ಅಳವಡಿಸಲಾಗುತ್ತಿದ್ದ ಕಬ್ಬಿಣದ ಪೈಪ್‌ಗ ಳಲ್ಲಿ ಸಿಲುಕಿದ್ದ ಇಬ್ಬರು ಕಾರ್ಮಿಕರು ಉಸಿರುಗಟ್ಟಿ ಮೃತಪಟ್ಟಿದ್ದಾರೆ.

'ಬಿಹಾರದ ದೇವ್‌ಭರತ್ ಕುಶ್ವಾಹ (36) ಹಾಗೂ ಉತ್ತರಪ್ರದೇಶದ ಅಂಕಿತ್‌ಕುಮಾರ್ ಸಹಾನಿ (23) ಮೃತ ಪಟ್ಟವರು. ಇವರ ಜೊತೆ ಇದ್ದ ತ್ರಿಲೋಕಿ (37) ಅಪಾಯದಿಂದ ಪಾರಾಗಿದ್ದಾರೆ. ಘಟನೆ ಸಂಬಂಧ ಎಂ.ಇ.ಐ.ಎಲ್ ನಿರ್ಮಾಣ ಕಂಪನಿಯ ನಾಲ್ವರನ್ನು ಬಂಧಿಸಲಾಗಿದೆ' ಎಂದು ಜ್ಞಾನಭಾರತಿ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಉಲ್ಲಾಳದ ಉಪಕಾರ್ ಲೇಔಟ್ ಬಸ್‌ನಿಲ್ದಾಣದ ಬಳಿ 5ನೇ ಹಂತದ ಕಾವೇರಿ ನೀರು ಸರಬರಾಜು ಕಾಮಗಾರಿ ನಡೆಯುತ್ತಿದೆ. ಅದಕ್ಕಾಗಿ ಆರು ಅಡಿ ಆಳದಲ್ಲಿ ಕಬ್ಬಿಣದ ಪೈಪ್‌ಗಳನ್ನು ಅಳವ-ಡಿಸಲಾಗಿತ್ತು. ವೆಲ್ಡಿಂಗ್ ಮಾಡುವ ಸಲುವಾಗಿ ಮೃತರು 'ಮ್ಯಾನ್ ಹೋಲ್' ಮೂಲಕ ಪೈಪ್ ಒಳಗೆ ಇಳಿದಿದ್ದರು. ರಾತ್ರಿ ಸುರಿದ ಮಳೆಯಿಂದಾಗಿ ಗುಂಡಿಯೊ ಳಗೆ ನೀರು ಸಂಗ್ರಹವಾಗಿತ್ತು. ಹೀಗಾಗಿ ಪೈಪ್‌ನಿಂದ ಹೊರ ಬರಲಾಗದೆ ಉಸಿರು ಗಟ್ಟಿ ಸಾವಿಗೀಡಾಗಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ತಲಾ ₹5 ಲಕ್ಷ ಪರಿಹಾರ: ಮೃತ ಕಾರ್ಮಿಕರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ನೀಡುವುದಾಗಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ.

'ಮಳೆ ನೀರು ನುಗ್ಗಿ ಹಲವು ಮನೆ ಗಳಿಗೆ ಹಾನಿಯಾಗಿದೆ. ಅಂತಹ ಕುಟುಂಬ ದವರಿಗೆ ₹25 ಸಾವಿರ ಪರಿಹಾರ ನೀಡಲಾಗುತ್ತದೆ' ಎಂದೂ ತಿಳಿಸಿದ್ದಾರೆ.

ದಾಖಲೆ ಮಳೆ: ಬೆಂಗಳೂರಿನಲ್ಲಿ 24 ಗಂಟೆಗಳ ಅವಧಿಯಲ್ಲಿ 11.4 ಸೆಂ.ಮೀ ಗರಿಷ್ಠ ಮಳೆ ಮಂಗಳವಾರ (ಮೇ 17) ದಾಖಲಾಗಿದೆ. ಇದು 10 ವರ್ಷಗಳಲ್ಲಿ ಮೇ ತಿಂಗಳಿನಲ್ಲಿ ಸುರಿದಿರುವ ದಾಖಲೆ ಮಳೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ವಿದ್ಯುತ್ ವ್ಯತ್ಯಯ: ಪರಿಶೀಲನೆ

ಬೆಂಗಳೂರು: ನಗರದಲ್ಲಿ ಮಂಗಳವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ, ಹಲವಡೆ ವಿದ್ಯುತ್ ಪೂರೈಕೆಯಲ್ಲಿ ವ್ಯ-ತ್ಯಯವಾಗಿತ್ತು. ವಿದ್ಯುತ್ ಪೂರೈಕೆ ಸರಿಪಡಿಸಲು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಿ. ರಾಜೇಂದ್ರ ಚೋಳನ್ ಅವರು ಖುದ್ದು ಪರಿಶೀಲಿಸಿ, ಕಾಮಗಾರಿಗಳ ಮೇಲೆ ನಿಗಾವಹಿಸಿದರು. ಕೆಲವೆಡೆ ರಾತ್ರಿಯೇ ಸರಿಪಡಿಸಲಾಯಿತು.

ಬುಧವಾರ ರಾಜೇಂದ್ರ ಚೋಳನ್ ಅವರು ಕೆಂಗೇರಿ, ರಾಜರಾಜೇಶ್ವರಿ ನಗರ, ಕೋರಮಂಗಲ, ಎಚ್ ಎಸ್‌ಆರ್ ಬಡಾ ವಣೆ ಮತ್ತು ಇಂದಿರಾನಗರ ಬೆಸ್ಕಾಂ ವಲಯ ಗಳಿಗೆ ಖುದ್ದು ಭೇಟಿ ನೀಡಿ ವಿದ್ಯುತ್ ಪೂರೈಕೆ ಸರಿಪಡಿಸುವ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ವಿದ್ಯುತ್ ವ್ಯತ್ಯಯ ವಿವರ: ಬೆಸ್ಕಾಂ ಸಹಾಯವಾಣಿ 1912ಗೆ ಮಂಗಳವಾರ ರಾತ್ರಿ 13734 ಕರೆಗಳು ಬಂದಿವೆ. ಬೆಸ್ಕಾಂ ಸಿಬ್ಬಂದಿ ಬುಧವಾರ ಬೆಳಗ್ಗೆ ವೇಳೆಗೆ ಎಲ್ಲ ಫೀಡರ್‌ಗಳ ದುರಸ್ತಿ ಮಾಡಿ ವಿದ್ಯುತ್ ಪೂರೈಕೆ ವ್ಯವಸ್ಥೆ ಸರಿಪಡಿಸಿದ್ದಾರೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

EXAM DH ಪ್ರಜಾವಾಣಿ MASTERMIND™

ಏನಿದು ವೀಟೊ ಪವರ್?

ಈ ಕುರಿತ ಸಂಪೂರ್ಣ ಮಾಹಿತಿ ಹಾಗೂ ಇಂಥ ಹಲವು ಮಾಹಿತಿಯುಕ್ತ ಸ್ಪರ್ಧಾ ಲೋಕದ ಅಧ್ಯಯನ ಸಾಮಗ್ರಿಗಳಿಗಾಗಿ ಪ್ರಜಾವಾಣಿ–ಡೆಕನ್‌ಹೆರಾಲ್ಡ್‌ನ 'ಮಾಸ್ಟರ್‌ಮೈಂಡ್'ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

www.exammastermind.com

ವಿವಾದಿತ ವೀಟೊ



ರಷ್ಯಾ–ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿ ನ್ಯೂಯಾರ್ಕ್‌ನಲ್ಲಿ ನಡೆದ ವೀಟೊ ಸಭೆ –ಸಂಗ್ರಹ ಚಿತ್ರ

ಯುಪಿಎಸ್‌ಸಿ– ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ –2, ಕೆಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ –2 ಹಾಗೂ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಅಂತರರಾಷ್ಟ್ರೀಯ ಮಟ್ಟದ ಪ್ರಚಲಿತ ವಿದ್ಯಮಾನವೊಂದರ ಮಾಹಿತಿ ಇಲ್ಲಿದೆ.

ಯು.ಟಿ. ಆಯಿಶ ಫರ್ಝಾನಾ

ಪ್ರಚಲಿತ

ವಿಶ್ವಸಂಸ್ಥೆಯ ಸುಧಾರಣೆಯ ಬಗ್ಗೆ ಸುದೀರ್ಘವಾದ ಚರ್ಚೆಗಳು, ವಿಶೇಷವಾಗಿ ಪ್ರಸ್ತುತ ಜಗತ್ತನ್ನು ಪ್ರತಿನಿಧಿಸದ ಭದ್ರತಾ ಮಂಡಳಿಯ ಪಾತ್ರ ಹಾಗೂ ಉಕ್ರೇನ್ ಮೇಲಿನ ರಷ್ಯಾದ ಆಕ್ರಮಣವನ್ನು ತಡೆಯಲು ಅದು ವಿಫಲವಾಗಿರುವುದು- ಜಾಗತಿಕ ಚರ್ಚೆಗೆ ಕಾರಣವಾಗಿದೆ.

ವಿಶ್ವಸಂಸ್ಥೆಯ ಪ್ರಸ್ತುತತೆಯ ಬಗ್ಗೆ ಹಲವು ಬಾರಿ ಚರ್ಚೆಗಳು ಈ ಹಿಂದಿನಿಂದಲೂ ನಡೆಯುತ್ತಿದ್ದವು. ಸಮಕಾಲೀನ ಜಗತ್ತಿನ ತಲ್ಲಣಗಳಿಗೆ ಪ್ರತಿಸ್ಪಂದಿಸದ ವಿಶ್ವಸಂಸ್ಥೆಯು ಹಲ್ಲು ಕಿತ್ತ ಹಾವು ಎಂಬ ಆರೋಪಗಳು ಹಿಂದಿನಿಂದಲೂ ಕೇಳಿ ಬರುತ್ತಲೇ ಇವೆ. ಇಷ್ಟೆಲ್ಲಾ ರಾದ್ಧಾಂತಗಳಿಗೆ ಪ್ರಧಾನ ಕಾರಣವೇ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಬಳಕೆಯಲ್ಲಿರುವ ವೀಟೊ ಪವರ್.

ಜಾಗತಿಕವಾಗಿ ವೀಟೊ ಹಕ್ಕುಗಳ ರಾಜಕೀಯಕ್ಕೆ ಸಂಬಂಧಪಟ್ಟಂತೆ ಎರಡು ಬಣಗಳಿವೆ. ಅದುವೇ ಜಿ4 ದೇಶಗಳು ಮತ್ತು ಕಾಫಿ ಕ್ಲಬ್.

ಜಿ4 ದೇಶಗಳು

- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ (UNSC – United Nations security council) ಕಾಯಂ ಸದಸ್ಯರಾಗಲು ಹಾತೊರೆಯುತ್ತಿರುವ ಜರ್ಮನಿ, ಭಾರತ, ಜಪಾನ್ ಮತ್ತು ಬ್ರೆಜಿಲ್‌ನ ದೇಶಗಳ ಒಂದು ಗುಂಪನ್ನು ಜಿ4 ದೇಶಗಳು ಎಂದು ಕರೆಯುತ್ತಾರೆ.
- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ (UNSC) ಕಾಯಂ ಸದಸ್ಯರಾಗುವ ಮೂಲಕ ಲಭಿಸುವ ಬಹಳ ದೊಡ್ಡ ಪ್ರಯೋಜನವೆಂದರೆ ವೀಟೊ ಹಕ್ಕಿನ ಲಭ್ಯತೆಯಾಗಿದೆ.
- ಜಿ4 ದೇಶಗಳು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವಕ್ಕಾಗಿ ಪರಸ್ಪರ ಬಿಡ್‌ಗಳನ್ನು ಬೆಂಬಲಿಸುತ್ತವೆ.
- ಜಿ4 ಗುಂಪು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವವನ್ನು ಪಡೆಯುವ ಉದ್ದೇಶದಿಂದ, ಭದ್ರತಾ ಮಂಡಳಿಗೆ ಆರು ಕಾಯಂ ಸದಸ್ಯರು ಮತ್ತು ನಾಲ್ಕು ಕಾಯಂ ಅಲ್ಲದ ಸದಸ್ಯರನ್ನು ಸೇರಿಸುವ ಮೂಲಕ 15 ರಿಂದ 25 ರವರೆಗೆ ಭದ್ರತಾ ಮಂಡಳಿಯ ಸದಸ್ಯತ್ವವನ್ನು ವಿಸ್ತರಿಸಬೇಕು ಎಂದು ಹೇಳುತ್ತದೆ.
- ಜಿ4 ದೇಶಗಳು ಒಂದು ವೇಳೆ ಭದ್ರತಾ ಮಂಡಳಿಯಲ್ಲಿ ತಮಗೆ ಕಾಯಂ ಸದಸ್ಯತ್ವವನ್ನು ನೀಡಿದರೂ, ನಂತರ ಕನಿಷ್ಟ 15 ವರ್ಷಗಳವರೆಗೆ ವೀಟೊ ಹಕ್ಕನ್ನು ತಾವು ಕೇಳುವುದಿಲ್ಲ ಎಂದೂ ತನ್ನ ಆಯ್ಕೆಯನ್ನು ನೀಡಿದೆ.

ಒಮ್ಮತದ ಗುಂಪು / ಕಾಫಿ ಕ್ಲಬ್ - Uniting for consensus

- ಯುನಿಟಿಂಗ್ ಫಾರ್ ಕನ್ಸೆನ್ಸಸ್ ಗ್ರೂಪ್ ಅನ್ನು ಕಾಫಿ ಕ್ಲಬ್ ಎಂದೂ ಕರೆಯಲಾಗುತ್ತದೆ.
- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿರುವ ಶಾಶ್ವತವಲ್ಲದ ಸದಸ್ಯತ್ವವನ್ನು 10 ರಿಂದ 20 ಸದಸ್ಯರಿಗೆ ವಿಸ್ತರಿಸಲು ಮತ್ತು ಕೌನ್ಸಿಲ್‌ನ ಕಾರ್ಯಚಟುವಟಿಕೆಗಳಲ್ಲಿ ವಿವಿಧ ಬದಲಾವಣೆಗಳನ್ನು ಇದು ಪ್ರಸ್ತಾಪಿಸುತ್ತದೆ.

ಕಾಫಿ ಕ್ಲಬ್‌ನ ಕಾರ್ಯಸೂಚಿ

- ಜಿ4 ದೇಶಗಳೆಂದು ಕರೆಯಲ್ಪಡುವ ಬ್ರೆಜಿಲ್, ಜರ್ಮನಿ, ಭಾರತ ಮತ್ತು ಜಪಾನ್ ದೇಶಗಳಿಂದ ಶಾಶ್ವತ ಸ್ಥಾನಮಾನಕ್ಕಾಗಿ ಹಾಕುತ್ತಿರುವ ಬಿಡ್‌ಗಳನ್ನು ಸೋಲಿಸುವುದು.
- ಈ ಕಾಫಿ ಕ್ಲಬ್‌ನ ಪ್ರಮುಖ ದೇಶಗಳೆಂದರೆ ಇಟಲಿ, ಪಾಕಿಸ್ತಾನ, ದಕ್ಷಿಣ ಕೊರಿಯಾ, ಮೆಕ್ಸಿಕೊ ಮತ್ತು ಅರ್ಜೆಂಟೀನಾ. ಇತರೆ ಕಾಫಿ ಕ್ಲಬ್ ಸದಸ್ಯರು ಅವರಿಗೆ ಲಾಭದಾಯಕವಾಗಿರುವಂತಹ ಸುಧಾರಣೆಯ ಯೋಜನೆಗಳನ್ನು ಮಾತ್ರ ಬೆಂಬಲಿಸುತ್ತಾರೆ.
- ಜಾಗತಿಕವಾಗಿ ತಮ್ಮ ರಾಜಕೀಯ ಮತ್ತು ಆರ್ಥಿಕ ಪ್ರತಿಸ್ಪರ್ಧಿಗಳು ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವವನ್ನು ಪಡೆಯದಂತೆ ತಡೆಯುವುದೇ ಈ ಗುಂಪಿನ ಸದಸ್ಯರ ಪ್ರಧಾನ ಉದ್ದೇಶವಾಗಿದೆ.

  ಉದಾಹರಣೆಗೆ, ಕೆನಡಾ, ಭದ್ರತಾ ಮಂಡಳಿಗೆ ಹೆಚ್ಚು ಶಾಶ್ವತ ಸದಸ್ಯರನ್ನು ಸೇರಿಸುವ ಮೂಲಕ ತನ್ನ ಹತ್ತಿರದ ಮಿತ್ರರಾಷ್ಟ್ರಗಳ (ಅಮೆರಿಕ ಮತ್ತು ಬ್ರಿಟನ್) ಶಕ್ತಿಯನ್ನು ದುರ್ಬಲಗೊಳಿಸುವುದನ್ನು ಬಯಸುವುದಿಲ್ಲ.
- ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವಕ್ಕಾಗಿ ಪ್ರಯತ್ನಿಸುತ್ತಿರುವ ಜರ್ಮನಿಯ ಪ್ರಯತ್ನವನ್ನು ಇಟಲಿ ಮತ್ತು ಸ್ಪೇನ್ ವಿರೋಧಿಸಿದರೆ, ಪಾಕಿಸ್ತಾನವು ಭಾರತದ ಪ್ರಯತ್ನವನ್ನು ವಿರೋಧಿಸಿದೆ.
- ಅದೇ ರೀತಿ ಅರ್ಜೆಂಟೀನಾ ಬ್ರೆಜಿಲ್‌ನ ಬಿಡ್‌ಗೆ ವಿರುದ್ಧವಾಗಿದ್ದರೆ ಆಸ್ಟ್ರೇಲಿಯಾವು ಜಪಾನ್‌ನ ಪ್ರಯತ್ನಗಳನ್ನು ಸೋಲಿಸಲು ಪ್ರಯತ್ನಿಸುತ್ತದೆ.
- ಕೆನಡಾ ಮತ್ತು ದಕ್ಷಿಣ ಕೊರಿಯಾಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಒಳಗೊಳ್ಳುವಿಕೆಯನ್ನೇ ವಿರೋಧಿಸುತ್ತವೆ.

ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದರೆ,ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವ ಪಡೆದ ದೇಶಗಳು, ತಮ್ಮ ಸ್ಥಾಪನೆಯ ಉದ್ದೇಶವಾದ 'ವಿಶ್ವ ಶಾಂತಿಯ ಉಳಿವಿಗೆ' ಶ್ರಮಿಸುವುದಕ್ಕೆ ಬದಲಾಗಿ, ತಮ್ಮ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಲು ಈ ವೀಟೊ ಅಧಿಕಾರವನ್ನು ಬಳಸುತ್ತಿವೆ ಎನ್ನುವುದು ಜಾಗತಿಕವಾಗಿ ಕೇಳಿ ಬರುತ್ತಿರುವ ಆರೋಪವಾಗಿದೆ..

ಭಾಷಾ ಪ್ರೌಢಿಮೆ ಪರೀಕ್ಷಿಸುವ 'ಪತ್ರಿಕೆ'ಗಳು

ಯುಪಿಎಸ್‌ಸಿ ಮುಖ್ಯ ಪರೀಕ್ಷೆಯ ಪೇಪರ್ ಎ ಮತ್ತು ಬಿ ಎರಡು ಪತ್ರಿಕೆಗಳು ಅಭ್ಯರ್ಥಿಗಳ ಭಾಷಾ ಕಲಿಕೆ, ಅರ್ಥ ವಿಶ್ಲೇಷಣೆ, ಅನುವಾದ, ಕಿರು ಬರಹ ರಚನೆಯ ಸಾಮರ್ಥ್ಯವನ್ನು ಅಳೆಯುತ್ತವೆ. ಮುಂದಿನ ಹಂತಕ್ಕೆ ಅರ್ಹತೆ ಗಳಿಸಲು ಈ ಪತ್ರಿಕೆಗಳಲ್ಲಿ ಶೇ 25 ರಷ್ಟು ಅಂಕಗಳನ್ನು ಗಳಿಸಲೇಬೇಕು.

ಗುರುರಾಜ್ ಎಸ್. ದಾವಣಗೆರೆ

ಸಿವಿಲ್ ಸರ್ವೀಸಸ್ ಪರೀಕ್ಷೆ ಪಾಠ–9

ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಮುಖ್ಯ ಪರೀಕ್ಷೆಯ ಅವಿಭಾಜ್ಯ ಅಂಗಗಳಾದ ಪೇಪರ್ ಎ (ಕಡ್ಡಾಯ ಭಾರತೀಯ ಭಾಷೆ) ಮತ್ತು ಪೇಪರ್ ಬಿ (ಇಂಗ್ಲಿಷ್)ಗಳ ಅಂಕಗಳು ಅಭ್ಯರ್ಥಿಯ ಒಟ್ಟು ರ‍್ಯಾಂಕ್ ನಿರ್ಧರಿಸುವುದರಲ್ಲಿ ನಿರ್ಣಾಯಕ ಪಾತ್ರ ವಹಿಸುವುದಿಲ್ಲ. ಆದರೆ ಅಭ್ಯರ್ಥಿಗಳ ಭಾಷಾ ಕಲಿಕೆ, ಅರ್ಥ ವಿಶ್ಲೇಷಣೆ, ಅನುವಾದ, ಕಿರು ಬರಹ ರಚನೆಯ ಸಾಮರ್ಥ್ಯವನ್ನು ಅಳೆಯತ್ತವೆ. ಮುಂದಿನ ಹಂತಕ್ಕೆ ಅರ್ಹತೆ ಗಳಿಸಲು ಮುನ್ನೂರು ಅಂಕಗಳ ಎರಡು ಪತ್ರಿಕೆಗಳಲ್ಲಿ ಶೇ 25ರಷ್ಟು ಅಂದರೆ 75 ಅಂಕಗಳನ್ನು ಗಳಿಸಲೇಬೇಕು. ಇಲ್ಲದಿದ್ದಲ್ಲಿ ಉಳಿದ ಏಳು ಪತ್ರಿಕೆಗಳಲ್ಲಿ ಎಷ್ಟೇ ಹೆಚ್ಚು ಅಂಕ ಬಂದಿದ್ದರೂ ಯುಪಿಎಸ್‌ಸಿಯು ಅಭ್ಯರ್ಥಿಗಳಿಗೆ ಅದನ್ನು ತಿಳಿಸುವುದಿಲ್ಲ. ಮೂರುಗಂಟೆಗಳ ಅವಧಿಯಲ್ಲಿ ಪ್ರಶ್ನೆಪತ್ರಿಕೆಗೆ ಉತ್ತರ ಬರೆಯಬೇಕು. ಸಾಮಾನ್ಯ ಅಧ್ಯಯನ ಮತ್ತು ಐಚ್ಛಿಕ ವಿಷಯಗಳ ಬಗ್ಗೆ ಹೆಚ್ಚು ತಯಾರಿ ನಡೆಸುವ ಅಭ್ಯರ್ಥಿಗಳು ಈ ಎರಡು ಪತ್ರಿಕೆಗಳನ್ನು ನಿರ್ಲಕ್ಷಿಸುವುದು ಪ್ರತಿ ವರ್ಷದ ಪರೀಕ್ಷೆಯಲ್ಲಿ ಕಂಡು ಬಂದಿದೆ. ಕಳೆದ ವರ್ಷ ಶೇ 10ರಷ್ಟು ವಿದ್ಯಾರ್ಥಿಗಳು ಈ ಎರಡೂ ಪತ್ರಿಕೆಗಳಲ್ಲಿ ಅರ್ಹತೆಗೆ ಬೇಕಾದಷ್ಟು ಅಂಕ ಗಳಿಸಿರಲಿಲ್ಲ!

'ಪತ್ರಿಕೆ ಎ' -ಪ್ರಶ್ನೆಗಳ ಸ್ವರೂಪ

ಪ್ರಶ್ನೆಪತ್ರಿಕೆಯಲ್ಲಿ ನೂರು ಅಂಕಗಳ ಒಂದು ಕಿರು ಪ್ರಬಂಧ, 60 ಅಂಕಗಳ ರೀಡಿಂಗ್ ಕಾಂಪ್ರೆಹೆನ್ಷನ್ (ಓದಿನ ಗ್ರಹಿಕೆ), 60 ಅಂಕಗಳ ಪ್ರಿಸೀಸ್ (ಸಾರಾಂಶ) ರೈಟಿಂಗ್ 40 ಅಂಕಗಳ ಭಾಷಾನುವಾದ, 40 ಅಂಕಗಳ ವ್ಯಾಕರಣ ಪದಸಂಪತ್ತು ಮತ್ತು ಬಳಕೆಯ ಕುರಿತು ಪ್ರಶ್ನೆಗಳಿರುತ್ತವೆ. ಪ್ರಶ್ನೆಗಳು 10 ರಿಂದ 12ನೆಯ ತರಗತಿಯ ಮಟ್ಟದಲ್ಲಿರುತ್ತವೆ. ನೀವು ಶಾಲೆಯಲ್ಲಿ ಕಲಿತ ಪ್ರಥಮ ಭಾಷೆಯನ್ನೇ ಆಯ್ಕೆ ಮಾಡಿಕೊಂಡರೆ ಎದುರಿಸುವುದು ಸುಲಭ. ಇದು ನೀವೇ ಆಯ್ಕೆ ಮಾಡಿಕೊಂಡ ಭಾಷೆಯ ಪತ್ರಿಕೆಯಾದ್ದರಿಂದ ಸಹಜವಾಗಿಯೇ ನೀವು ಆತ್ಮವಿಶ್ವಾಸದಿಂದಿರುತ್ತೀರಿ. ಆದರೆ ಹೈಸ್ಕೂಲು ಶಿಕ್ಷಣದ ನಂತರ ಭಾಷೆಯ ವ್ಯಾಕರಣ, ಪದ ಸಂಪತ್ತು, ವಿಶೇಷ ವಾಕ್ಯರಚನೆಯ ಪರಿಣತಿಗಳೆಲ್ಲ ಮಸುಕಾಗಿರುತ್ತವೆ. ಪರೀಕ್ಷೆಗಾಗಿ ನಾವಾಡುವ ಭಾಷೆಯನ್ನೇ ಆಯ್ಕೆ ಮಾಡಿಕೊಂಡಾಗ ಅದರ ಬಗೆಗಿನ ಮುಖ್ಯ ಪುಸ್ತಕಗಳನ್ನು ಪುನಃ ಓದುವುದು ಅನಿವಾರ್ಯ. ಹಾಗೆಯೇ, ಪರೀಕ್ಷೆಗೆ ತಯಾರಾಗಲು ಬರೆಯುವುದನ್ನೂ ರೂಢಿಸಿಕೊಳ್ಳಿ. ಕಾಗುಣಿತಗಳಲ್ಲಿ(ಸ್ಪೆಲ್ಲಿಂಗ್) ತಪ್ಪುಗಳಾಗಬಾರದು. ಬರವಣಿಗೆ ಸರಳವಾಗಿದ್ದರೂ ಸ್ಫುಟವಾಗಿ ಮತ್ತು ವ್ಯಾಕರಣಬದ್ಧವಾಗಿರಲಿ. ಇಷ್ಟದ ಭಾಷೆಯಾದರೆ ಸಾಲದು, ಅದರ ಬಳಕೆ, ಬರವಣಿಗೆಯಲ್ಲಿ ಪ್ರಭುತ್ವವಿರಬೇಕು.

ವಿಷಯಾಂತರವಾಗದಿರಲಿ ಭಾಷಾಂತರ

ಭಾಷಾಂತರದ ಪ್ರಶ್ನೆಗಳಲ್ಲಿ ನೀವು ಆಯ್ಕೆ ಮಾಡಿಕೊಂಡ ಭಾಷೆಯಿಂದ ಇಂಗ್ಲಿಷ್‌ಗೆ, ಇಂಗ್ಲಿಷ್‌ನಿಂದ ನಿಮ್ಮ ಆಯ್ಕೆಯ ಭಾಷೆಗೆ ಭಾಷಾಂತರಿಸಬೇಕಾಗುತ್ತದೆ. ಪದ - ಪದದ ಯಥಾವತ್ ಭಾಷಾಂತರ ಮಾಡಬಾರದು. ಕೊಟ್ಟಿರುವ ಪ್ಯಾಸೇಜ್‌ನ ಅರ್ಥ ವ್ಯತ್ಯಾಸವಾಗದಂತೆ ಮತ್ತು ಯಾವ ಮುಖ್ಯ ವಿಷಯವನ್ನೂ ಬಿಡದೆ ಭಾಷಾಂತರಿಸಿ. ಪ್ರಶ್ನೆಪತ್ರಿಕೆಯಲ್ಲಿ ತಲಾ 20 ಅಂಕಗಳ ಎರಡು ಪ್ರಶ್ನೆಗಳಿರುತ್ತವೆ. ಪರಿಣಾಮಕಾರಿಯಾಗಿ ಉತ್ತರಿಸಲು ದಿನಪತ್ರಿಕೆಗಳ ಸಂಪಾದಕೀಯ ವಿಭಾಗದ ಲೇಖನಗಳನ್ನು ತಪ್ಪದೆ ಓದಿ ಅನುವಾದಿಸುವುದನ್ನು ಕಲಿಯಿರಿ. ಪ್ರಶ್ನೆಗಳ ಪದಗಳ ನಾನಾರ್ಥ, ವಿರುದ್ಧಾರ್ಥ, ಒಳಾರ್ಥ, ಸಂದರ್ಭಾರ್ಥ ಗ್ರಹಿಸಲು ನಿಘಂಟು ಮತ್ತು ಚಿತ್ರಾಧಾರಿತ ಶಬ್ದ ಕೋಶಗಳನ್ನು ಓದಿರಿ.

ಕಡ್ಡಾಯ ಇಂಗ್ಲಿಷ್ ಪೇಪರ್ 'ಬಿ' ಗೆ ತಯಾರಿ

ಸಂವಿಧಾನದ 25ನೇ ವಿಧಿ ದೇಶದ ಪ್ರತಿಯೊಬ್ಬ ಪ್ರಜೆಗೂ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ನೀಡಿದೆ. ಕಾನೂನು ಸುವ್ಯವಸ್ಥೆಗೆ ತೊಂದರೆ ಆಗದಂತೆ, ಯಾವುದೇ ವ್ಯಕ್ತಿ ತನಗೆ ಬೇಕಾದ ಧರ್ಮವನ್ನು ಅನುಸರಿಸುವ, ಅದರ ಬಗೆಗೆ ಪ್ರಚಾರ ಮಾಡುವ ಅವಕಾಶವನ್ನು ಸಂವಿಧಾನ ಒದಗಿಸಿದೆ. ‘ಬಲವಂತದ ಮತಾಂತರವನ್ನು ತಡೆಯುವುದು ಮತ್ತು ಇಂತಹ ಕೃತ್ಯವನ್ನು ಜಾಮೀನುರಹಿತ ಅಪರಾಧವನ್ನಾಗಿ ಪರಿಗಣಿಸುವುದು’ ಮುಖ್ಯ ಉದ್ದೇಶ ಎಂದೇನೋ ಸುಗ್ರೀವಾಜ್ಞೆಯಲ್ಲಿ ವಿವರಿಸಲಾಗಿದೆ. ಆದರೆ, ಕ್ರೈಸ್ತ ಸಮುದಾಯದವರು ಮತ್ತು ಸ್ವಯಂಪ್ರೇರಣೆಯಿಂದ ಮತಾಂತರ ಹೊಂದಲು ಬಯಸಿದವರಿಗೆ ಅಡೆತಡೆ ಉಂಟುಮಾಡುವುದೇ ಈ ಕಾಯ್ದೆಯ ಮುಖ್ಯ ಗುರಿ ಎಂಬ ವಾದ ಇದೆ. ಯಾವುದೇ ವ್ಯಕ್ತಿ ಮತಾಂತರ ಹೊಂದಲು ಬಯಸಿದರೆ ಕನಿಷ್ಠ 30 ದಿನಗಳ ಮುಂಚಿತವಾಗಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಎದುರು ಘೋಷಣಾಪತ್ರ ಸಲ್ಲಿಸಬೇಕು. ಸಂವಿಧಾನ ನೀಡಿದ ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿಗೆ ಈ ಕಾಯ್ದೆಯಲ್ಲಿನ ಹಲವು ಅಂಶಗಳು ಸಂಪೂರ್ಣ ತದ್ವಿರುದ್ಧವಾಗಿವೆ. ‘ಇಂತಹ ವ್ಯಕ್ತಿ’ ಮತಾಂತರವಾಗಲು ಬಯಸಿದ್ದಾನೆ ಎಂಬ ಮಾಹಿತಿ ಹಿಂದುತ್ವದ ಪ್ರಬಲ ಪ್ರತಿಪಾದಕ ಸಂಘಟನೆಗಳಿಗೆ ಮುಂಚಿತವಾಗಿ ತಿಳಿದರೆ ನಂತರದ ಸಂಭಾವ್ಯ ಘಟನಾವಳಿಗಳು ನಿಜಕ್ಕೂ ಕಳವಳಕಾರಿ. ಅದೂ ಅಲ್ಲದೆ, ಈ ಕಾಯ್ದೆ ಅಡಿಯಲ್ಲಿ ತಪ್ಪಿತಸ್ಥರು ಎಂದು ಪರಿಗಣಿಸಲ್ಪಟ್ಟವರಿಗೆ ಜೈಲು ಶಿಕ್ಷೆ ವಿಧಿಸಬಹುದಾಗಿದೆ.

ಇಂತಹದ್ದೊಂದು ಕಾಯ್ದೆಯ ಜರೂರತ್ತು ನಿಜಕ್ಕೂ ಇದ್ದರೆ ವಿಧಾನ ಪರಿಷತ್‌ನಲ್ಲೂ ಆ ಕುರಿತು ಮನವರಿಕೆ ಮಾಡಿ, ಅಲ್ಲಿ ಅಂಗೀಕಾರ ಪಡೆದ ಬಳಿಕ ಅನುಷ್ಠಾನಕ್ಕೆ ಮುಂದಾಗಬೇಕಿತ್ತು. ಇಷ್ಟೊಂದು ಆತುರಕ್ಕೆ ಯಾವ ಕಾರಣವೂ ಕಾಣುತ್ತಿಲ್ಲ. ಈ ಆತುರದ ಕ್ರಮವು ಉದ್ಯೋಗವನ್ನು ಸೃಷ್ಟಿಸುವುದೇ, ಕೋವಿಡ್‌ನಿಂದಾಗಿ ಮೃತರಾದವರಿಗೆ ಮರುಜೀವ ಕೊಡುವುದೇ ಎಂಬ ವಿರೋಧ ಪಕ್ಷದ ನಾಯಕರ ಪ್ರಶ್ನೆಗಳಲ್ಲಿ ಹುರುಳಿದೆ. ಕೆಲವು ತಿಂಗಳುಗಳ ಹಿಂದೆ, ಹೊಸದುರ್ಗದ ಬಿಜೆಪಿ ಶಾಸಕ ಗೂಳಿಹಟ್ಟಿ ಶೇಖರ್, ತಮ್ಮ ತಾಯಿಯೂ ಸೇರಿದಂತೆ ದೊಡ್ಡಸಂಖ್ಯೆಯ ಜನರನ್ನು ಬಲವಂತದಿಂದ ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಲಾಗಿದೆ ಎಂದು ಆರೋಪಿಸಿದ್ದರು. ಸರ್ಕಾರವೇ ಆದೇಶಿಸಿದ್ದ ವಿಚಾರಣೆಯಿಂದ ಆ ಆರೋಪ ಸುಳ್ಳು ಎನ್ನುವುದು ಬಯಲಾಗಿತ್ತು. ಬಲವಂತದ ಮತಾಂತರದ ವಿರುದ್ಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ದೂರುಗಳ ವಿವರವನ್ನಾಗಲೀ ಬಲವಂತದ ಮತಾಂತರಗಳು ಮಿತಿಮೀರಿವೆ ಎಂಬುದನ್ನು ಸಮರ್ಥಿಸುವ ಅಂಕಿಅಂಶವನ್ನಾಗಲೀ ಒದಗಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ವಾಸ್ತವ ಚಿತ್ರಣ ಹೀಗಿರುವಾಗ, ಸುಗ್ರೀವಾಜ್ಞೆಯ ಉದ್ದೇಶದಲ್ಲಿಯೇ ಹುಳುಕಿದೆ ಎಂದು ಹೇಳದೆ ವಿಧಿಯಿಲ್ಲ.

ದಿನದ ಟ್ವೀಟ್

ವೈಫಲ್ಯದ ಪರಿಣಾಮ...

ಭಾರತದಲ್ಲಿ ಸಗಟು ಬೆಲೆ ಸೂಚ್ಯಂಕದ ಮೂಲಕ ಅಳೆಯಲಾಗುವ ಹಣದುಬ್ಬರವು ಕಳೆದ ಎರಡು ವರ್ಷಗಳಿಂದ ತಿಂಗಳಿನಿಂದ ತಿಂಗಳಿಗೆ ಹೆಚ್ಚುತ್ತಲೇ ಹೋಗುತ್ತಿದೆ. ಇದು, ಕೆಳ ಮತ್ತು ಮಧ್ಯಮ ವರ್ಗದವರಲ್ಲಿ ಹತಾಶೆಯನ್ನು ಉಂಟುಮಾಡಿದೆ. ಈಗ ನಾಗಾಲೋಟದಿಂದ ಎರಡಂಕಿಯ ದರದಲ್ಲಿ ಸಾಗುತ್ತಿದೆ. ಈ ಬಗೆಯ ವೈಫಲ್ಯವು ರಾಜಕೀಯ ಪರಿಣಾಮಗಳಿಗೆ ಕಾರಣವಾಗುತ್ತದೆ.

ಸುಬ್ರಮಣಿಯನ್ ಸ್ವಾಮಿ, ಬಿಜೆಪಿ ಮುಖಂಡ

ಕಿಡಿನುಡಿ

ರಾಜಕೀಯ ಪಕ್ಷಗಳಿಗೆ ತಮಗೆ ಸರಿಕಂಡ ವ್ಯಕ್ತಿಗಳನ್ನು ಆರಾಧಿಸುವ, ಅವರ ಚಿಂತನೆಗಳನ್ನು ಪ್ರಚಾರ ಮಾಡುವ ಅಧಿಕಾರವಿದೆ. ಆದರೆ ಶಿಕ್ಷಣ ಕ್ಷೇತ್ರವನ್ನು ಸ್ವಾರ್ಥ ರಾಜಕೀಯದ ರಾಡಿಯಿಂದ ಮಲಿನಗೊಳಿಸಬಾರದು. #ಪಠ್ಯಪರಿಷ್ಕರಣೆ

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ — ಸೋಮವಾರ, 19-5-1997

- **ತುಂಗಾ ನದಿ ಮೇಲ್ದಂಡೆ ನಿರ್ಮಾಣ ನಿಲ್ಲದು: ಪಟೇಲ್**

ಬಳ್ಳಾರಿ, ಮೇ 18– ತುಂಗಾ ಮೇಲ್ದಂಡೆ ಯೋಜನೆಗಳ ಕಾಮಗಾರಿ ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ತುಂಗಾ ಮೇಲ್ದಂಡೆ ಯೋಜನೆಯ ಜೊತೆಗೆ ಭದ್ರಾ ಹಾಗೂ ತುಂಗಾ ಹೊರಳು ಯೋಜನೆಗಳ ಕಾಮಗಾರಿಯನ್ನೂ ರಾಜ್ಯ ಸರ್ಕಾರ ಶೀಘ್ರವೇ ಕೈಗೆತ್ತಿಕೊಳ್ಳಲಿದ್ದು ಇವುಗಳಿಗೆ ಕೇಂದ್ರದ ಪರವಾನಗಿ ಪಡೆಯುವ ಅಗತ್ಯವೇನಿಲ್ಲವೆಂದು ಅವರು ಸ್ಪಷ್ಟಪಡಿಸಿದರು.

- **ತೀರ್ಪು ಉಲ್ಲಂಘನೆ: ಕರ್ನಾಟಕದ ವಿರುದ್ಧ ಕ್ರಮ– ನಾಯ್ಡು**

ಹೈದರಾಬಾದ್, ಮೇ 18 (ಯುಎನ್‌ಐ)– ಸತತವಾಗಿ ಬಚಾವತ್ ಆಯೋಗದ ತೀರ್ಪನ್ನು ಉಲ್ಲಂಘನೆ ಮಾಡುತ್ತಿರುವ ಕರ್ನಾಟಕದ ವಿರುದ್ಧ ಇನ್ನು ಕೆಲವೇ ದಿನಗಳಲ್ಲಿ ತಮ್ಮ ಸರ್ಕಾರ ವ್ಯವಸ್ಥಿತ ಕ್ರಮ ಕೈಗೊಳ್ಳಲಿದೆ ಎಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಇಂದು ಇಲ್ಲಿ ಹೇಳಿದರು.

50 ವರ್ಷಗಳ ಹಿಂದೆ — ಶುಕ್ರವಾರ, 19-5-1972

- **ಎಸ್‌ಎಸ್‌ಎಲ್‌ಸಿ ರದ್ದು– ಸರಳ ಆಂತರಿಕ ಪರೀಕ್ಷೆ ವ್ಯವಸ್ಥೆಗೆ ಸಲಹೆ**

ಬೆಂಗಳೂರು, ಮೇ 18– ಈಗಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ವ್ಯವಸ್ಥೆಯನ್ನು ಕಿತ್ತುಹಾಕಿ, ಆಯಾ ಶಾಲೆಗಳೇ ಸರಳ ಆಂತರಿಕ ಪರೀಕ್ಷೆಗಳನ್ನು ನಡೆಸುವ ಕ್ರಮ ಜಾರಿಗೆ ತರಬೇಕೆಂಬ ಕ್ರಾಂತಿಕಾರಿ ಸಲಹೆಯನ್ನು ಶಾಲಾ ವ್ಯವಸ್ಥೆ ಪುನರ್‌ರಚನೆ ವಿಶೇಷಾಧಿಕಾರಿ ಪ್ರೊ. ಎ.ಸಿ.ದೇವೇಗೌಡರು ಸರ್ಕಾರದ ಮುಂದೆ ಮಂಡಿಸಿದ್ದಾರೆ.

ಬೋಧನೆ, ಪರೀಕ್ಷೆ ಮತ್ತು ಉದ್ಯೋಗಗಳ ನಡುವಿನ ‘ಅಪವಿತ್ರ ಸಂಬಂಧ’ವನ್ನು ಮುರಿಯಲು ಸಹಾಯಕವಾಗುವ ಈ ಸಲಹೆಯ ಪ್ರಕಾರ, ಕೆಲಸ ದೊರೆಯಲು ಬರೇ ಎಸ್‌ಎಸ್‌ಎಲ್‌ಸಿ ಸರ್ಟಿಫಿಕೇಟು ಅಥವಾ ಪದವಿ ಸರ್ಟಿಫಿಕೇಟುಗಳು ಮುಖ್ಯ ಆಧಾರವಾಗಿರಬೇಕಾಗಿಲ್ಲ.

ಕೆಲಸ ಸಿಗಲು ಅರ್ಹತೆಯು ಎಸ್‌ಎಸ್‌ಎಲ್‌ಸಿಯಲ್ಲಿ ತೇರ್ಗಡೆಯಾಗಿರುವ ಬದಲು, ಒಬ್ಬ ವ್ಯಕ್ತಿ ಯಾವ ಇಲಾಖೆ ಸೇರಬಯಸುತ್ತಾನೋ ಆ ಇಲಾಖೆಯ ಅವಶ್ಯಕತೆಗಳಿಗೆ ಅನುಗುಣವಾದಂತೆ, ಇಲಾಖಾ ಪರೀಕ್ಷೆಗೆ ಒಳಪಡುತ್ತಾನೆ. ಇಲ್ಲಿ ಅರ್ಹತೆಗೆ ಪ್ರಾಮುಖ್ಯ; ಪರೀಕ್ಷೆಗಳಲ್ಲಿ ಗಳಿಸಿರುವ ಅಂಕಗಳಿಗಲ್ಲ.

ಅಭ್ಯರ್ಥಿಯು ಶಾಲೆ, ಕಾಲೇಜುಗಳಿಗೆ ಹೋಗಿದ್ದಾನೆ ಎಂಬುದನ್ನು ತೋರಿಸಲು ಶಾಲೆ, ಕಾಲೇಜುಗಳು ತಮ್ಮದೇ ಆದ ಸರಳ ಪರೀಕ್ಷೆಗಳನ್ನು ನಡೆಸಿ, ಅಭ್ಯರ್ಥಿ ಇಷ್ಟರವರೆಗೆ ಕಲಿತಿದ್ದಾನೆ ಎಂದು ಸರ್ಟಿಫಿಕೇಟುಗಳನ್ನು ಕೊಡಬಹುದು.

ಪ್ರೀತಿಯೇ ಸಿದ್ಧಾಂತವೂ ಕ್ರಿಯೆಯೂ ಆದಾಗ ನಾವು ಎಂಬುದು ಹುಟ್ಟಿ ನಾನೆಂಬುದು ಅಳಿಯುತ್ತದೆ

ಮನ ಮಂದಿರದಲಿ ನಲ್ಮೆಯೊಲುಮೆ

ವಿಶ್ಲೇಷಣೆ

ಡಾ. ಸಬಿತಾ ಬನ್ನಾಡಿ

ಅಂದು ರಸ್ತೆಯ ಇಕ್ಕೆಲದಲ್ಲೂ ಜನ ಸಾಲಾಗಿ ನಿಂತು ಕುತೂಹಲ ತಣಿಸಿಕೊಳ್ಳುತ್ತಿದ್ದರು. ಒಂದು ಮದುವೆಯ ದಿಬ್ಬಣ ಹತ್ತಿರದಲ್ಲೇ ಇದ್ದ ದಲಿತರ ಕೇರಿಯ ಕಡೆಗೆ ಹೋಗುತ್ತಿತ್ತು. ಅಚ್ಚ ಕಪ್ಪು ಹುಡುಗ ಮತ್ತು ಸಾಧಾರಣ ಬೆಳ್ಳಗಿನ ಹುಡುಗಿ. ದಿಬ್ಬಣ ಮುಂದಕ್ಕೆ ಹೋಗುತ್ತಿದ್ದಂತೆ ಅಲ್ಲಿ ಸೇರಿದ್ದ ಹೆಂಗಳೆಯರು ‘ಶ್ಯೆ! ಈ ಹುಡುಗಿಗೆ ಏನಾಯ್ತು. ಈ ಕೇರಿ ಹುಡುಗನ್ನ ಮದ್ವೆ ಆಗಿದ್ದಾಳಲ್ಲ? ಅದು ಹೇಗೆ ಆ ಕೇರಿಯಲ್ಲಿ ಬದುಕುತ್ತಾಳೋ’ ಅಂತ ಸಂತಾಪ ಪಡುತ್ತಿದ್ದರು.

ಇದು ಸುಮಾರು ನಲವತ್ತೈದು ವರ್ಷಗಳ ಹಿಂದಿನ ಮಾತು. ಆಕೆ ಒಬ್ಬ ಮುಸ್ಲಿಂ ಆಗಿದ್ದು, ಸರ್ಕಾರಿ ನೌಕರಿಯಲ್ಲೂ ಇದ್ದಳು. ಅಸ್ಪೃಶ್ಯತೆ ಮಗುಮ್ಮಾಗಿ ಆಚರಣೆಯಲ್ಲಿದ್ದ ಆ ಕಾಲದಲ್ಲಿ ದಲಿತ ಹುಡುಗನೊಂದಿಗಿನ ಆಕೆಯ ಮದುವೆಯು ಕೇರಿಯ ಸುತ್ತಮುತ್ತ ಇದ್ದ ಸ್ಪೃಶ್ಯರಿಗೆ ವಿಚಿತ್ರ ಎನಿಸುತ್ತಿತ್ತು. ಮಾತ್ರವಲ್ಲ ಆಕೆ ಮೇಲ್ಜಾತಿಯವಳು ಎಂಬ ನಂಬಿಕೆಯಿತ್ತು. ಇಷ್ಟಾಗಿಯೂ ಅಲ್ಲಿ ಯಾರೂ ಹಲ್ಲು ಕಚ್ಚಿ ಸಿಟ್ಟು ತೋರುತ್ತಿರಲಿಲ್ಲ. ಅವಳು ಹೇಗೆ ಬಾಳುತ್ತಾಳೋ ಎಂಬ ಕಲ್ಪಿತ ಆತಂಕ ಇತ್ತೇ ವಿನಾ ಅವಳನ್ನಾಗಲೀ ಅವನನ್ನಾಗಲೀ ಚಚ್ಚಿ ಕೊಂದು ಹಾಕಬೇಕು ಎಂಬ ಆಕ್ರೋಶ ಇರಲಿಲ್ಲ. ಅವಳು ಅವರೆಲ್ಲರೆದುರಲ್ಲಿ ಅದೇ ಕೇರಿಯಲ್ಲಿ ಬಾಳಿ ಬದುಕಿದಳು.

ಬಾಲ್ಯದಲ್ಲಿ ನಾನು ಕಂಡ ಈ ದೃಶ್ಯ ನನ್ನ ಕಣ್ಣ ಮುಂದೆ ಹಾಗೇ ಅಚ್ಚಳಿಯದೆ ಉಳಿದಿದೆ. ಇಷ್ಟು ವರ್ಷಗಳ ನಂತರ ಪ್ರೇಮವಿವಾಹದ ಬಗೆಗೆ ಸಹನೀಯತೆ, ಒಂದು ವೇಳೆ ಅದು ಸಫಲವಾಗದಿದ್ದಲ್ಲಿ ಅದರಿಂದ ಹೊರಬರಲು ಕಾನೂನುಸಮ್ಮತ ದಾರಿಯಿದೆ ಎಂಬ ಉದಾರತೆ ನಮ್ಮೊಳಗೆ ಬೆಳೆಯಬೇಕಿತ್ತು. ಆದರೆ ಕಳೆದ ತಿಂಗಳು ಹೈದರಾಬಾದ್‌ನಲ್ಲಿ ಮುಸ್ಲಿಂ ಹುಡುಗಿಯನ್ನು ಮದುವೆಯಾದ ದಲಿತ ಹುಡುಗನನ್ನು ಮರ್ಯಾದೆಯ ಹೆಸರಿನಲ್ಲಿ ಸಾಯಬಡಿದಾಗ, ಜನ ಆ ಕೊಲೆಯನ್ನು ವಿಡಿಯೊ ಮಾಡಿದರೇ ವಿನಾ ಆತನನ್ನು ರಕ್ಷಿಸಲಿಲ್ಲ. ಈ ಎರಡು ಘಟನೆಗಳ ನಡುವಿನ ಈ ಅಂತರ ಹೇಗೆ ಸಂಭವಿಸಿತು? ಮನುಷ್ಯನೊಳಗಿನ ಪ್ರೀತಿ, ಕರುಣೆ ಎಂಬ ಭಾವ ಬತ್ತಿ ಹೋಗಿದೆಯೇ?

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿನ ಸುಧಾರಣಾವಾದ ಅನೇಕ ಅಮಾನವೀಯ ಸಂಪ್ರದಾಯಗಳನ್ನು ಪ್ರಶ್ನಿಸಿ ತಿದ್ದಿ ತೀಡಲು ಪ್ರಯತ್ನಿಸಿತು. ಆ ನಂತರದಲ್ಲಿ ಜನರ ಮನಸ್ಸಿನಲ್ಲಿ ವ್ಯಾಪಕ ಪರಿಣಾಮ ಬೀರಿದ ಸಿನಿಮಾ ಮತ್ತು ಸಾಹಿತ್ಯವು ಪ್ರೀತಿಯನ್ನು ಒಂದು ಮೌಲ್ಯವಾಗಿ ಮುನ್ನೆಲೆಗೆ ತಂದವು. ಅನೇಕ ದುರಂತ ಅಂತ್ಯದ ಪ್ರೀತಿ ಕಥಾನಕಗಳು ನೋಡುಗರು, ಓದುಗರ ಮನ ಕರಗುವಂತೆ ಮಾಡಿದವು. ಜಾತಿ, ಧರ್ಮದಾಚೆಗಿನ ಮದುವೆಗಳ ಕುರಿತು ಸಾಮಾಜಿಕ ಅಸಹನೆ ಇದ್ದೂ, ಅವರು ಎಲ್ಲಾದರೂ ಬದುಕಿಕೊಳ್ಳಲಿ ಎಂದು ಅವರನ್ನು ಕುಟುಂಬಗಳಿಂದ ದೂರ ಮಾಡುವ ಕಠಿಣತೆಯನ್ನು ತೋರಿತು ವಿನಾ ಅವರ ಬದುಕನ್ನು ನಾಶ ಮಾಡಲಿಲ್ಲ.

‘ಪ್ರೀತಿ ಎಂಬುದೊಂದು ಕಲೆಯಾಗಿದ್ದು, ಎಲ್ಲವನ್ನೂ ಕಲಿಯುವ ನಾವು ಪ್ರೀತಿಯನ್ನು ಕಲಿಯಲು ಮನಸ್ಸು ಮಾಡುವುದಿಲ್ಲ’ ಎಂದು ಎರಿಕ್ ಫ್ರಾಮ್ ಹೇಳುತ್ತಾರೆ. ಪ್ರೀತಿ ಕೂಡಾ ಪಿತೃಪ್ರಾಧಾನ್ಯದ ವ್ಯಾಖ್ಯೆಯಲ್ಲಿ ನರಳುತ್ತಿದೆ. ಗಂಡು ಹೆಣ್ಣು ಒಬ್ಬರನ್ನೊಬ್ಬರು ಇಷ್ಟಪಟ್ಟ ಮೇಲೆ, ಆಕೆ ಅವನನ್ನು ಒಪ್ಪಿಕೊಂಡ ಮೇಲೆ ಅವನ ಬದುಕಿಗೆ ತನ್ನನ್ನು ಸಂಪೂರ್ಣ ಕೊಟ್ಟುಕೊಳ್ಳುವುದು ಮತ್ತು ಅವನು ಆಕೆಯ ಎಲ್ಲಾ ಇಚ್ಛೆಯನ್ನು ಪೂರೈಸಿ ಅವಳನ್ನು ಸಂತೃಪ್ತಿಯಿಂದ ನಡೆಸಿಕೊಳ್ಳುವುದು ಎಂಬ ಮೇಲು ಮೇಲಿನ ನಂಬಿಕೆಯೇ ಎಲ್ಲೆಡೆಯೂ ಇರುವುದು. ಒಂದೋ ಪ್ರೇಮವನ್ನು ಪರಾಕ್ರಮ ಎಂದು ಬಿಂಬಿಸುತ್ತೇವೆ. ಇಲ್ಲವೇ ಅದೊಂದು ಆದರ್ಶ ಎಂದು ಬಿಂಬಿಸುತ್ತೇವೆ. ಇವೆರಡೂ ಅಲ್ಲದ ಅದನ್ನು ನಿಜ ಜೀವನದಲ್ಲಿ ಬಾಳಲಾಗದು.

ಪ್ರೀತಿಯೆಂಬುದು ಎರಡು ಜೀವಗಳ ನಡುವಿನ ಸ್ನೇಹ, ಸಾಂಗತ್ಯ, ನಂಬಿಕೆ, ಗೌರವಗಳನ್ನು ಉಳಿಸಿಕೊಂಡು ಪರಸ್ಪರ ಪರಿಚಿತರಾಗುತ್ತಾ ಹೋಗುವ ನಿರಂತರ ಪಯಣ ಮತ್ತು ಇದು ಇಬ್ಬರದೂ ಜವಾಬ್ದಾರಿ. ಇಲ್ಲಿ ಯಾರೂ ಹೆಚ್ಚಲ್ಲ, ಯಾರೂ ಕಡಿಮೆಯಲ್ಲ ಎಂಬ ನೆಲೆಯಲ್ಲಿ ಇದನ್ನು ವಿಸ್ತರಿಸುವ ಯಾವ ಪ್ರಯತ್ನವನ್ನೂ ನಾವಿನ್ನೂ ಮಾಡಿಲ್ಲ, ಎಳೆಯರಿಗೆ ಇದನ್ನು ದಾಟಿಸುತ್ತಲೂ ಇಲ್ಲ. ಇನ್ನೊಂದೆಡೆ, ಸಾಂಪ್ರದಾಯಿಕ ಮದುವೆಗಳಲ್ಲಿ ವಸ್ತು-ಸಾಂಗತ್ಯವೇ ಮುಖ್ಯ ಸಂಗತಿಯಾಗಿ, ಮದುವೆಯೆಂಬುದು ಒಪ್ಪಂದವೆನಿಸಿ, ಇರುವ ಆಸ್ತಿ ಪಾಸ್ತಿಗಳನ್ನು ಇಬ್ಬರೂ ಮುನ್ನಡೆಸಿಕೊಂಡು ಹೋಗುವುದರ ಜೊತೆಗೆ ಒಬ್ಬರನ್ನೊಬ್ಬರು ಇಷ್ಟಪಟ್ಟರೆ ಅದು ಅದೃಷ್ಟವೆನಿಸಿ, ಇಲ್ಲದಿದ್ದಲ್ಲಿ ಹಣೆಬರಹವೆನಿಸಿ ಹೇಗೋ ನಡೆಯುತ್ತಲೋ ಕುಂಟುತ್ತಲೋ ಕಡಿದು ಹೋಗುತ್ತಲೋ ಇರುತ್ತದೆ.

ವಸ್ತುಸಾಂಗತ್ಯವೇ ಜೀವನದ ಯಶಸ್ಸೆನಿಸಿದ ಈ ಕಾಲದಲ್ಲಿ ಎಲ್ಲರೂ ಅಂತರಂಗದಲ್ಲಿ ಹೆಚ್ಚು ಹೆಚ್ಚು ಒಂಟಿಯಾಗುತ್ತಿದ್ದಾರೆ. ಜಾಗತೀಕರಣದ ನಂತರದ ಬದುಕಿನಲ್ಲಿ ಬಂದ ಪಲ್ಲಟವು, ಚಿಕ್ಕ ಮಗುವಿನಿಂದಲೇ ಖಾಸಗಿ ಆಸ್ತಿಯನ್ನು ಹೆಚ್ಚಿಸಿಕೊಳ್ಳುವುದು ಹೇಗೆ ಎಂಬ ಪಾಠದಲ್ಲೇ ಬೆಳೆಯತೊಡಗಿ, ಎಲ್ಲವೂ ವ್ಯವಹಾರವಾಗಿ, ಪ್ರಕೃತಿಸಹಜವಾದ ಅನುಬಂಧದಿಂದ ದೂರವಾಗಿ, ಮೂಲ ಪ್ರೀತಿಯ ಅನುಭವದಿಂದ ವಂಚಿತಗೊಂಡ ಮನಸ್ಸು ಖಿನ್ನತೆಯಲ್ಲಿ ನರಳುವಂತಹ ಬೆಳವಣಿಗೆಗಳಾಗುತ್ತಿವೆ. ಇನ್ನೊಂದೆಡೆ, ಜಾತಿ, ಧರ್ಮ, ವರ್ಗ ಎಲ್ಲವೂ ಅದರೆಡೆಗೆ ವ್ಯಾಮೋಹಿತರಾಗಿರುವವರಿಗೆ ಪ್ರತಿಷ್ಠೆಯಾಗಿಯೂ ಮತ್ತು ಹಲವರಿಗೆ ಲಾಭದ ಬಾಬತ್ತುಗಳಾಗಿಯೂ ಪರಿವರ್ತನೆಗೊಂಡಿವೆ. ಪ್ರೀತಿಯ ತ್ಯಾಗಕ್ಕಿಂತಲೂ ದ್ವೇಷದ ಅಟ್ಟಹಾಸವು ಸ್ವೀಕೃತವೆನ್ನಿಸಿ, ಇವುಗಳ ಹೆಸರಿನಲ್ಲಿ ನಡೆಯುವ ಎಲ್ಲ ಹಿಂಸೆಗಳೂ ಮಾನ್ಯವಾಗತೊಡಗಿವೆ. ಸಾಮಾನ್ಯ ಸಂಗತಿಯೆನ್ನಿಸಿವೆ.

ತಮ್ಮ ಹುಕುಮ್ಮಿನಂತೆ ಇರುವುದಲ್ಲದೆ ಬೇರೊಂದು ಭಾವನಾ ಜಗತ್ತೇ ನಿನಗಿಲ್ಲ ಎಂದು ಅಧೀನ ನೆಲೆಯಲ್ಲಿರಿಸಿದ ತಮ್ಮದೇ ಧರ್ಮದ ಹೆಣ್ಣು ಮತ್ತು ಅನ್ಯ ಧರ್ಮದ ಜನರನ್ನು ನಿರ್ಬಂಧಿಸುವ ಮೂಲಭೂತವಾದಿಗಳ ಭಾಷೆಯು ಇಂದು ನಮ್ಮ ನಾಡಿನ ಹೊಸಿಲಲ್ಲಿ ಹೊಂಚು ಹಾಕುತ್ತಿದೆಯೇ? ಒಂದು ಕಾಲದಲ್ಲಿ ಒಲುಮೆಯೆಡೆಗಿನ ವಿರೋಧದ ಹಲವು ಗಡಿಗಳನ್ನು ದಾಟಿದ ಸಾಹಸಿಗರ ಬವಣೆಯು ವ್ಯರ್ಥವಾಗುತ್ತಿದೆಯೇ?

ಸ್ವಂತ ಅತ್ತೆಯ ಮಗನಾದ ಗುತ್ತಿಯನ್ನು ಮದುವೆಯಾಗ ಬಯಸಿದ ತಿಮ್ಮಿಗೆ ವಿರೋಧ ಬಂದಿದ್ದು, ಅವಳು ಬೇರೆ ಊರಿಗೆ ಹೋದರೆ ತಮಗೆ ಆಳೊಂದು ಕಡಿಮೆಯಾಗುತ್ತದೆ ಎಂಬ ಅವಳ ಒಡೆಯರ ಲೆಕ್ಕಾಚಾರದ ಕಾರಣಕ್ಕೆ. ಪ್ರಾಣಾಂತಿಕವಾದ ಅಪಾಯ ಇದ್ದಾಗಲೂ ಆಕೆ ಘೋರ ಕಾನನದ ಕತ್ತಲಲ್ಲಿ, ಧೋ ಎಂದು ಸುರಿಯುವ ಮಳೆಯನ್ನೂ ಲೆಕ್ಕಿಸದೆ ಮನೆಯಿಂದ ಪರಾರಿಯಾಗಿ ಗುತ್ತಿಯನ್ನು ಸೇರಿಕೊಳ್ಳುತ್ತಾಳೆ. ಮಲೆಯ ತುತ್ತ ತುದಿಯಲ್ಲಿ ಹುಲಿ ಗರ್ಜನೆಯ ಭೀಕರ ಅನುಭವದ ನಡುವೆಯೂ ರಾತ್ರಿ ಕಳೆದು ಬೆಳಗಾದಾಗ, ತನ್ನ ಜೀವನದಲ್ಲೇ ಎಂದೂ ‘ಕಾಣದಿದ್ದ’ ಸೂರ್ಯೋದಯದ ಅದ್ಭುತ ಸೌಂದರ್ಯವನ್ನು ನೋಡಿ ಬೆಕ್ಕಸ ಬೆರಗಾಗುತ್ತಾಳೆ.

ಎಲ್ಲ ಕೃತಕ ಬೇಲಿಗಳನ್ನೂ ದಾಟಿ ಬೆಟ್ಟದ ತುದಿಯ ಏಕಾಂತದಲ್ಲಿ, ಎರಡಳಿದು ಒಂದಾದ ಭಾವ ಹೊಮ್ಮಿಸಿದ್ದ ಗುತ್ತಿಯ ಸಾಂಗತ್ಯವೆಂತೋ ಅಂತೆಯೇ ಪ್ರಕೃತಿಯೊಂದಿಗೂ ಎರಡಳಿದು ಒಂದಾದ ಭಾವ ಹುಟ್ಟಿದ ಅಪೂರ್ವ ಕ್ಷಣವದು. ತಾನು ಒಂಟಿಯಲ್ಲ, ತನ್ನೊಳಗನ್ನು ಅಪ್ಪಿದ ಈ ಭಾವ ಮೊಳೆತು ಬೆಳೆಯುತ್ತಲೇ ತನ್ನ ಬಾಳೂ ಅರಳುತ್ತದೆ ಎಂಬ ಸೋಜಿಗವೇ ಪ್ರೀತಿ.

‘ಮಲೆಗಳಲ್ಲಿ ಮದುಮಗಳು’ ಕಾದಂಬರಿಯಲ್ಲಿ ಕುವೆಂಪು ಚಿತ್ರಿಸಿದ ತಿಮ್ಮಿಗಾದ ಈ ದರ್ಶನಾನುಭವ ಎಲ್ಲರಿಗೂ ಆಗಬೇಕೆಂದರೆ, ಪ್ರೀತಿಗೆ ಸಂಬಂಧವೇ ಇಲ್ಲದ ಎಲ್ಲ ಕೃತಕ ಬೇಲಿಗಳನ್ನೂ ಕಿತ್ತು ಹಾಕಬೇಕು. ಜಾತಿ, ಧರ್ಮ, ವರ್ಗ, ವರ್ಣಭೇದಗಳ ವಿಷವನ್ನು ಕುಡಿದು, ಮರ್ಯಾದೆಯ ಹೆಸರಿನಲ್ಲಿ ಪ್ರೇಮಿಗಳನ್ನು ಕೊಚ್ಚಿ ಕಡಿದು ಹಾಕುವವರಿಗೆ, ಸಂಗಾತಿಯನ್ನು ಅನುಮಾನದಿಂದ ಅವಮಾನಿಸುವವರಿಗೆ ಎಂದೆಂದಿಗೂ ಅರ್ಥವಾಗದ ಸಂಗತಿಯಿದು.

ಮನೋಮಂದಿರದೊಳಗೆ ಪ್ರೀತಿಮೂರ್ತಿಯ ಕಟೆಯದೇ ಹೊರಗೆ ಕಟ್ಟಿದ ಮಂದಿರ/ಮಹಲುಗಳಿಂದ ಯಾರಿಗೆ ಸುಖ?

ಚುರುಮುರಿ

ಮೇಲ್ಮನೆ ಆಲಾಪನೆ!

• ತುರುವೇಕೆರೆ ಪ್ರಸಾದ್

ಪರ್ಮೇಶಿ, ರಾಜಕೀಯ ಮುತ್ಸದ್ದಿ ಭುಜಂಗಯ್ಯನವರ ಮುಂದೆ ಅವರ ಸಂದರ್ಶನಕ್ಕೆ ಕುಳಿತಿದ್ದ. ‘ಮೇಲ್ಮನೆಗೆ ನೀವೂ ಆಕಾಂಕ್ಷಿಗಳು ಅಂತ ಗೊತ್ತಾಯ್ತು. ಮುಂದೆ ಕೆಳಮನೆಗೆ ನಿಲ್ಲಲ್ವಾ’ ಪರ್ಮೇಶಿ ಕೇಳಿದ.

‘ಆಸೆ ಏನೋ ಐತೆ. ಆದ್ರೆ ಅವಾಗ ಟಿಕೆಟ್ ಸಿಗ್ತದೋ ಎಂಗೋ? ಅದಕ್ಕೇ ಸದ್ಯಕ್ಕೆ ಮೇಲ್ಮನೆಗೆ ಸೇರ್ಕಂಬುಡೋದು... ಆಮ್ಯಾಕೆ ಇದನ್ ಬುಟ್ಟು ಅಲ್ ಎಲೆಕ್ಷನ್ಗೆ ನಿಂತ್ಕೊಳ್ಳೋದು’.

‘ಅಂದ್ರೆ ಮೇಲ್ಮನೇಲಿ ನಿಮ್ಗೆ ಆಸಕ್ತಿ ಇಲ್ಲ ಅಂದಂಗಾಯ್ತು’.

‘ಅಲ್ ಓಗಿ ಡಮ್ಮಿ ರಬ್ಬರ್‌ಸ್ಟ್ಯಾಂಪ್ ತರ ಕುಕ್ಕರ್ ಬಡಿಯಕ್ಕೆ ಯಾರಿಗ್ ಆಸೆ ಇರ್ತದೆ?’

‘ಮೇಲ್ಮನೆ ಅಂದ್ರೆ ಚಿಂತಕರ ಚಾವಡಿ ಅಂತಿದ್ರು...’

‘ಈಗ ಅದು ಸಂತ್ರಸ್ತರ ಚಾವಡಿ ಆಗೈತೆ. ಮುಂಚಿನ ಥಿಂಕ್‌ಟ್ಯಾಂಕ್ ಈಗ ಕೋಟಿವೀರರ ವೋಟ್‌ಬ್ಯಾಂಕ್ ಆಗೈತೆ. ಆಸ್ತಿ ಅಂತಸ್ತಿಗೆ ಕೆಳಮನೆ, ದೊಡ್ಡಸ್ತಿಕೆಗೆ ಮೇಲ್ಮನೆ, ಅಲ್ಲಿರೋದು ಸುಮ್ಮನೆ ಅನಿಸ್‌ಬಿಟ್ಟೈತೆ’.

‘ಯಾಕ್ ನಿಮ್ಗೆ ಇಂತ ಅಭಾವ ವೈರಾಗ್ಯ?’

‘ಬೇಕಾದ್ ಬಿಲ್ ಪಾಸ್ ಮಾಡ್ಸಕಳಕ್ ನಾವ್ ಕೈ ಎತ್ತಕ್ ಬೇಕು, ವಿಪ್ ಅಂದ್ರೆ ಗಪ್‌ಚಿಪ್ಪಾಗ್ ಕೂರ್ಬೇಕು. ಈ ಹಗರಣ ಅದೂ ಇದೂ ಅಂತ ಸೀಟು ದಬ್ಬಾಕ್ಕಂಡಿರ್ತಾರಲ್ಲ, ಅವರು ಮತ್ ಮಂತ್ರಿಗಿರಿ ಗಿಟ್ಟಿಸ್ಕಳೋಕೆ ಈ ಮೇಲ್ಮನೆ ಬೇಕು, ಆಮ್ಯಾಕೆ ಬೇರೆ ಪಾರ್ಟಿಯಿಂದ ಆಪರೇಶನ್ ಮಾಡುಸ್ಕಂಡು ಬಂದೋರ್ಗೆ ಇದು ಆಶ್ರಯಧಾಮ ಇದ್ದಂಗೆ. ಇನ್ ನೇರವಾಗ್ ಗೆಲ್ಲಕ್ ಆಗ್ದೆ ಇರೋ ದೊಡ್ ಮನುಷ್ಯರಿಗೆಲ್ಲ ಇದು ಹಿತ್ತುಬಾಗ್ಲಿದ್ದಂಗೆ. ಬತ್ತಾ ಬತ್ತಾ ಇದೊಂಥರಾ ಸೋತ ಕುದುರೆಗಳ ಲಾಯ ಆದಂಗ್ ಆಗೈತೆ’.

ಅಷ್ಟರೊಳಗೆ ಅವರ ಶ್ರೀಮತಿ ಬಂದ್ರು. ‘ಸರ್ಕಾರಿ ಬಂಗ್ಲೆ ಹೋದ್ಮೇಲೆ ಇಲ್ ಮಹಡಿ ಮನೆಗೆ ಬಂದು ಮಂಡಿ ನೋವು ಅಂತ ಒದ್ದಾಡ್ತಿದೀರಿ, ಕೆಳಗೆ ಇಳಿಯೋದೇ ಕಷ್ಟ, ಇನ್ನು ಕೆಳಮನೆಗೆ ಹೋಗ್ತಾರಂತೆ’ ಎಂದು ಮೂದಲಿಸಿದರು.

‘ಅಂಗೆಲ್ಲಾ ನನ್ನ ಅಂಡರ್‌ಎಸ್ಟಿಮೇಟ್ ಮಾಡ್ಬೇಡ ಕಣೆ. ನಾನು ಬರೀ ಬೂದಿಯಿಂದ ಎದ್ ಬರೋ ಫೀನಿಕ್ಸ್ ಅಲ್ಲ, ಬೂದಿಯಿಂದ ಆಕಾಶಕ್ಕೇ ಆರೋ ಕ್ರಯೋಜನಿಕ್ ರಾಕೆಟ್ಟು...’ ಗುಡುಗಿದರು ಭುಜಂಗಯ್ಯ.

ಸಂಗತ

ಪಯಣ ಪಥದ ಪಥಿಕರಾಗಿ

ವಿದ್ಯಾವಂತ ಯುವಪೀಳಿಗೆ ಕ್ಷುಲ್ಲಕ ಕಾರಣಕ್ಕೆ ಆತ್ಮಹತ್ಯೆಗೆ ಶರಣಾಗುವುದು ಮಾನವ ಕುಲವೇ ನಾಚಿಕೆಯಿಂದ ತಲೆತಗ್ಗಿಸಬೇಕಾದ ಸಂಗತಿ

• ರಾಜಕುಮಾರ ಕುಲಕರ್ಣಿ

ಅಂತಿಮ ಪದವಿ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಯೊಬ್ಬ ಇತ್ತೀಚೆಗೆ ಹಾಸ್ಟೆಲಿನ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಮನಸ್ಸಿಗೆ ತುಂಬ ದುಃಖವನ್ನು ಉಂಟುಮಾಡಿತು. ಖಿನ್ನತೆಯೇ ಅವನು ಆತ್ಮಹತ್ಯೆಯಂಥ ಹೇಯ ಮಾರ್ಗವನ್ನು ಆಯ್ದುಕೊಳ್ಳಲು ಕಾರಣವಾಗಿತ್ತು ಎನ್ನುವ ಮಾತುಗಳು ಕೇಳಿಬಂದವು.

ಬದುಕಿ ಸಾಧಿಸಬೇಕಾದ ವಿಪುಲ ಅವಕಾಶ ಎದುರಿಗಿದ್ದರೂ ಅವನು ಸಾವನ್ನೇ ಆಯ್ಕೆ ಮಾಡಿಕೊಂಡ. ಆ ನಿರ್ಧಾರಕ್ಕೆ ಬಂದ ಗಳಿಗೆ ತಂದೆ ತಾಯಿಯನ್ನು ಆತ ಜ್ಞಾಪಿಸಿಕೊಳ್ಳಬೇಕಿತ್ತು. ಜೀವನದ ಸವಾಲುಗಳಲ್ಲಿ ಗೆದ್ದು ನಿಂತ ಸಾಧಕರನ್ನು ಸ್ಮರಿಸಿಕೊಳ್ಳಬೇಕಿತ್ತು.ದೇಹದಅಂಗವೈಕಲ್ಯವನ್ನುಮೆಟ್ಟಿನಿಂತು ಪ್ರಪಂಚಕ್ಕೇ ಮಾದರಿಯಾದ ಪ್ರಾತಃಸ್ಮರಣೀಯರನ್ನು ನೆನಪಿಸಿಕೊಳ್ಳಬೇಕಿತ್ತು. ಕ್ಷಣಮಾತ್ರದ ನಿರ್ಧಾರ ಬದುಕನ್ನೇ ಬಲಿ ತೆಗೆದುಕೊಂಡಿತು.

ವಿಜ್ಞಾನ ಮತ್ತು ತಂತ್ರಜ್ಞಾನದ ಈ ಯುಗದಲ್ಲಿ ವಿದ್ಯಾವಂತ ಯುವಪೀಳಿಗೆ ಪ್ರೇಮವೈಫಲ್ಯ, ಅಭ್ಯಾಸದ ಹೊರೆ, ಪರೀಕ್ಷೆಯಲ್ಲಿ ಅನುತ್ತೀರ್ಣ, ಇಚ್ಛಿಸಿದ ಕೋರ್ಸಿಗೆ ದೊರೆಯದ ಪ್ರವೇಶ ಇಂತಹ ಕಾರಣಗಳನ್ನು ನೀಡಿ ಆತ್ಮಹತ್ಯೆಗೆ ಶರಣಾಗುತ್ತಿರುವುದು ಇಡೀ ಮಾನವ ಕುಲವೇ ನಾಚಿಕೆಯಿಂದ ತಲೆತಗ್ಗಿಸಬೇಕಾದ ಸಂಗತಿ.

ಪಾಲಕರ ಅತಿಯಾದ ಮಹತ್ವಾಕಾಂಕ್ಷೆ ಮಕ್ಕಳನ್ನು ಸಂಕಷ್ಟಕ್ಕೆ ದೂಡುತ್ತಿದೆ. ಅಪ್ಪ, ಅಮ್ಮನ ಒತ್ತಾಯಕ್ಕೆ ತಮಗೆ ಇಷ್ಟವಿಲ್ಲದ ಕಾಲೇಜು, ಕೋರ್ಸಿಗೆ ಪ್ರವೇಶ ಪಡೆಯುವವರಲ್ಲಿ ಕೆಲವರು ಅಲ್ಲಿನ ಪರಿಸರಕ್ಕೆ ಹೊಂದಿಕೊಳ್ಳದೆ ಖಿನ್ನತೆಗೆ ಒಳಗಾಗುವುದುಂಟು. ವಸತಿಶಾಲೆ, ಬೇಸಿಗೆ ಶಿಬಿರ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರಗಳೆಂದು ಮಕ್ಕಳು ಮನೆಯ ಪರಿಸರದಿಂದ ಹೊರಗೇ ಉಳಿಯುತ್ತಿದ್ದಾರೆ. ಮನೆ ಮತ್ತು ಕುಟುಂಬದ ಸದಸ್ಯರೊಂದಿಗಿನ ಈ ಭಾವನಾತ್ಮಕ ಮತ್ತು ಮಾನಸಿಕ ಅಂತರ ಅದೆಷ್ಟೋ ವಿದ್ಯಾರ್ಥಿಗಳನ್ನು ಖಿನ್ನತೆಗೆ ಒಳಗಾಗಿಸುತ್ತಿದೆ.

ವ್ಯಾಪಾರೀಕರಣವು ಶಿಕ್ಷಣವನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ಮೇಲೆ ಶಿಕ್ಷಣದ ಉದ್ದೇಶಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಇಂದು ಶಿಕ್ಷಣದಿಂದ ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆಯಾಗುತ್ತಿಲ್ಲ. ನೀತಿ ಶಿಕ್ಷಣ ಎನ್ನುವುದು ಶಾಲಾ ಕಾಲೇಜುಗಳ ವೇಳಾಪಟ್ಟಿಯಲ್ಲಿ ಸ್ಥಾನ ಕಳೆದುಕೊಂಡಿದೆ. ಹಿಂದೆ ಶಾಲಾ ಅವಧಿಯ ನಂತರವೂ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಸಮಯ ಕಳೆಯುತ್ತಿದ್ದರು. ಪಠ್ಯಕ್ರಮದಾಚೆ ಬದುಕಿನ ತತ್ವಗಳನ್ನು ಬೋಧಿಸುತ್ತಿದ್ದರು. ದಾರಿ ತಪ್ಪಿದಾಗ ಕಿವಿ ಹಿಂಡಿ ಬುದ್ಧಿ ಹೇಳುತ್ತಿದ್ದರು. ಇಂದು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮಧ್ಯದ ಸಂಬಂಧ ನಾಲ್ಕು ಗೋಡೆಗಳ ನಡುವಣ ಪಠ್ಯಕ್ರಮದ ಬೋಧನೆಗೆ ಮಾತ್ರ ಸೀಮಿತವಾಗಿದೆ.

ಬದುಕು ಒಡ್ಡಿದ ಸವಾಲುಗಳನ್ನು ಎದುರಿಸಿ ಅಪ್ರತಿಮ ಸಾಧನೆ ಮಾಡಿದವರು ನಮ್ಮ ನಡುವೆ ಇದ್ದಾರೆ. ಸ್ಟೀಫನ್ ಹಾಕಿಂಗ್, ಪುಟ್ಟರಾಜ ಗವಾಯಿ, ಸುಧಾ ಚಂದ್ರನ್, ಜಾನ್ ಮಿಲ್ಟನ್ ಅವರಂತಹ ಸಾಧಕರು ದೈಹಿಕ ವೈಕಲ್ಯವನ್ನು ಮೀರಿನಿಂತು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅದ್ಭುತವಾದದ್ದನ್ನು ಸಾಧಿಸಿದರು. ಪಯಣದ ಪಥದಲ್ಲಿ ಎದುರಾದ ಕಲ್ಲು ಮುಳ್ಳುಗಳನ್ನು ಬದಿಗೆ ಸರಿಸಿ, ತಾವು ನಡೆಯಬೇಕಾದ ದಾರಿಯನ್ನು ಸ್ವತಃ ನಿರ್ಮಿಸಿಕೊಂಡ ಪಥಿಕರಿವರು. ಒಂದೊಮ್ಮೆ ಅವರು ಸಮಸ್ಯೆಗಳಿಗೆ ಹೆದರಿ ಸಾಧನೆಯ ಪಥದಿಂದ ವಿಮುಖರಾಗಿದ್ದರೆ ಇಂದು ಜಗತ್ತು ಅವರನ್ನು ನೆನಪಿಟ್ಟುಕೊಳ್ಳುತ್ತಿರಲಿಲ್ಲ. ಪ್ರಪಂಚ ಸದಾ ಸ್ಮರಿಸುವುದು ಸಾಧಕರನ್ನೇ ವಿನಾ ಬದುಕಿಗೆ ಬೆನ್ನು ಮಾಡುವ ಹೇಡಿಗಳನ್ನಲ್ಲ.

ಅಮೆರಿಕದ ಅಧ್ಯಕ್ಷ ಹುದ್ದೆಗೆ ಆಯ್ಕೆಯಾಗುವ ಪೂರ್ವದಲ್ಲಿ ಅಬ್ರಹಾಂ ಲಿಂಕನ್ ಅವರಿಗೆ ವಿವಿಧ ಚುನಾವಣೆಗಳಲ್ಲಿ ಸತತ ಒಂಬತ್ತು ಸೋಲುಗಳು ಎದುರಾಗಿದ್ದವು. ಇಂಥ ಸಾಧಕರ ಬದುಕು ಮಕ್ಕಳಿಗಷ್ಟೇ ಅಲ್ಲ ಪಾಲಕರಿಗೂ ಸ್ಫೂರ್ತಿಯಾಗಬೇಕು.

ಯಶವಂತ ಚಿತ್ತಾಲ ಅವರು ಮನುಷ್ಯನ ಬದುಕಬೇಕೆನ್ನುವ ಉತ್ಸಾಹವನ್ನು ವಿವರಿಸುತ್ತ, ‘ಜೀವಕೋಟಿಯ ವಿಕಾಸದಲ್ಲಿ ‘ಬದುಕಬೇಕು’ ಎಂಬ ಅಭೀಪ್ಸೆಯ ಹಿಂದೆ ಕೋಟಿ ವರ್ಷಗಳ ಇತಿಹಾಸವಿದ್ದರೆ ‘ಯಾಕೆ ಬದುಕಬೇಕು?’ ಎಂದು ಕೇಳಿಕೊಳ್ಳುವ ಪ್ರಜ್ಞೆ ತೀರ ಸದ್ಯದ್ದು. ಬದುಕುವುದರಲ್ಲಿ ಅದಮ್ಯ ಉತ್ಸಾಹವಿರುವ ಜೀವಕ್ಕೆ ಯಾಕೆ ಬದುಕಬೇಕು ಎಂಬ ಪ್ರಶ್ನೆಗಿಂತ ಹೇಗೆ ಬದುಕಬೇಕು ಎಂಬ ಪ್ರಶ್ನೆಯೇ ಹೆಚ್ಚು ಸಹಜವಾದದ್ದು. ‘ನೀವೇಕೆ ಬದುಕಿದ್ದೀರಿ’ ಎಂಬ ಪ್ರಶ್ನೆಗೆ, ಬದುಕಿನಲ್ಲಿ ವಿಶ್ವಾಸವಿದ್ದ ಜೀವಿಯಿಂದ ಉತ್ತರವಿಲ್ಲ. ಆದರೆ ‘ನೀವು ನಂಬಿಕೆ ಇಟ್ಟುಕೊಂಡ ಜೀವನಮೌಲ್ಯಗಳು ಯಾವುವು?’ ‘ಯಾವ ಸಂಗತಿಗಳಿಂದಾಗಿ ನಿಮಗೆ ಬದುಕು ಅರ್ಥಪೂರ್ಣ ಎನ್ನಿಸಿದೆ’ ಎಂಬ ಪ್ರಶ್ನೆಗಳಿಗೆ ಉತ್ತರ ಸಿಗಬಹುದು’ ಎಂದಿದ್ದಾರೆ.



‘ಕಹಾ ಮೈನೆ ಕಿತನಾ ಹೈ ಗುಲ್ ಕಾ ಸಬಾತ್/ ಕಾಲಿ ನೆ ಯೆ ಸುನ್ಕರ್ ತಬಸ್ಸೂಂ ಕಿಯಾ’ (‘ಎಷ್ಟು ಕಾಲ?’ ನಾನು ಕೇಳಿದೆ ಗುಲಾಬಿಯ ಆಯಸ್ಸು. ಮೊಗ್ಗು ಮೊಗವೆತ್ತಿ ಮುಗುಳ್ನಕ್ಕಿತಷ್ಟೆ)- ಬದುಕಿನ ಮಹತ್ವವನ್ನು ಅತ್ಯಂತ ಅರ್ಥಪೂರ್ಣವಾಗಿ ವಿವರಿಸುವ ಮಿರ್ಜಾ ಗಾಲಿಬ್‌ನ ಗಝಲ್ ಸಾಲುಗಳಿವು. ಅರಳಿ ನಿಂತ ಹೂವು ತನ್ನ ಬದುಕು ಕ್ಷಣಿಕವೆಂದು ಎಂದಿಗೂ ಶೋಕಿಸುವುದಿಲ್ಲ. ಅದು ಬದುಕಿರುವವರೆಗೂ ತನ್ನ ಪರಿಮಳವನ್ನು ಸುತ್ತಲೂ ಬೀರುತ್ತದೆ.

ಕಲ್ಲುಬಂಡೆ ಕೆಳಗಿನ ಗರಿಕೆಹುಲ್ಲು ಸಿಕ್ಕ ಅವಕಾಶದಲ್ಲೇ ಹೊರಚಾಚಿ ಚಿಗುರೊಡೆಯುತ್ತದೆ. ಬಚ್ಚಲಿನ ಕೊಳೆಯ ನೀರಲ್ಲಿ ಬೆಳೆದು ನಿಲ್ಲುವ ಮಲ್ಲಿಗೆ ಬಳ್ಳಿ ಘಮಘಮಿಸುವ ಹೂಗಳನ್ನು ಬಿಡುತ್ತದೆ. ಆದರೆ ದೇಹದಲ್ಲಿ ದೊಡ್ಡ ಮೆದುಳಿರುವ ಮನುಷ್ಯ ಮಾತ್ರ ಸೋಲುಗಳಿಗೆ ಅಧೀರನಾಗಿ ಸಾವಿನಲ್ಲಿ ಪರಿಹಾರ ಹುಡುಕುವುದು ಯಾವ ನ್ಯಾಯ?

ವಾಚಕರ ವಾಣಿ

ಮಾನವೀಯ ನೆಲೆಯಲ್ಲಿ ಪರಿಗಣಿಸಿ

ರೈಲುಗಳಲ್ಲಿ ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ನೀಡಲಾಗುತ್ತಿದ್ದ ರಿಯಾಯಿತಿಯನ್ನು ಭಾರತೀಯ ರೈಲ್ವೆ ನಿಗಮವು ನಿಲ್ಲಿಸಿದ್ದು, ಇದರಿಂದ ₹ 1,500 ಕೋಟಿ ಹೆಚ್ಚುವರಿ ವರಮಾನ ಬಂದಿದೆ ಎಂದು ವರದಿಯಾಗಿದೆ. ಮೂಲತಃ ಲಾಭದಲ್ಲೇ ಇರುವ ರೈಲ್ವೆ ಇಲಾಖೆಯು ಇನ್ನೂ ಹೆಚ್ಚು ವರಮಾನ ಪಡೆಯುವ ಉದ್ದೇಶಕ್ಕೆ ಹಿರಿಯ ನಾಗರಿಕರೇ ಗುರಿಯಾಗಬೇಕೆ? ಹಾಗೆ ನೋಡಿದರೆ ಸಾರಿಗೆ ನಿಗಮಗಳು ನಷ್ಟವನ್ನೇ ಅನುಭವಿಸುತ್ತಿವೆ. ಚಾಲಕರಿಗೆ ಸಂಬಳ ಕಡಿತ ಮಾಡಿವೆ. ಆದರೂ ಧೃತಿಗೆಡದೆ ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ರಿಯಾಯಿತಿಯನ್ನು ಮುಂದುವರಿಸಿವೆ.

ಹಿರಿಯ ನಾಗರಿಕರಿಗೆ ನೀಡಿದ್ದ ರಿಯಾಯಿತಿಯನ್ನು ತೆಗೆದಿರುವುದು ಉಚಿತವಲ್ಲ. ರೈಲ್ವೆ ಇಲಾಖೆಯು ತನ್ನ ನಿರ್ಣಯವನ್ನು ಇನ್ನಾದರೂ ಮರುಪರಿಶೀಲಿಸಿ, ಮಾನವೀಯ ನೆಲೆಯಲ್ಲಿ ಈ ಸೌಲಭ್ಯವನ್ನು ಮುಂದುವರಿಸಬೇಕು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಜಾಹೀರಾತು: ಎಚ್ಚರ ಇರಲಿ

ಕಿರುತೆರೆ ನಟಿ ಚೇತನಾ ರಾಜ್ ಅವರು ದೇಹದ ಕೊಬ್ಬಿನ ಅಂಶ ಕರಗಿಸಲು ಶಸ್ತ್ರಚಿಕಿತ್ಸೆಗೆ ಒಳಗಾದ ಸಂದರ್ಭದಲ್ಲಿ ಮೃತಪಟ್ಟಿರುವುದು ದುರದೃಷ್ಟಕರ. ಇತ್ತೀಚೆಗೆ ದೇಹದ ತೂಕವನ್ನು ಇಳಿಸಲು, ಬೊಜ್ಜು ಕರಗಿಸಲು... ಹೀಗೆ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಜಾಹೀರಾತುಗಳು ಪತ್ರಿಕೆಗಳಲ್ಲಿ, ದೃಶ್ಯ ಮಾಧ್ಯಮಗಳಲ್ಲಿ ಬರುತ್ತಿರುತ್ತವೆ. ಇವುಗಳನ್ನು ನಂಬಿ ಜನ ಮೋಸ ಹೋಗಿರುವ, ತಮ್ಮ ಜೀವವನ್ನೇ ಕಳೆದುಕೊಂಡಿರುವ ಅನೇಕ ಉದಾಹರಣೆಗಳು ನಮಗೆ ದಿನನಿತ್ಯವೂ ಕಾಣಸಿಗುತ್ತವೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

ದೇವರ ಪ್ರತಿನಿಧಿಗಳೇನಲ್ಲ

ಕಾಮಗಾರಿಯ ಬಿಲ್ ಬಿಡುಗಡೆಗೆ ಸಂಬಂಧಿಸಿದ ಚರ್ಚೆಗಾಗಿ ಕರೆದಿದ್ದ ಸಭೆಯಲ್ಲಿ ಪಾಲ್ಗೊಳ್ಳದ ಕಾರಣಕ್ಕೆ ಮುಖ್ಯ ಎಂಜಿನಿಯರ್ ಒಬ್ಬರನ್ನು ದೇವದುರ್ಗದ ಶಾಸಕ ಕೆ.ಶಿವನಗೌಡ ನಾಯಕ ಅವರು 7 ತಿಂಗಳ ಹಿಂದೆ ಅವಾಚ್ಯವಾಗಿ ನಿಂದಿಸಿದ್ದರು ಎನ್ನಲಾದ ವಿಡಿಯೊವೊಂದು ಈಗ ವೈರಲ್ ಆಗಿದೆ. ಶಾಸಕರು ಅಧಿಕಾರಿಯನ್ನು ಹೀಗೆ ಅವಮಾನಿಸಿ ಕಾರ್ಯಾಂಗ ವ್ಯವಸ್ಥೆಯನ್ನೇ ನಗೆಪಾಟಲಿಗೆ ಈಡುಮಾಡಿದ್ದಾರೆ.

ಜನಪ್ರತಿನಿಧಿಗಳು ದೇವರ ಪ್ರತಿನಿಧಿಗಳೇನಲ್ಲ. ಸರ್ಕಾರಿ ನೌಕರರು ಅವರ ಮನೆಯ ಜೀತದಾಳುಗಳಲ್ಲ. ಅವರಿಗೂ ಹುದ್ದೆಗೆ ಅನುಗುಣವಾಗಿ ಸಮಾಜದಲ್ಲಿ ಗೌರವ ಇರುತ್ತದೆ. ಸಾರ್ವಜನಿಕರ ಸಮ್ಮುಖದಲ್ಲಿ ಅಧಿಕಾರಿಗಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದಾಕ್ಷಣ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಬಿಡುವುದಿಲ್ಲ.

ವಿ.ಜಿ.ಇನಾಮದಾರ, ಸಾರವಾಡ, ವಿಜಯಪುರ

‘ಮನೆ ತುಂಬ’ ಯಾಕಿಲ್ಲ?!

ಹಿಂದೂ ದಂಪತಿ
ನಾಲ್ಕು ಮಕ್ಕಳಿಗೆ
ಜನ್ಮ ನೀಡಲಿ–
ಇದು, ಸಾಧ್ವಿ ರಿತಂಬರ
ಅವರ ಇತ್ತೀಚಿನ
‘ಅಸಾಧು’ ಹೇಳಿಕೆ!
ಏಕೆ?
‘ಮಕ್ಕಳಿರಲವ್ವ ಮನೆತುಂಬ’
ಎಂಬ ಸೂಕ್ತಿ ಹೋಯಿತೆಲ್ಲಿಗೆ?!

ಸಿ.ಪಿ.ಕೆ., ಮೈಸೂರು

ಭುವಿಯೆ ಅರಳದೆ ದಿವವಾಗಿ!

‘ಕಾಂಗ್ರೆಸ್‌ನವರು ಪ್ರಶ್ನಿಸಬೇಕಿರುವುದು...’ ಎಂಬ ಗುರುದೇವ ಭಂಡಾರ್ಕರ್ ಅವರ ಪತ್ರ (ವಾ.ವಾ., ಮೇ 17) ಅತ್ಯಂತ ಮಾರ್ಮಿಕ ವ್ಯಂಗ್ಯವೇ ಸರಿ. ಕೊಟ್ಟ ವಾಗ್ದಾನದಂತೆ ನಡೆದುಕೊಳ್ಳಲು ರಾಜಕಾರಣಿಗಳೇನು ದೇವತೆಗಳೇ? ಅಂದಮೇಲೆ ನಮ್ಮ ಪ್ರಧಾನಿ ನರೇಂದ್ರ ಮೋದಿಯವರ ಮಾತೇನು? ಇದು ಮತದಾರ ಪ್ರಭು ‘ಗುರುದೇವರು’ಗಳಿಗೂ ಗೊತ್ತು. ಆದರೂ ನಡೆಯುತ್ತಿದೆ ‘ಪ್ರಜಾತಂತ್ರ’ವೆಂಬ ಈ ಬೀದಿನಾಟಕ ಅನುದಿನವೂ ಅನುಕ್ಷಣವೂ! ನಾವು ವೋಟು ಹಾಕಲು ಇಷ್ಟಾದರೂ ಮನರಂಜನೆ ಬೇಡವೇ? ಇಷ್ಟಕ್ಕೂ ಈ ರಾಜಕಾರಣಿಗಳು ಕೊಟ್ಟ ವಾಗ್ದಾನಗಳೆಲ್ಲ ನಿಜವಾಗುವುದಾದರೆ ‘ಭುವಿಯೆ ಅರಳದೆ ದಿವವಾಗಿ’!

ಪ್ರೊ. ಶಿವರಾಮಯ್ಯ, ಬೆಂಗಳೂರು

ಬೇಕಾಗಿದೆ ಪಕ್ಷಾತೀತ ಪಠ್ಯ

ಸರ್ಕಾರದ ಚುಕ್ಕಾಣಿ ಹಿಡಿದವರು ಬದಲಾದಂತೆ, ಪಠ್ಯಪುಸ್ತಕ ಮತ್ತು ಪಠ್ಯಪುಸ್ತಕ ಸಮಿತಿಗಳೂ ಬದಲಾಗುವುದು ಸರಿಯೇ? ಪಕ್ಷಗಳು ಅಧಿಕಾರಕ್ಕೆ ಬರುತ್ತವೆ, ಅಧಿಕಾರ ಕಳೆದುಕೊಳ್ಳುತ್ತವೆ. ಅವುಗಳ ಸಿದ್ಧಾಂತ, ಆರ್ಥಿಕ ಚಿಂತನೆ, ಆಡಳಿತದ ಸ್ವರೂಪ ಬೇರೆ ಬೇರೆಯೇ ಆಗಿರುತ್ತವೆ. ಪಕ್ಷದ ಧೋರಣೆಗೆ ಅನುಸಾರವಾಗಿ ಪಠ್ಯ ಬದಲಿಸುವ ಕೆಲಸ ಆಗಬಾರದು. ರಾಷ್ಟ್ರ ಕಲ್ಪನೆ, ಪ್ರಾದೇಶಿಕ ಪ್ರಜ್ಞೆ, ಇತಿಹಾಸದ ಅರಿವು, ಮನುಷ್ಯತ್ವದ ಚಿಂತನೆಗಳು, ಬಹುತ್ವ ಭಾರತ, ಸಂವಿಧಾನಬದ್ಧ ಕ್ರಿಯಾಶೀಲತೆ ಬೆಳೆಸುವುದು, ಕೌಟುಂಬಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮನುಷ್ಯ ಸಂಬಂಧಗಳು, ಆರೋಗ್ಯ, ಹಣಕಾಸು, ವೈಚಾರಿಕ– ವೈಜ್ಞಾನಿಕ ಪ್ರಜ್ಞೆ ಹೀಗೆ ಪಕ್ಷಾತೀತವಾದ, ಎಡ– ಬಲ ಎನ್ನದ ವ್ಯಕ್ತಿಗಳ ಪಠ್ಯ ಮಕ್ಕಳಿಗೆ ಬೇಕಾಗಿದೆ. ಅದಕ್ಕಾಗಿ ಪಠ್ಯಪುಸ್ತಕ ಸಮಿತಿಯು ಇತಿಹಾಸ, ಕಾನೂನು ಮತ್ತು ಶಿಕ್ಷಣ ತಜ್ಞರನ್ನು ಒಳಗೊಂಡಂತೆ ಸಂವಿಧಾನಬದ್ಧವಾಗಿ ರಚನೆಯಾಗಬೇಕು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಿರಿ ಕನ್ನಡ: ಎರಡು ಪಠ್ಯ ಪುಸ್ತಕಗಳ ವ್ಯತ್ಯಾಸ

ಪ್ರಜಾವಾಣಿ ವಾರ್ತೆ

ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಭಾಷಾ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಸಿ.ಎನ್. ರಾಮಚಂದ್ರ ನೇತೃತ್ವದ ಸಮಿತಿಯು 2010ರಲ್ಲಿ ಹತ್ತನೇ ತರಗತಿಯ 'ಸಿರಿಕನ್ನಡ' ಪಠ್ಯ ಪುಸ್ತಕವನ್ನು ರಚಿಸಿತು. ಲೇಖಕ ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿಯು ಈ ಪುಸ್ತಕವನ್ನು ಪರಿಷ್ಕರಣೆಗೆ ಒಳಪಡಿಸಿತು. ಈ ಪಠ್ಯಪುಸ್ತಕವನ್ನು 2017–18ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಯಿತು. ಈ ಪುಸ್ತಕವನ್ನು ಪುನರ್ ಪರಿಷ್ಕರಿಸಲು ರಾಜ್ಯ ಸರ್ಕಾರವು ರೋಹಿತ್ ಚಕ್ರತೀರ್ಥ ಅವರ ನೇತೃತ್ವದಲ್ಲಿ ಸಮಿತಿ ರಚಿಸಿದೆ. ಸಮಿತಿಯು ಈಗ ತನ್ನ ಶಿಫಾರಸುಗಳನ್ನು ಸಲ್ಲಿಸಿದೆ. ಈ ಶಿಫಾರಸುಗಳಲ್ಲಿ ಹಲವು ಬದಲಾವಣೆಗಳನ್ನು ಸೂಚಿಸಲಾಗಿದೆ ಮತ್ತು ಈ ಬಗ್ಗೆ ತೀವ್ರವಾದ ಚರ್ಚೆ ನಡೆಯುತ್ತಿದೆ. ಬರಗೂರು ರಾಮಚಂದ್ರಪ್ಪ ಅವರನ್ನೂ ಒಳಗೊಂಡಂತೆ ಹಲವರು ಬದಲಾವಣೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ನಮ್ಮ ಸಮಿತಿಗಳು ಮಾಡಿರುವುದು ಪಠ್ಯ ಪುಸ್ತಕಗಳ ಪರಿಷ್ಕರಣೆಯೇ ಹೊರತು ಪಠ್ಯ ಪುಸ್ತಕಗಳ ಸಮಗ್ರ ರಚನೆ ಅಲ್ಲ. ಆದ್ದರಿಂದ ಈಗಾಗಲೇ ರಚನೆಯಾಗಿರುವ ಪಠ್ಯ ಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆ ಉಂಟು ಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳನ್ನು ನಡೆಸಿದೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಲಿಲ್ಲವೆಂದು ತಿಳಿಸಬಯಸುತ್ತೇವೆ. ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸುವ ವಿಷಯವಾದರೆ ಉನ್ನತ ಪರಿಶೀಲನಾ ಸಮಿತಿಗಳನ್ನು ರಚಿಸಿ ಅಭಿಪ್ರಾಯ ಪಡೆದು ಅಳವಡಿಸಬಹುದಾಗಿದೆ' ಎಂದು ಪರಿಷ್ಕರಣೆ ಕುರಿತು ಮುನ್ನುಡಿಯಲ್ಲಿ ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ.

ರೋಹಿತ್ ಚಕ್ರತೀರ್ಥ ಅವರು ಪರಿಷ್ಕರಣೆಯ ಹಿಂದೆ ಇದ್ದ ಸಿದ್ಧಾಂತವೇನು ಎಂಬುದನ್ನು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. 'ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ-ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಠ್ಯಗಳನ್ನು ಪರಿಷ್ಕರಣೆ ಮಾಡಬೇಕೆಂಬುದು' ಎಂಬ ಮಾತು ಮುನ್ನುಡಿಯಲ್ಲಿ ಇದೆ.

ಬರಗೂರು ನೇತೃತ್ವದ ಸಮಿತಿಯು ರಚಿಸಿದ 10ನೇ ತರಗತಿಯ ಕನ್ನಡ ಪಠ್ಯ ಪುಸ್ತಕ ಮತ್ತು ಚಕ್ರತೀರ್ಥ ನೇತೃತ್ವದ ಸಮಿತಿಯ ಮರುಪರಿಷ್ಕರಣೆಯ ಶಿಫಾರಸುಗಳ ನಡುವೆ ಹಲವು ವ್ಯತ್ಯಾಸಗಳು ಇವೆ. ಪಠ್ಯದಲ್ಲಿ ಗದ್ಯ, ಪದ್ಯ ಮತ್ತು ಪಠ್ಯಪೂರಕ ಅಧ್ಯಯನ ಎಂಬ ಮೂರು ಭಾಗಗಳಿವೆ. ಪಠ್ಯ ಪುಸ್ತಕದಲ್ಲಿರುವ ಮೊದಲನೆಯ ಗದ್ಯ ಭಾಗದಿಂದ ಮೂರು ಪಾಠಗಳನ್ನು ಕೈಬಿಡಲು ಮತ್ತು ಮೂರು ಪಾಠಗಳನ್ನು ಸೇರಿಸಲು ಮರುಪರಿಷ್ಕರಣೆ ಸಮಿತಿ ಶಿಫಾರಸು ಮಾಡಿದೆ.

ಮೊದಲ ಬಾರಿ ಪರಿಷ್ಕರಣೆಗೊಂಡ ಪಠ್ಯ ಪುಸ್ತಕದ ಮೊದಲ ಪಾಠವಾಗಿ ಸಾರಾ ಅಬೂಬಕ್ಕರ್ ಅವರ 'ಯುದ್ಧ' ಕತೆ ಇತ್ತು. ಇದು ಮುಸ್ಲಿಂ ಪಾತ್ರಗಳೇ ಹೆಚ್ಚು ಇರುವ ಮುಸ್ಲಿಂ ಹಿನ್ನೆಲೆಯ ಕತೆ. ಈ ಕತೆಯನ್ನು ಕೈಬಿಡುವಂತೆ ಮರುಪರಿಷ್ಕರಣೆ ಸಮಿತಿ ಶಿಫಾರಸು ಮಾಡಿದೆ.

ನಾಸ್ತಿಕವಾದಿಯಾಗಿದ್ದ ಎ.ಎನ್. ಮೂರ್ತಿರಾವ್ ಅವರು ಬರೆದ ವಿಡಂಬನೆಯನ್ನೊಳಗೊಂಡ ಲಲಿತಪ್ರಬಂಧ 'ವ್ಯಾಘ್ರ ಗೀತೆ' ಏಳನೆಯ ಪಾಠವಾಗಿ ಪರಿಷ್ಕೃತ ಪಠ್ಯ ಪುಸ್ತಕದಲ್ಲಿ ಇತ್ತು. ಆದರೆ, ಮರುಪರಿಷ್ಕರಣೆ ಶಿಫಾರಸಿನಲ್ಲಿ ಈ ಪ್ರಬಂಧಕ್ಕೆ ಜಾಗ ಸಿಕ್ಕಿಲ್ಲ. ಕನ್ನಡದ ಮೊದಲ ಗದ್ಯ ಕೃತಿಕಾರ ಎಂಬ ಹೆಗ್ಗಳಿಕೆ ಹೊಂದಿರುವ ಶಿವಕೋಟ್ಯಾಚಾರ್ಯ ಅವರ 'ವಡ್ಡಾರಾಧನೆ'ಯಿಂದ ಆಯ್ದ 'ಸುಕುಮಾರ ಸ್ವಾಮಿಯ ಕತೆ' ಪರಿಷ್ಕೃತ ಪಠ್ಯಪುಸ್ತಕದಲ್ಲಿ ಇತ್ತು. ಆದರೆ, ಮರುಪರಿಷ್ಕರಣೆ ಶಿಫಾರಸಿನಲ್ಲಿ ಈ ಪಾಠವನ್ನು ಕೈಬಿಡಲಾಗಿದೆ.

ಡಾ. ಬನ್ನಂಜೆ ಗೋವಿಂದಾಚಾರ್ಯ ಅವರ 'ಶುಕನಾಸನ ಉಪದೇಶ', ಕೇಶವ ಬಲಿರಾಮ ಹೆಡಗೇವಾರ್ ಅವರ 'ನಿಜವಾದ ಆದರ್ಶ ಪುರುಷ ಯಾರಾಗಬೇಕು' ಮತ್ತು ಶತಾವಧಾನಿ ಡಾ. ಆರ್. ಗಣೇಶ್ ಅವರ 'ಶ್ರೇಷ್ಠ ಭಾರತೀಯ ಚಿಂತನೆಗಳು' ಪಾಠಗಳನ್ನು ಸೇರಿಸುವಂತೆ ಚಕ್ರತೀರ್ಥ ನೇತೃತ್ವದ ಸಮಿತಿಯು ಶಿಫಾರಸು ಮಾಡಿದೆ.

ಪದ್ಯಭಾಗದಲ್ಲಿ ಯಾವುದೇ ಬದಲಾವಣೆಗೆ ಮರುಪರಿಷ್ಕರಣೆ ಸಮಿತಿಯು ಸಲಹೆ ಕೊಟ್ಟಿಲ್ಲ. 'ಪಠ್ಯ ಪೂರಕ ಅಧ್ಯಯನ' ವಿಭಾಗದಲ್ಲಿ ಮೂರು ಬದಲಾವಣೆಗಳನ್ನು ಮಾಡುವಂತೆ ಮರುಪರಿಷ್ಕರಣೆ ಸಮಿತಿಯು ಶಿಫಾರಸು ಮಾಡಿದೆ.

ಪರಿಷ್ಕೃತ ಪಠ್ಯಪುಸ್ತಕದಲ್ಲಿ ಇದ್ದ, ಎಡಪಂಥೀಯ ಡಾ.ಜಿ. ರಾಮಕೃಷ್ಣ ಅವರು ಬರೆದ 'ಭಗತ್ ಸಿಂಗ್' ಜೀವನ ಚರಿತ್ರೆಯಿಂದ ಆಯ್ದ 'ಭಗತ್ ಸಿಂಗ್' ಎಂಬ ಪಾಠವನ್ನು ಕೈಬಿಡುವಂತೆ ಚಕ್ರತೀರ್ಥ ನೇತೃತ್ವದ ಸಮಿತಿ ಹೇಳಿದೆ. 'ಬ್ಯೂಟಿ ಎಂಡ್ ದಿ ಬೀಸ್ಟ್' ಕತೆಯ ಕನ್ನಡ ಅನುವಾದ 'ಮೃಗ ಮತ್ತು ಸುಂದರಿ'ಯನ್ನೂ ಮರುಪರಿಷ್ಕೃತ ಪಠ್ಯಪುಸ್ತಕಕ್ಕೆ ಸೇರಿಸಬಾರದು ಎಂದು ಸಮಿತಿಯು ಶಿಫಾರಸು ಮಾಡಿದೆ.

'ಎದೆಗೆ ಬಿದ್ದ ಅಕ್ಷರ' ಸೇರಿಸಿದ್ದು ಯಾರು?

ದೇವನೂರ ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಲೇಖನವನ್ನು ಮರುಪರಿಷ್ಕರಿಸಿದ ಪಠ್ಯಪುಸ್ತಕದಲ್ಲಿ ಸೇರಿಸಲಾಗಿದೆ ಎಂದು ರೋಹಿತ್ ಚಕ್ರತೀರ್ಥ ಅವರು ಹೇಳಿದ್ದಾಗಿ ಇತ್ತೀಚೆಗೆ ವರದಿ ಆಗಿತ್ತು. ಈ ಹೇಳಿಕೆಗೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದು ತಪ್ಪು ಮಾಹಿತಿ ಎಂದಿದ್ದಾರೆ. ಏಕೆಂದರೆ, ಬರಗೂರು ನೇತೃತ್ವದ ಸಮಿತಿ ಪರಿಷ್ಕರಿಸಿದ ಪಠ್ಯಪುಸ್ತಕದಲ್ಲಿಯೇ 'ಎದೆಗೆ ಬಿದ್ದ ಅಕ್ಷರ' ಇತ್ತು.

ಪರಿಷ್ಕೃತ

ಪರಿವಿಡಿ

ಕ್ರ. ಸಂ	ಗದ್ಯಭಾಗ	ಕೃತಿಕಾರರ ಹೆಸರು	ಪುಟ ಸಂಖ್ಯೆ
೧.	ಯುದ್ಧ	ಸಾರಾ ಅಬೂಬಕ್ಕರ್	೧
೨.	ಶಬರಿ	ಪು. ತಿ. ನರಸಿಂಹಾಚಾರ್	೧೩
೩.	ಲಂಡನ್ ನಗರ	ವಿ. ಕೃ. ಗೋಕಾಕ್	೨೮
೪.	ಭಾಗ್ಯಶಿಲ್ಪಿಗಳು (ನಾಲ್ವಡಿ ಕೃಷ್ಣರಾಜ ಒಡೆಯರು, ಸರ್. ಎಂ. ವಿಶ್ವೇಶ್ವರಯ್ಯ)	ಸಮಿತಿ ರಚನೆ / ಡಿ. ಎಸ್. ಜಯಪ್ಪಗೌಡ	೩೮
೫.	ಎದೆಗೆ ಬಿದ್ದ ಅಕ್ಷರ	ದೇವನೂರು ಮಹಾದೇವ	೫೧
೬.	ವ್ಯಾಘ್ರಗೀತೆ	ಎ. ಎನ್. ಮೂರ್ತಿರಾವ್	೫೭
೭.	ವೃಕ್ಷಸಾಕ್ಷಿ	ದುರ್ಗಸಿಂಹ	೬೮
೮.	ಸುಕುಮಾರ ಸ್ವಾಮಿಯ ಕತೆ	ಶಿವಕೋಟ್ಯಾಚಾರ್ಯ	೮೧
	ಪದ್ಯಭಾಗ		
೧.	ಸಂಕಲ್ಪಗೀತೆ	ಜಿ. ಎಸ್. ಶಿವರುದ್ರಪ್ಪ	೯೩
೨.	ಹಕ್ಕಿಹಾರುತಿದೆ ನೋಡಿದಿರಾ	ದ. ರಾ. ಬೇಂದ್ರೆ	೧೦೦
೩.	ಹಲಗಲಿ ಬೇಡರು	ಜನಪದ ಲಾವಣಿ (ಸಂಗ್ರಹ)	೧೦೮
೪.	ಕೌರವೇಂದ್ರನ ಕೊಂದೆ ನೀನು	ಕುಮಾರ ವ್ಯಾಸ	೧೧೭
೫.	ಹಸುರು	ಕುವೆಂಪು	೧೨೯
೬.	ಛಲಮನೆ ಮೆಱೆವೆಂ	ರನ್ನ	೧೩೬
೭.	ವೀರಲವ	ಲಕ್ಷ್ಮೀಶ	೧೪೫
೮.	ಕೆಮ್ಮನೆ ಮೀಸೆವೊತ್ತನೇ	ಪಂಪ	೧೫೪
	ಪಠ್ಯಪೂರಕ ಅಧ್ಯಯನ		
೧.	ಸ್ವಾಮಿ ವಿವೇಕಾನಂದರ ಚಿಂತನೆಗಳು	ಸಮಿತಿ ರಚನೆ	೧೬೩
೨.	ವಸಂತ ಮುಖ ತೋರಲಿಲ್ಲ	ವಿಜಯಶ್ರೀ ಸಬರದ	೧೬೬
೩.	ಭಗತ್ ಸಿಂಗ್	ಜಿ. ರಾಮಕೃಷ್ಣ	೧೬೯
೪.	ಮೃಗ ಮತ್ತು ಸುಂದರಿ	ಪಿ. ಲಂಕೇಶ್	೧೭೧
೫.	ಜನಪದ ಒಗಟುಗಳು	ಸಂಗ್ರಹ	೧೭೫

viii

● ಪರಿಷ್ಕೃತ ಪಠ್ಯದಲ್ಲಿದ್ದು, ಮರುಪರಿಷ್ಕರಣೆ ಶಿಫಾರಸಿನಲ್ಲಿ ಕೈಬಿಡಲಾದ ಪಾಠಗಳು

ಮರುಪರಿಷ್ಕರಣೆ ಶಿಫಾರಸು

ಪರಿವಿಡಿ

L1X6I7

ಕ್ರ. ಸಂ	ಗದ್ಯಭಾಗ	ಕೃತಿಕಾರರ ಹೆಸರು	ಪುಟ ಸಂಖ್ಯೆ
೧.	ಶಬರಿ	ಪು. ತಿ. ನರಸಿಂಹಾಚಾರ್	೧
೨.	ಲಂಡನ್ ನಗರ	ವಿ. ಕೃ. ಗೋಕಾಕ್	೧೭
೩.	ಶುಕನಾಸನ ಉಪದೇಶ	ವಿದ್ಯಾವಾಚಸ್ಪತಿ ಡಾ. ಬನ್ನಂಜೆ ಗೋವಿಂದಾಚಾರ್ಯ	೨೯
೪.	ಭಾಗ್ಯಶಿಲ್ಪಿಗಳು (ನಾಲ್ವಡಿ ಕೃಷ್ಣರಾಜ ಒಡೆಯರು, ಸರ್ ಎಂ. ವಿಶ್ವೇಶ್ವರಯ್ಯ)	ಸಮಿತಿ ರಚನೆ / ಡಿ.ಎಸ್. ಜಯಪ್ಪಗೌಡ	೩೮
೫.	ನಿಜವಾದ ಆದರ್ಶ ಪುರುಷ ಯಾರಾಗಬೇಕು?	ಕೇಶವ ಬಲಿರಾಮ ಹೆಡಗೇವಾರ	೫೨
೬.	ಎದೆಗೆ ಬಿದ್ದ ಅಕ್ಷರ	ದೇವನೂರ ಮಹಾದೇವ	೬೦
೭.	ಶ್ರೇಷ್ಠ ಭಾರತೀಯ ಚಿಂತನೆಗಳು	ಶತಾವಧಾನಿ ಡಾ. ಆರ್. ಗಣೇಶ್	೬೮
೮.	ವೃಕ್ಷಸಾಕ್ಷಿ	ದುರ್ಗಸಿಂಹ	೮೧
	ಪದ್ಯಭಾಗ		
೯.	ಸಂಕಲ್ಪಗೀತೆ	ಜಿ. ಎಸ್. ಶಿವರುದ್ರಪ್ಪ	೯೪
೧೦.	ಹಕ್ಕಿಹಾರುತಿದೆ ನೋಡಿದಿರಾ	ದ. ರಾ. ಬೇಂದ್ರೆ	೧೦೨
೧೧.	ಹಲಗಲಿ ಬೇಡರು	ಜನಪದ ಲಾವಣಿ (ಸಂಗ್ರಹ)	೧೧೦
೧೨.	ಕೌರವೇಂದ್ರನ ಕೊಂದೆ ನೀನು	ಕುಮಾರ ವ್ಯಾಸ	೧೧೯
೧೩.	ಹಸುರು	ಕುವೆಂಪು	೧೩೨
೧೪.	ಛಲಮನೆ ಮೆಱೆವೆಂ	ರನ್ನ	೧೪೦
೧೫.	ವೀರಲವ	ಲಕ್ಷ್ಮೀಶ	೧೪೯
೧೬.	ಕೆಮ್ಮನೆ ಮೀಸೆವೊತ್ತನೇ	ಪಂಪ	೧೫೯
	ಪಠ್ಯಪೂರಕ ಅಧ್ಯಯನ		
೧.	ಉದಾತ್ತ ಚಿಂತನೆಗಳು	ಸಂಗ್ರಹ	೧೬೯
೨.	ವಸಂತ ಮುಖ ತೋರಲಿಲ್ಲ	ವಿಜಯಶ್ರೀ ಸಬರದ	೧೭೨
೩.	ಸ್ವದೇಶೀ ಸೂತ್ರದ ಸರಳ ಹಬ್ಬ	ಶಿವಾನಂದ ಕಳವೆ	೧೭೫
೪.	ನಾನು ಪ್ರಾಸ ಬಿಟ್ಟ ಕತೆ	ಎಂ. ಗೋವಿಂದ ಪೈ	೧೭೮

x

● ಹೊಸದಾಗಿ ಸೇರಿಸಲು ಮರುಪರಿಷ್ಕರಣೆ ಸಮಿತಿಯು ಶಿಫಾರಸು ಮಾಡಿದ ಪಾಠಗಳು

ಕೋಮುಸಹಿಷ್ಣುತೆ ಚಿಂತನೆಗೆ ಕೊಕ್

ಮೊದಲ ಪರಿಷ್ಕರಣೆಯ ಪಠ್ಯಪುಸ್ತಕದಲ್ಲಿ ಸ್ವಾಮಿ ವಿವೇಕಾನಂದರಿಗೆ ಸಂಬಂಧಿಸಿದ ಪಠ್ಯದಲ್ಲಿ ಧರ್ಮಸಹಿಷ್ಣುತೆ, ಕೋಮುಸಹಿಷ್ಣುತೆ ಮತ್ತು ಜಾತ್ಯತೀತ ತತ್ವಗಳನ್ನು ಬೋಧಿಸುವ ಅಂಶಗಳನ್ನು ಸೇರಿಸಲಾಗಿತ್ತು. ಆದರೆ ಮರುಪರಿಷ್ಕರಣೆಯಲ್ಲಿ ಶಿಫಾರಸು ಮಾಡಲಾದ ಪಠ್ಯಪುಸ್ತಕದಲ್ಲಿ ಈ ಎಲ್ಲಾ ಅಂಶಗಳನ್ನು ಕೈಬಿಡಲಾಗಿದೆ. ಬದಲಿಗೆ ದೇಶದ ಭಾಷೆ, ಸಂಸ್ಕೃತಿ, ವೇದಾಂತಗಳನ್ನು ಪ್ರತಿಯೊಬ್ಬರಿಗೂ ಸಾರಿ ಎಂದು ವಿವೇಕಾನಂದರು ಹೇಳಿದ್ದರು ಎಂಬ ಅಂಶಗಳನ್ನು ಸೇರಿಸಲಾಗಿದೆ.

ಪಠ್ಯಪೂರಕ ಅಧ್ಯಯನ ವಿಭಾಗದಲ್ಲಿ ಮೊದಲ ಪಠ್ಯವಾಗಿ 'ಸ್ವಾಮಿ ವಿವೇಕಾನಂದರ ಚಿಂತನೆಗಳು' ಎಂಬ ಪಾಠವನ್ನು ನೀಡಲಾಗಿತ್ತು. ಈ ಪಾಠದಲ್ಲಿ, ವಿವೇಕಾನಂದರು ಜಾತ್ಯತೀತವಾದಿಗಳಾಗಿದ್ದರು ಮತ್ತು ಅವರು ಧಾರ್ಮಿಕ ಮೂಲಭೂತವಾದದ ಪರವಾಗಿ ಇರಲಿಲ್ಲ ಎಂದು ಚಿತ್ರಿಸಲಾಗಿತ್ತು.

'ವಿವೇಕಾನಂದರು ಏಕಸಂಸ್ಕೃತಿ ಮತ್ತು ಏಕ ಧರ್ಮ ವಿಸ್ತರಣೆಗಳ ಪರವಾಗಿ ಇರಲಿಲ್ಲ. ಅದು ಹಿಂದೂ ಧರ್ಮವಿರಲಿ, ಕ್ರೈಸ್ತ ಧರ್ಮವಿರಲಿ, ಇಸ್ಲಾಂ ಧರ್ಮವಿರಲಿ, ಏಕಧರ್ಮ ಶ್ರೇಷ್ಠತೆಯು ಮತ್ತು ವಿಸ್ತರಣೆಯು ಜೀವವಿರೋಧವೆಂದು ಅವರು ಭಾವಿಸಿದ್ದರು. 1893ರ ಷಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ವಿವೇಕಾನಂದರು, 'ಸ್ವಮತಾಭಿಮಾನ, ಅನ್ಯ ಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರೆಯುತ್ತಿತ್ತು. ಪ್ರತಿಯೊಬ್ಬರೂ ಒಂದೇ ಮಾರ್ಗವನ್ನು ಅನುಸರಿಸುವ ದುರ್ದಿನ ಪ್ರಪಂಚಕ್ಕೆ ಬಾರದಿರಲಿ. ವೈವಿಧ್ಯವೇ ಜೀವನದ ರಹಸ್ಯ. ನಾವು ಎಲ್ಲ ಧರ್ಮಗಳಿಗೂ ಗೌರವವನ್ನು ತೋರಬೇಕು' ಎಂದು ಹೇಳಿದ್ದರು ಎಂಬ ಅಂಶಗಳನ್ನು ಈ ಪಾಠವು ಒಳಗೊಂಡಿತ್ತು. ಜತೆಗೆ ಅವರು 'ಎಲ್ಲಾ ಹಸಿವುಗಳಿಗಿಂತ, ದೇಹದ ಹಸಿವನ್ನು ಹಿಂಗಿಸುವುದು ಮೊದಲ ಆದ್ಯತೆ'ಯಾಗಿ ಪರಿಗಣಿಸಿದ್ದರು ಎಂದು ಪಾಠದಲ್ಲಿ ವಿವರಿಸಲಾಗಿತ್ತು.

10ನೇ ತರಗತಿಯ ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ಪಠ್ಯಪೂರಕ ಅಧ್ಯಯನ ಎಂಬ ವಿಭಾಗವನ್ನು ಉಳಿಸಿಕೊಳ್ಳಲು ಚಕ್ರತೀರ್ಥ ನೇತೃತ್ವದ ಸಮಿತಿ ಶಿಫಾರಸು ಮಾಡಿದೆ. ಆದರೆ 'ಸ್ವಾಮಿ ವಿವೇಕಾನಂದರ ಚಿಂತನೆಗಳು' ಪಾಠದ ಬದಲಿಗೆ, 'ಉದಾತ್ತ ಚಿಂತನೆಗಳು' ಎಂಬ ಸಂಗ್ರಹ ಬರಹಗಳ ಪಾಠವನ್ನು ನೀಡಲು ಸೂಚಿಸಿದೆ. ಇದರಲ್ಲಿ ಡಾ.ಬಿ.ಆರ್.ಅಂಬೇಡ್ಕರರಿಗೆ ಸಂಬಂಧಿಸಿದ ಒಂದು ಬರಹ, ಮಹಾತ್ಮ ಗಾಂಧಿ ಅವರಿಗೆ ಸಂಬಂಧಿಸಿದ ಒಂದು ಬರಹ ಮತ್ತು ಸ್ವಾಮಿ ವಿವೇಕಾನಂದರಿಗೆ ಸಂಬಂಧಿಸಿದ ಒಂದು ಬರಹ ಸೇರಿಸಲು ಸಲಹೆ ನೀಡಿದೆ. ಮರುಪರಿಷ್ಕರಣೆ ಸಮಿತಿ ಶಿಫಾರಸು ಮಾಡಿರುವ ಪಠ್ಯಪುಸ್ತಕದಲ್ಲೂ ಸ್ವಾಮಿ ವಿವೇಕಾನಂದರ ಚಿಂತನೆಗೆ ಸಂಬಂಧಿಸಿದ ಪಠ್ಯವನ್ನು ಸೇರಿಸಲಾಗಿದೆ. ಆದರೆ, 'ವೇದಾಂತದ ಹಸಿವೇ ಮುಖ್ಯ' ಎಂದು ಈ ಪಠ್ಯದಲ್ಲಿ ಹೇಳಲಾಗಿದೆ. ಜತೆಗೆ ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಬೇಕು, ಸಂಸ್ಕೃತಿಯನ್ನು ನೀಡಬೇಕು. ಜ್ಞಾನ ಸಂಪತ್ತು ಪಡೆದವರು ಕಾಡುಜನರಂತೆ ಇದ್ದಾರೆ ಎಂದು ವಿವೇಕಾನಂದರು ಹೇಳಿದ್ದರು' ಎಂದು ಹೇಳಲಾಗಿದೆ.

'ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು. ಕೇವಲ ಜ್ಞಾನರಾಶಿಗೆ ಅದನ್ನು ಎದುರಿಸುವ ಶಕ್ತಿ ಇಲ್ಲ. ಜಗತ್ತಿಗೆ ಜ್ಞಾನರಾಶಿಯನ್ನೇ ಕೊಡಬಹುದು. ಆದರೆ ಅದರಿಂದ ಹೆಚ್ಚು ಪ್ರಯೋಜನವಿಲ್ಲ. ಸಂಸ್ಕೃತಿಯು ರಕ್ತದಲ್ಲಿ ಹರಿಯಬೇಕು. ಆಧುನಿಕ ಕಾಲದಲ್ಲಿ ಬೇಕಾದಷ್ಟು ಜ್ಞಾನಸಂಪತ್ತನ್ನು ಪಡೆದ ದೇಶಗಳನ್ನು ನೋಡಿರುವೆವು. ಆದರೆ ಅದರಿಂದ ಏನು ಪ್ರಯೋಜನ? ಅವರು ಕಾಡುಜನರಂತೆ ಇರುವರು. ಅವರಲ್ಲಿ ಸಂಸ್ಕೃತಿ ಇಲ್ಲ. ನಮ್ಮ ಶಾಸ್ತ್ರಗಳಲ್ಲಿ ಹುದುಗಿರುವ, ಮಠ ಮತ್ತು ಅರಣ್ಯಗಳಲ್ಲಿ ಅಡಗಿರುವ ಕೆಲವೇ ವ್ಯಕ್ತಿಗಳ ಸ್ವತ್ತಾಗಿರುವ ಆಧ್ಯಾತ್ಮಿಕರತ್ನಗಳನ್ನು ದೇಶ ಭಾಷೆಗಳ ಮೂಲಕ ಜನರಿಗೆ ಪ್ರಚಾರ ಮಾಡಬೇಕು' ಎಂಬ ವಿವರಣೆಯನ್ನು ಈ ಪಠ್ಯದಲ್ಲಿ ನೀಡಲಾಗಿದೆ.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 124

ಬ್ರಹ್ಮನ ಮೋಹಮನದ ಮದನ

ಬ್ರಹ್ಮನ ಮನಸ್ಸಿನಿಂದ ಅತಿಲೋಕ ಸುಂದರಿಯಾದ ಸಂಧ್ಯೆ ಜನಿಸಿದಳು. ಸಂಧ್ಯೆಯ ಅಪ್ರತಿಮ ಸೌಂದರ್ಯಕ್ಕೆ ಆಕರ್ಷಿತರಾದ ಬ್ರಹ್ಮ ಮತ್ತವನ ಮಾನಸ ಪುತ್ರರು ಆಕೆಯನ್ನು ಮದುವೆಯಾಗಬೇಕೆಂದು ಯೋಚಿಸುತ್ತಿದ್ದರು. ಇಂಥ ಸಂದರ್ಭದಲ್ಲಿ ಬ್ರಹ್ಮನ ಮನಸ್ಸಿನಿಂದ ಸುಂದರನಾದ ಪುರುಷ ಜನಿಸಿದ. ಅವನಿಗೆ ಉನ್ನತವಾದ ಭುಜ, ಸುಂದರವಾದ ನಾಸಿಕ, ತುಂಬಿಕೊಂಡಂಥ ದುಂಡನೆಯದಾದ ತೊಡೆ, ಸಿಂಹದಂಥ ಸೊಂಟ, ಗಟ್ಟಿಯಾದ ಮೊಳಕಾಲು, ವಕ್ರವಾದ ಕಪ್ಪನೆಯ ತಲೆಗೂದಲು, ಹುಣ್ಣಿಮೆಯ ಚಂದ್ರನಂತಿರುವ ಮುಖ, ಹಲಗೆಯಂತೆ ವಿಶಾಲವೂ ದೃಢವೂ ಆದ ಎದೆ, ಆ ಎದೆಯಲ್ಲಿ ಸುಂದರವಾದ ರೋಮರಾಜಿಗಳು ಇದ್ದವು. ಒಟ್ಟಾರೆ, ಆತ ಉತ್ತಮ ಅಂಗಸೌಷ್ಠವದಿಂದ ಬಹು ಸುಂದರ ಪುರುಷನಾಗಿ ಪ್ರಕಾಶಿಸುತ್ತಿದ್ದ.

ಅವನಿಗೆ ಐರಾವತದಂತೆ ಉನ್ನತವೂ ಶುಭ್ರವೂ ಆದ ಆಕಾರವಿತ್ತು. ನೀಲವರ್ಣದ ಸುಂದರವಾದ ಬಟ್ಟೆಯನ್ನುಟ್ಟಿದ್ದ. ಕೆಂಪಾದ ಅಂಗೈ, ಆಕರ್ಷಕ ಕಣ್ಣುಗಳು, ಮನೋಹರವಾದ ಮುಖ, ದೃಢವಾದ ಅಂಗಾಲು ಮತ್ತು ಅದಕ್ಕೆ ಸ್ಫುಟವಾದ ಉಗುರುಗಳು ಇದ್ದವು. ಚಿಕ್ಕದಾದ ನಡು, ಸುಂದರವಾದ ದಂತಪಂಕ್ತಿಗಳು, ಕೊಬ್ಬಿದ ಸಲಗಂತೆ ಉನ್ನತವಾದ ಶರೀರ, ಅರಳಿದ ಕಮಲಗಳಂತಿರುವ ಕಣ್ಣುಗಳು, ಸಂಪಿಗೆಯಂತಿರುವ ನಾಸಿಕಗಳು ಅವನ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತಿದ್ದವು. ಸುವಾಸನೆಯಾದ ಕೇಸರಪುಷ್ಪವನ್ನು ಧರಿಸಿ, ಅದರ ಸುವಾಸನೆಯನ್ನು ಸುತ್ತಲೂ ಹರಡುತ್ತಿದ್ದ. ಶಂಖದಂತಿರುವ ಕಂಠ ಮತ್ತು ಎತ್ತರವಾದ ಶರೀರ ಹೊಂದಿದ್ದ. ವೇಗವಾಗಿ ಕಾರ್ಯಾಚರಿಸುವ ಹೂವಿನ ಐದು ಬಾಣಗಳನ್ನೂ ಮತ್ತು ಧನುಸ್ಸನ್ನೂ ಹಿಡಿದಿದ್ದ.

ಅತ್ತಿತ್ತ ದೃಷ್ಟಿಗಳನ್ನು ಚಲಿಸುತ್ತ ಕಣ್ಣುಗಳೆರಡನ್ನು ಸುಂದರವಾಗಿ ತಿರುಗಿಸುತ್ತಲಿದ್ದ. ಅವನ ಶ್ವಾಸವೂ ಸುವಾಸನೆಯಾಗಿತ್ತು. ಒಟ್ಟಾರೆ, ಶೃಂಗಾರರಸಮಯನಾಗಿದ್ದ ಆ ಪುರುಷನನ್ನು ನೋಡಿ ದಕ್ಷನೇ ಮೊದಲಾದ ನನ್ನ ಪುತ್ರರು ತುಂಬಾ ಆಶ್ಚರ್ಯಗೊಂಡು ಪರಮ ಕುತೂಹಲವುಳ್ಳವರಾದರು. ಆಗ ಮನ್ಮಥಾವಸ್ಥೆಯಿಂದ ಕೂಡಿರುವ ಆ ದಕ್ಷಾದಿಗಳ ಮನಸ್ಸು ವಿಕಾರವನ್ನು ಹೊಂದಿ, ತುಂಬಾ ಚಂಚಲವಾಯಿತು. ಆ ಪುರುಷನು ಜಗತ್ಕರ್ತನೂ ಜಗತ್ಪತಿಯೂ ಆದ ನನ್ನನ್ನು ನೋಡಿ ನಮಸ್ಕಾರಮಾಡಿದ. ನಂತರ ವಿನಯದಿಂದ ಕತ್ತನ್ನು ಬಗ್ಗಿಸಿ ನಿಂತು ಹೇಳಿದ, 'ಓ ಬ್ರಹ್ಮನೇ! ನಾನು ಯಾವ ಕಾರ್ಯವನ್ನು ಮಾಡಬೇಕೋ ಅದರಲ್ಲಿ ನನ್ನನ್ನು ನಿಯಮಿಸು. ನಿನ್ನ ಮಾನಸಪುತ್ರನಾದ ನನಗೆ ಯೋಗ್ಯವಾದ ಹೆಸರನ್ನಿಡು. ಯೋಗ್ಯವಾದ ವಾಸಸ್ಥಾನ ಮತ್ತು ಪತ್ನಿಯನ್ನು ಕಲ್ಪಿಸು' ಎಂದ.

ಆ ಸುಂದರ ಪುರುಷನ ಮಾತುಗಳನ್ನು ಕೇಳಿ ಬ್ರಹ್ಮನಾದ ನನಗೆ ತುಂಬಾ ಆಶ್ಚರ್ಯ ಮತ್ತು ಮನಸ್ಸಿಗೆ ಪುಳಕವಾಯಿತು. ಸ್ವಲ್ಪ ಹೊತ್ತು ಏನನ್ನೂ ಹೇಳದೆ ಸುಮ್ಮನಿದ್ದು, ಮನಸ್ಸನ್ನು ಸ್ಥಿರವಾಗಿ ಮಾಡಿಕೊಂಡೆ. ನಂತರ ಆ ಪುರುಷನನ್ನು ಕುರಿತು ಹೀಗೆ ಹೇಳಿದೆ. 'ಎಲೈ ಪುರುಷನೇ! ನಿನ್ನ ಈ ಸುಂದರ ಸ್ವರೂಪದಿಂದ ಮತ್ತು ನೀನು ಹಿಡಿದಿರುವ ಐದು ಪುಷ್ಪಬಾಣಗಳಿಂದ ಸ್ತ್ರೀ-ಪುರುಷರನ್ನು ಮೋಹಗೊಳಿಸುತ್ತಾ ಇರು. ಅನಾದಿಯಾದ ಈ ಸೃಷ್ಟಿಯನ್ನು ಬೆಳೆಸುವವನಾಗು. ಸ್ಥಾವರ-ಜಂಗಮಾತ್ಮಕವಾಗಿರುವ ಈ ಜಗತ್ತಲ್ಲಿರುವ ದೇವತೆಗಳೇ ಮೊದಲಾದ ಜೀವರೆಲ್ಲರೂ ನಿನ್ನ ಅಧೀನರಾಗಿರುವರು.

'ನಾನೂ, ವಾಸುದೇವ, ರುದ್ರ ನಿನ್ನ ಅಧೀನರಾಗಿರುವೆವು. ತ್ರಿಮೂರ್ತಿಗಳಲ್ಲದೆ, ಸಾಮಾನ್ಯ ಪ್ರಾಣಿಗಳೂ ನಿನ್ನ ಮೋಹಪಾಶದಲ್ಲಿರುವರು. ಅದೃಶ್ಯವಾದ ರೂಪದಿಂದ ಪ್ರಾಣಿಗಳ ಹೃದಯವನ್ನು ಪ್ರವೇಶಿಸಿ ಕಾಮಸುಖಕ್ಕೆ ಪ್ರೇರೇಪಿಸು; ಅನಾದಿಯಾದ ಈ ಸೃಷ್ಟಿಯನ್ನು ವೃದ್ಧಿಗೊಳಿಸು. ಜನಗಳ ಮನಸ್ಸೇ ನಿನ್ನ ಪುಷ್ಪಬಾಣಗಳಿಗೆ ಸುಖವಾದ ಗುರಿಯಾಗಲಿ. ಎಲ್ಲಾ ಪ್ರಾಣಿಗಳಿಗೂ ನಿತ್ಯವೂ ಕಾಮಸುಖವನ್ನುಂಟುಮಾಡುತ್ತಿರು. ನಿನ್ನ ಕಾಮಬಾಣದಿಂದ ಸೃಷ್ಟಿಯನ್ನು ನಡೆಸುತ್ತಿರು. ಇದೇ ನೀನು ಮಾಡಬೇಕಾದ ಕರ್ತವ್ಯ. ನಿನ್ನ ನಿಜವಾದ ಹೆಸರನ್ನು ನನ್ನ ಮಾನಸಪುತ್ರರಾದ ದಕ್ಷಾದಿಗಳು ಹೇಳುವರು' ಎಂದು ಹೇಳಿದ ಬ್ರಹ್ಮ ತನ್ನ ಆಸನವಾದ ಕಮಲದಲ್ಲಿ ಸ್ವಲ್ಪಹೊತ್ತು ಸುಮ್ಮನೆ ಕುಳಿತ. ನಂತರ ಆ ಸುಂದರ ಪುರುಷನಿಗೆ ಹೆಸರು ಸೂಚಿಸುವಂತೆ ತನ್ನ ಮಾನಸಪುತ್ರರಾದ ದಕ್ಷನೇ ಮೊದಲಾದವರತ್ತ ನೋಡಿದ ಎಂಬಲ್ಲಿಗೆ ಸತೀಖಂಡದ ಎರಡನೇ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪುರುಷನೊಬ್ಬ ಮಹಿಳೆಯನ್ನು ಮನಬಂದಂತೆ ಥಳಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಆಕೆ ನೋವಿನಿಂದ ಆಕ್ರಂದನ ಮಾಡುತ್ತಿದ್ದರೂ ಆಕೆಯನ್ನು ಥಳಿಸುವುದನ್ನು ವ್ಯಕ್ತಿಯು ನಿಲ್ಲಿಸುವುದಿಲ್ಲ. ಇದು ಅಮೆರಿಕದಲ್ಲಿ ನಡೆದಿರುವ ಘಟನೆ. ಮುಸ್ಲಿಂ ಮಹಿಳೆಯು ತಾನು ಅನ್ಯಧರ್ಮೀಯನನ್ನು ಮದುವೆಯಾಗುವುದಾಗಿ ಹೇಳಿದ ಕಾರಣ ಆಕೆಯ ಅಣ್ಣ ಆಕೆಯನ್ನು ಮನಬಂದಂತೆ ಥಳಿಸಿದ್ದಾನೆ ಎಂಬ ವಿವರಣೆ ವಿಡಿಯೊ ಜತೆ ಇದೆ. 'ಇದೇ ವಾಸ್ತವ. ಈಗಲಾದರೂ ಕಣ್ಣು ತೆರೆಯಿರಿ ಜಾತ್ಯತೀತ ಹಿಂದೂಗಳೇ' ಎಂಬ ಅಡಿಬರಹವನ್ನೂ ಈ ವಿಡಿಯೊಗೆ ನೀಡಲಾಗಿದೆ.

ಈ ವಿಡಿಯೊ ಜೊತೆ ಹಂಚಲಾಗಿರುವ ಮಾಹಿತಿಯು ಸುಳ್ಳು ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ವರದಿ ಮಾಡಿದೆ. ಈ ವಿಡಿಯೊದಲ್ಲಿ ಇರುವ ಮಹಿಳೆ ರಷ್ಯಾದವರು. ಆ ಮಹಿಳೆ ಉಕ್ರೇನ್‌ನ ಯುವಕನೊಬ್ಬನನ್ನು ಪ್ರೀತಿಸುತ್ತಿದ್ದು ಆತನನ್ನು ಮದುವೆಯಾಗಲು ಮನೆಯಿಂದ ಓಡಿ ಹೋಗಲು ಪ್ರಯತ್ನಿಸಿದ್ದರು. ಈ ಕಾರಣಕ್ಕೆ ಕುಪಿತರಾದ ಕುಟುಂಬದ ಸದಸ್ಯರು ಆಕೆಯ ಮೇಲೆ ಹಲ್ಲೆ ನಡೆಸಿದ್ದರು. ಈ ಕುರಿತು 'ಲೈಫ್' ಎಂಬ ಪತ್ರಿಕೆಯು 2021ರ ಜುಲೈ 5ರಂದೇ ವರದಿ ಮಾಡಿತ್ತು. ಇದು ಧರ್ಮದ ಕಾರಣಕ್ಕೆ ನಡೆದ ಹಲ್ಲೆಯಲ್ಲ ಎಂದು ಲಾಜಿಕಲ್ ಇಂಡಿಯನ್ ವರದಿಯಲ್ಲಿ ವಿವರಿಸಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮೂಲದಲ್ಲಿ ಎರಡೂ ಒಂದೇ

ಸರಿಗೆಪಂಚೆಯೊ ಹೊದಿಕೆ, ಹರಕುಚಿಂದಿಯೊ ಮೈಗೆ |
ಪರಮಾನ್ನ ಭೋಜನವೊ, ತಿರುಪೆಯಂಬಲಿಯೋ ||
ಪರಿಣಾಮದಲಿ ಧನಿಕ ಬಡವರಿರ್ವರುಮೊಂದೆ |
ಕರುಬು ಕೊರಗೇತಕೆಲೊ – ಮಂಕುತಿಮ್ಮ || 631 ||

ಪದ-ಅರ್ಥ: ಸರಿಗೆ ಪಂಚೆ = ಬೆಲೆಬಾಳುವ ರೇಷ್ಮೆಯ ಪಂಚೆ, ತಿರುಪೆಯಂಬಲಿಯೊ = ತಿರುಪೆಯ(ಭಿಕ್ಷೆ ಬೇಡಿತಂದ) + ಅಂಬಲಿಯೊ, ಬಡವರಿರ್ವರುಮೊಂದೆ = ಬಡವರು + ಇರ್ವರುಮ್ (ಇಬ್ಬರೂ) + ಒಂದೆ, ಕರುಬು = ಹೊಟ್ಟೆಕಿಚ್ಚು, ಕೊರಗೇತಕೆಲೊ = ಕೊರಗು(ಚಿಂತೆ) + ಏತಕೆ + ಎಲೊ.

ವಾಚ್ಯಾರ್ಥ: ಹೊದ್ದುಕೊಳ್ಳುವುದಕ್ಕೆ ಸರಿಗೆ ಪಂಚೆಯೋ, ಹರಕು ಚಿಂದಿಯೊ, ಊಟಕ್ಕೆ ಪರಮಾನ್ನವೊ, ಭಿಕ್ಷೆಬೇಡಿ ತಂದ ಅಂಬಲಿಯೊ, ಒಟ್ಟಿನ ಪರಿಣಾಮದಲ್ಲಿ ಶ್ರೀಮಂತ, ಬಡವ ಇಬ್ಬರೂ ಒಂದೇ. ಆದ್ದರಿಂದ ಹೊಟ್ಟೆಕಿಚ್ಚು, ಚಿಂತೆ ಏತಕ್ಕೆ?

ವಿವರಣೆ: ಕನಕದಾಸರ ಒಂದು ಅದ್ಭುತವಾದ ಕೀರ್ತನೆಯಿದೆ. ಅಶೋಕವನಕ್ಕೆ ಬಂದ ಆಂಜನೇಯನನ್ನು ತಾಯಿಸೀತೆ ಪ್ರೀತಿಯಿಂದ ಮಾತನಾಡಿಸಿ, 'ಎನ್ನ ಕಂದ, ಹಳ್ಳಿಯ ಹನುಮ, ಚೆನ್ನಾಗೈದಾರ ಲಕ್ಷ್ಮಣದೇವರು?' ಎಂದು ಕೇಳುತ್ತಾಳೆ. ಅದಕ್ಕೆ ಪ್ರತಿಯಾಗಿ ಆಂಜನೇಯ ಹೇಳುವ ಮಾತುಗಳು ಮನನೀಯವಾದವುಗಳು.

ತುಪ್ಪ ಪಂಚಾಮೃತವಂದು, ಅಡವಿಗಡ್ಡೆಗಳಿಂದು,
ಕರ್ಪೂರವೀಳ್ಯವಂದು, ಕುರುಕು ಇಂದು.
ಸುಪ್ಪತ್ತಿಗೆ ಮಂಚವಂದು, ಹುಲ್ಲು ಹಾಸಿಗೆ ಇಂದು,
ಶ್ರೀಪತಿ ರಾಘವಕ್ಷೇಮದಲೈದಾರೆ || 1 ||
ನವವಸ್ತುಗಳು ಅಂದು, ನಾರಸೀರೆಗಳಿಂದು,
ಹೂವಿನ ಗಂಟು ಅಂದು, ಗಂಟಾದ ಜಡೆಯಿಂದು,
ಜವ್ವಾಜಿಕತ್ತುರಿಯಂದು, ಭಸಿತಧೂಳಿ ಇಂದು.
ಶ್ರೀವರ ರಾಘವ ಕ್ಷೇಮದಲೈದಾರೆ || 2 ||
ಕನಕರಥಗಳು ಅಂದು, ಕಾಲುನಡಿಗೆ ಇಂದು,
ಘನಛತ್ರಚಾಮರವಂದು, ಬಿಸಿಲು ಇಂದು,
ಸನಕಾದಿಗಳೋಲೈಪ ಆದಿಕೇಶವ ನಮ್ಮ
ಹನುಮೇಶ ರಾಘವ ಕ್ಷೇಮದಲೈದಾರೆ || 3 ||

ಮಹಾನ್ ಜ್ಞಾನಿ ಹನುಮಂತ ಹೇಳುವ ರೀತಿ ನೋಡಿ. ಹಿಂದೆ ರಾಜಕುಮಾರನಾಗಿದ್ದ ಶ್ರೀರಾಮ ಮತ್ತು ವನವಾಸಿ ರಾಮನ ಸ್ಥಿತಿಗಳನ್ನು ಹೋಲಿಸಿ ಹೇಳುತ್ತಾನೆ. ಹಿಂದೆ ಅವನಿಗೆ ಇದ್ದದ್ದು, ತುಪ್ಪ ಪಂಚಾಮೃತ, ಕರ್ಪೂರ ವೀಳ್ಯೆ, ಸುಪತ್ತಿಗೆ ಮಂಚ, ನವವಸ್ತ್ರಗಳು, ಪರಿಮಳದ ಹೂವುಗಳು, ಜವ್ವಾಜಿ ಕಸ್ತೂರಿಗಳು, ಕನಕರಥಗಳು, ಘನ ಛತ್ರ ಚಾಮರಗಳು. ಇವು ಅವನ ವೈಭವವನ್ನು ಸಾರಿದರೆ, ಈಗ ಅವನಿಗೆ ಇರುವುವು, ಅಡವಿ ಗಡ್ಡೆಗಳು, ಕುರುಕುತಿಂಡಿ, ಹುಲ್ಲುಹಾಸಿಗೆ, ನಾರಸೀರೆ, ಗಂಟಾದ ಜಡೆ, ಧೂಳು, ಕಾಲು ನಡಿಗೆ, ಬಿಸಿಲು. ಆದರೆ ಶ್ರೀರಾಮ ತುಂಬ ಕ್ಷೇಮವಾಗಿದ್ದಾನೆ. ಹಾಗೆಂದರೆ ಶ್ರೀಮಂತಿಕೆಯೋ, ಅರಣ್ಯವಾಸವೊ, ಶ್ರೀರಾಮನಿಗೆ ಎರಡೂ ಒಂದೇ ಎಂಬುದು ಒಂದರ್ಥವಾದರೆ, ಯಾವುದೇ ಸ್ಥಿತಿಯಲ್ಲಿದ್ದರೂ ಅವನು ಶ್ರೀರಾಮನೇ ಅಲ್ಲವೆ? ಕಗ್ಗದ ಧ್ವನಿಯೂ ಅದೇ. ರೇಷ್ಮೆ ಬಟ್ಟೆಯೋ, ಹರಕುಚಿಂದಿಯೋ, ಪರಮಾನ್ನವೋ, ಭಿಕ್ಷಾನ್ನವೊ, ಅವುಗಳನ್ನು ಅನುಭವಿಸುವವನು ಅದೇ ವ್ಯಕ್ತಿ. ಅವನಲ್ಲಿ ಆತ್ಮಶಕ್ತಿ ಪ್ರಬಲವಾಗಿದ್ದರೆ ಬಾಹ್ಯ ಅವಶ್ಯಕತೆಗಳು ಬದಲಾವಣೆ ಮಾಡಲಾರವು. ಮೂಲದಲ್ಲಿ, ಅವು ಆವರಣಗಳು. ಒಳಗಿರುವ ವಸ್ತು ಮುಖ್ಯ. ಆದ್ದರಿಂದ ಬಾಹ್ಯ ಅಲಂಕಾರಗಳನ್ನು ಕಂಡು ಹೊಟ್ಟೆಕಿಚ್ಚುಪಡುವುದು, ಚಿಂತೆ ಬೇಕಾಗಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮೇ 19, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣ ಚತುರ್ಥಿ ಗಂ. 20-24 ನಕ್ಷತ್ರ: ಮೂಲಾ ಗಂ. 05-37 ಪೂರ್ವಾಷಾಢಾ ಗಂ. 27-17 ಯೋಗ: ಸಾಧ್ಯ ಗಂ. 14-57, ಕರಣ: ಬವ ಗಂ. 09-59, ವೃಷಭ ಮಾಸದ 04 ನೇ ದಿನ. ರಾಹುಕಾಲ: ಮಧ್ಯಾಹ್ನ 01:30 – 03:00 ಸೂರ್ಯೋದಯ: 06-07 ಸೂರ್ಯಾಸ್ತ: 06-47 ಮುಸ್ಲಿಂ ದಿನಾಂಕ : 17 ಶವ್ವಾಲ್ ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ ಗಂ. 10-24)
ಅದೃಷ್ಟ ಸಂಖ್ಯೆ : 2, 5

ಮೇಷ: ಆರ್ಥಿಕ ಭಾಗವು ಈ ದಿನ ತುಂಬಿಕೊಂಡಿರುತ್ತದೆ. ಕೆಲಸದ ಪ್ರದೇಶಗಳು ನಿಮ್ಮ ಅಭಿವೃದ್ಧಿಗೆ ಪೂರಕವಾಗಿರುತ್ತವೆ. ಕೋರ್ಟ್ ವ್ಯವಹಾರಗಳು ಬಗೆಹರಿಯಬಹುದೆಂಬ ನಿಮ್ಮ ಆಲೋಚನೆಯು ಇತರರ ದುರ್ಬುದ್ಧಿಯಿಂದ ವ್ಯತ್ಯಾಸ.

ವೃಷಭ: ವೈಯಕ್ತಿಕ ಕೆಲಸಕ್ಕೆ ಸಮಯ ಮೀಸಲಿಡಿ. ದಾಖಲೆ ಪರಿಶೀಲನೆಯಂತಹ ತೀರ್ಮಾನದಿಂದ ನಿಸ್ಸಂಶಯವಾಗಿ ನಿಮ್ಮ ಮನೋವ್ಯಾಧಿ ದೂರಾಗುತ್ತದೆ. ಗುತ್ತಿಗೆ ಆಧಾರಿತ ಉತ್ತಮ ಉದ್ಯೋಗ ದೊರೆತು ಲಾಭ ಸಿಗಲಿದೆ.

ಮಿಥುನ: ಬ್ಯಾಂಕ್ ನೌಕರರಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ಅಡವಿಟ್ಟಿದ್ದ ನಿಮ್ಮ ಸ್ವತ್ತು ಋಣ ಪರಿಹಾರವಾಗಿ ನಿಮ್ಮ ಕೈ ಸೇರಲಿದೆ. ಯಾವುದೋ ಮೂಲದಿಂದ ಬಂದ ಹಣ ದೇವ ಕಾರ್ಯಗಳಿಗೆ ಉಪಯೋಗಿಸಿ.

ಕರ್ಕಾಟಕ: ನಿಮ್ಮ ಪರಿವಾರದವರೊಡನೆ ಸಂಚಾರ. ಸಂದಿಗ್ಧ ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸುವಿರಿ. ಕೆಲಸದ ಒತ್ತಡವನ್ನು ಅಥವಾ ಒಂದು ಸಂಘ ಸಂಸ್ಥೆಯ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸುವಂತಾಗುವುದು.

ಸಿಂಹ: ಕೌಟುಂಬಿಕವಾಗಿ ನಿಮ್ಮ ಪ್ರಮುಖ ವಿಷಯವೊಂದು ತಿಳಿದು ಬರಲಿದೆ. ಮುಕ್ತ ಮನಸ್ಸಿನ ಮಾತುಕತೆಗಳಿಂದ ಸರಿಪಡಿಸಿಕೊಳ್ಳಬಹುದು. ಕೆಲಸಗಳೆಲ್ಲವೂ ನಿರಾತಂಕವಾಗಿ ಸಾಗಲಿದೆ. ನಿಮ್ಮ ಮನೋಭಿಲಾಷೆ ಈಡೇರುವುದು.

ಕನ್ಯಾ: ವ್ಯವಹಾರಗಳಲ್ಲಿ ನುರಿತವರ ಸಲಹೆ ಪಡೆದರೆ ಯಶಸ್ವಿಯಾಗುವಿರಿ. ಆಟಿಕೆಗಳ ಮಾರಾಟದವರಿಗೆ ಉತ್ತಮ ಮಾರಾಟ, ಲಾಭ. ಬಹುದಿನಗಳಿಂದ ಕೂಡಿಟ್ಟ ಹಣದಿಂದ ಬಂಗಾರ ಖರೀದಿಸುವ ಮನಸ್ಸಾಗಲಿದೆ.

ತುಲಾ: ಹೆಚ್ಚಿನ ಹೊಣೆಗಾರಿಕೆ ಹೊರಲು ನೀವು ಸಿದ್ಧರಾಗಿರುವಿರಿ ಮತ್ತು ಶಕ್ತರಾಗಿರುವಿರಿ. ನಿಮ್ಮ ಕೌಶಲವನ್ನು ತೋರಲು ಹೆಚ್ಚಿನ ಅವಕಾಶಗಳು ಇಂದು ಎದುರಾಗಲಿದೆ. ತೆರಿಗೆಗೆ ಸಂಬಂಧದ ಕೆಲಸ ಪೂರ್ಣಗೊಳಿಸಿ.

ವೃಶ್ಚಿಕ: ದಿನದಿಂದ ದಿನಕ್ಕೆ ಹೊಸ ಹೊಸ ಪ್ರಯತ್ನವಿರಲಿ. ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಉತ್ಸಾಹದಿಂದ ಭಾಗವಹಿಸುವಿರಿ. ಸಂಗೀತ ಕಲಾವಿದರಿಗೆ ಉತ್ತಮ ವೇದಿಕೆ ದೊರಕುವ ಮುನ್ಸೂಚನೆ ಸಿಗುತ್ತದೆ.

ಧನು: ಸ್ವಂತವಾಗಿ ಉದ್ಯೋಗ ಮಾಡುವವರಿಗೆ ವರಮಾನದಲ್ಲಿ ಉತ್ತಮ ಸುಧಾರಣೆ. ಕಬ್ಬಿಣ ಅಥವಾ ಗ್ಲಾಸ್‌ಗಳಿಂದ ಗಾಯ ಆಗುವ ಲಕ್ಷಣಗಳಿವೆ. ಅಂತಹ ಕೆಲಸ ಕಾರ್ಯಗಳಲ್ಲಿ ಅಧಿಕವಾಗಿ ಗಮನವಿರಲಿ.

ಮಕರ: ಬದಲಾವಣೆಗೆ ಇಂದು ಸಮಂಜಸ ದಿನವಲ್ಲ. ಕೊಡು ಕೊಳ್ಳುವ ವ್ಯವಹಾರಗಳಲ್ಲಿ ಹೆಚ್ಚಿನ ಲಾಭ ಕಂಡು ಕೆಲಸಗಳನ್ನು ವೃದ್ಧಿಸಿಕೊಳ್ಳುವಿರಿ. ತಂದೆಯ ಮನಸ್ಸಿಗೆ ನೋವಾಗುವ ಸಂಗತಿಯು ಇಂದು ನಿಮ್ಮಿಂದ ನಡೆಯಲಿದೆ.

ಕುಂಭ: ಇಂದಿನ ರಾಜಕೀಯ ಸನ್ನಿವೇಷಗಳು ಅನುಕೂಲವಾಗಿರುವುದು. ಕಚೇರಿಯಲ್ಲಿ ಕೆಲಸದ ವೇಗ ಹೆಚ್ಚಿಸಿಕೊಳ್ಳಿ. ನಿಮ್ಮ ಸಮಯ, ಅನುಕೂಲತೆಯ ಮೇಲೆ ಹೊಸ ಕೆಲಸಗಳನ್ನು ಒಪ್ಪಿಕೊಳ್ಳುವ ನಿರ್ಧಾರಕ್ಕೆ ಬನ್ನಿರಿ.

ಮೀನ: ವೈಜ್ಞಾನಿಕ ಹಾಗೂ ತಾಂತ್ರಿಕ ಕ್ಷೇತ್ರದಲ್ಲಿರುವವರು ಇಂದು ನಿಮ್ಮ ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿ ರೂಢಿಸಿಕೊಳ್ಳಬೇಕು. ಆದಾಯ ತೆರಿಗೆ ಪಾವತಿಸುವಿರಿ. ಕ್ರೀಡಾಪಟುಗಳಿಗೆ ಸಂತಸಕರ ಸುದ್ದಿ ಕೇಳಿ ಬರಲಿದೆ.

ಪದಬಂಧ 4962

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವನದಲ್ಲಿ ದೊರೆತಿರುವ ಆದಾಯ (4)
3.ಕಾಡು ಪ್ರಾಣಿ ಇಲ್ಲಿದೆ (4)
5.ದುಃಖಕ್ಕೆ ಮೂಲವಾದ ಅತೀ ಆಸೆ (3)
6.ಒಂದು ಕಡೆಯಿಂದ ಇನ್ನೊಂದಡೆಗೆ ಸಾಗಿಸುವಿಕೆ (3)
8.ತವರಿನವರು ಕೊಟ್ಟಿರುವ ಲೋಹ (3)
10.ಮಂಕ ಹೊತ್ತಿರುವ ಬುಟ್ಟಿ (3)
11.ಸರದ ಜತೆಯಿರಿಸಿದ ಸಾಮಾನು (3)
13.ದೇವಾಲಯದ ಗೋಪುರದ ತುದಿ (3)
15.ಈಕೆ ಒಡಹುಟ್ಟಿದವಳು (4)
16.ಪಟದಲ್ಲಿಯೇ ಈ ತೊಳಲಾಟ! (4)

ಮೇಲಿಂದ ಕೆಳಕ್ಕೆ
1.ವರ ಪಡೆದಿರುವ ಬೇಡ (4)
2.ನನಗದು ಬೇಕು ಎಂದವನ ಕೈಯಲ್ಲಿನ ದುಡ್ಡು (3)
3.ಮದುವೆ ಗಂಡು ತೋರಿದ ವ್ಯಾಯಾಮದ ಪಟ್ಟು (3)
4.ಕಾಲವನ್ನು ತೋರಿಸುವ ಯಂತ್ರ (4)
7.ಈತ ವಾದ್ಯ ನುಡಿಸುವವನು (3)
9.ವಾಗ್ಮಿ ಇಲ್ಲಿಗೆ ಬಂದಿದ್ದಾನೆ (3)
10.ಮಂದ ಬುದ್ಧಿಯವನ ಮುಗುಳುನಗೆ! (4)
12.ಕುಡಿಗಣ್ಣಲ್ಲಿ ನೋಡಿದ ನೋಟ (4)
13.ಪಾಪ! ಕರಿಯ ಮರಿ ಬಿದ್ದಿದೆಯಲ್ಲಾ ಈ ಪ್ರಪಾತದಲ್ಲಿ! (3)
14.ಸರಸದ ಮಾತುಕತೆ (3)



4961ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಧುಮಾಸ 3.ಸ್ವಾಹ 5.ಬಡತನ 7.ಪಾದುಕೆ 8.ವನಪಾಲಕ 11.ಉದಕ 12.ನವರಂಗ 14.ಸಟೆ 15.ಪರಿಚಿತ

ಮೇಲಿಂದ ಕೆಳಕ್ಕೆ: 1.ಮನೋಬಲ 2.ಮಾವುತ 4.ಹರಕೆ 6.ನವೀನ 7.ಪಾನಕ 8.ವರ್ತಕ 9.ಲಶುನ 10.ಅಂಗಜಾತ 11.ಉಲ್ಲಾಸ 13.ವಯ್ಯಾರಿ

ಸುಡೊಕು 5348

				6				2
		6					5	
	1			5		6		4
	8			1		4		
3		4	2		7		8	
	9		4		3			6
6		5				8		
				7				1
1		8	9		6		4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5347 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ದೆಹಲಿ ಲೆಫ್ಟಿನೆಂಟ್ ಗವರ್ನರ್ ಅನಿಲ್ ಬೈಜಲ್ ರಾಜೀನಾಮೆ

ಅನಿಲ್ ಬೈಜಲ್

ನವದೆಹಲಿ (ಪಿಟಿಐ): ದೆಹಲಿ ಲೆಫ್ಟಿನೆಂಟ್ ಗವರ್ನರ್ ಅನಿಲ್ ಬೈಜಲ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

'ವೈಯಕ್ತಿಕ ಕಾರಣಗಳನ್ನು ನೀಡಿ ಬೈಜಲ್ ಅವರು ರಾಜೀನಾಮೆ ನೀಡಿದ್ದು, ರಾಷ್ಟ್ರಪತಿ ಅವರಿಗೆ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದಾರೆ' ಎಂದು ಹಿರಿಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

2016 ರಲ್ಲಿ ರಾಷ್ಟ್ರ ರಾಜಧಾನಿ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಆಗಿ ಅನಿಲ್ ಬೈಜಲ್ ಅವರನ್ನು ನೇಮಕ ಮಾಡಲಾಗಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಜ್ಞಾನವಾಪಿಯಲ್ಲಿ ಮತ್ತೊಂದು ಸುತ್ತು ಸಮೀಕ್ಷೆಗೆ ಕೋರಿ ನ್ಯಾಯಾಲಯಕ್ಕೆ ಹೊಸ ಅರ್ಜಿ

'ಶಿವಲಿಂಗ ಪೂಜೆಗೆ ಅವಕಾಶ ನೀಡಿ'

ಪ್ರಜಾವಾಣಿ ವಾರ್ತೆ

ಲಖನೌ: ಶಿವಲಿಂಗ ಪತ್ತೆಯಾಗಿದೆ ಎನ್ನಲಾದ ಜ್ಞಾನವಾಪಿ ಮಸೀದಿಯ ಸಂಕೀರ್ಣದಲ್ಲಿ ಪೂಜೆ ಸಲ್ಲಿಸಲು ಅವಕಾಶ ನೀಡಬೇಕು ಎಂದು ಕೋರಿ ವಾರಾಣಸಿ ನ್ಯಾಯಾಲಯಕ್ಕೆ ಹೊಸ ಅರ್ಜಿಯೊಂದು ಸಲ್ಲಿಕೆಯಾಗಿದೆ.

ಈ ಸಂಬಂಧ ಬುಧವಾರ ಅರ್ಜಿ ಸಲ್ಲಿಸಿರುವ ರೇಖಾ ಪಾಠಕ್, ಮಂಜು ವ್ಯಾಸ್ ಮತ್ತು ಸೀತಾ ಸಾಹು ಅವರು, 'ಮಸೀದಿಯ ನೆಲಮಹಡಿಯಲ್ಲಿ ಮತ್ತೊಂದು ಸುತ್ತಿನ ಸಮೀಕ್ಷೆ ನಡೆಸಬೇಕು. ಅಲ್ಲದೆ, ಆ ಜಾಗದಲ್ಲಿ ಬೇರೆ ಏನಾದರೂ ಇದೆಯೇ ಎಂಬುದನ್ನು ತಿಳಿಯಲು ಅವಶೇಷಗಳನ್ನು ತೆರವು ಮಾಡಬೇಕು' ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ಈ ಅರ್ಜಿಯನ್ನು ನ್ಯಾಯಾಲಯವು ಗುರುವಾರ ವಿಚಾರಣೆ ನಡೆಸುವ ಸಾಧ್ಯತೆಯಿದೆ ಎಂದು ಅರ್ಜಿದಾರರ ಪರ ವಕೀಲರು ತಿಳಿಸಿದ್ದಾರೆ.

ಸದ್ಯ ಜ್ಞಾನವಾಪಿ ಮಸೀದಿಯಲ್ಲಿ ಶಿವಲಿಂಗ ಇದೆ ಎನ್ನಲಾದ ಸ್ಥಳಕ್ಕೆ ರಕ್ಷಣೆ ನೀಡಿ, ನಮಾಜ್ ಮಾಡಲು ಅವಕಾಶ ಕಲ್ಪಿಸುವಂತೆ ಸುಪ್ರೀಂ ಕೋರ್ಟ್ ವಾರಾಣಸಿ ಜಿಲ್ಲಾಡಳಿತಕ್ಕೆ ಈಗಾಗಲೇ ಸೂಚಿಸಿದೆ.

ಎಐಎಂಪಿಎಲ್‌ಬಿ ಆಗ್ರಹ: ದೇಶದಲ್ಲಿ ಮುಸ್ಲಿಮರ ಆರಾಧನಾ ಸ್ಥಳಗಳನ್ನು ಗುರಿಯಾಗಿಸಿಕೊಂಡಿರುವ ಆರೋಪದ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸುವಂತೆ ಕೇಂದ್ರ, ರಾಜ್ಯ ಸರ್ಕಾರಗಳನ್ನು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿಎಲ್‌ಬಿ) ಕೇಳಿದೆ.

ಜ್ಞಾನವಾಪಿ ಮಸೀದಿ ಪ್ರಕರಣದಲ್ಲಿ ಇಂತೇಝಾಮಿಯಾ ಮಸಜಿದ್ ಸಮಿತಿ ಮತ್ತು ಅದರ ವಕೀಲರಿಗೆ ಕಾನೂನು ನೆರವು ನೀಡಲು ಮಂಡಳಿಯು ನಿರ್ಧರಿಸಿದೆ. ಅಗತ್ಯವಿದ್ದಲ್ಲಿ ರಾಷ್ಟ್ರವ್ಯಾಪಿ ಆಂದೋಲನವನ್ನು ಪ್ರಾರಂಭಿಸಲು, ಧಾರ್ಮಿಕ ಸ್ಥಳಗಳನ್ನು ಗುರಿಯಾಗಿಸಿಕೊಂಡು ವಿವಾದಗಳನ್ನು ಸೃಷ್ಟಿಸುವ ಉದ್ದೇಶದ ಬಗ್ಗೆ ಸಾರ್ವಜನಿಕರಿಗೆ ತಿಳಿಸಲು ನಿರ್ಧರಿಸಿದೆ.

ಮಂಡಳಿಯ ಕಾರ್ಯಕಾರಿ ಸಮಿತಿಯ ವರ್ಚುವಲ್ ಸಭೆ ಮಂಗಳವಾರ ತಡರಾತ್ರಿ ನಡೆದಿದ್ದು, ಇದರಲ್ಲಿ ಹಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಎಐಎಂಪಿಎಲ್‌ಬಿ ಕಾರ್ಯಕಾರಿ ಸದಸ್ಯ ಖಾಸಿಂ ರಸೂಲ್ ಇಲಿಯಾಸ್ ಬುಧವಾರ ತಿಳಿಸಿದ್ದಾರೆ.

ಜ್ಞಾನವಾಪಿ ಮಸೀದಿ ಮತ್ತು ಮಥುರಾದ ಶಾಹಿ ಮಸೀದಿ ಈದ್ಗಾದ ಕುರಿತ ವಿವಾದಗಳನ್ನು ಉಲ್ಲೇಖಿಸಿದ ಇಲಿಯಾಸ್, 'ದೇಶದಲ್ಲಿ ಮುಸ್ಲಿಮರ ಪ್ರಾರ್ಥನಾ ಸ್ಥಳಗಳನ್ನು ಗುರಿಯಾಗಿಸಲಾಗುತ್ತಿದೆ. ಧಾರ್ಮಿಕ ಸ್ಥಳಗಳ ಕಾಯ್ದೆ – 1991 ಅನ್ನು ಬಹಿರಂಗವಾಗಿ ವಿರೋಧಿಸಲಾಗುತ್ತಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಈ ಬಗ್ಗೆ ಮೌನವಾಗಿರುವುದು ಅತ್ಯಂತ ವಿಷಾದದ ಸಂಗತಿ. ಇದಲ್ಲದೇ ಜಾತ್ಯತೀತ ಪಕ್ಷಗಳೆಂದು ಕರೆಸಿಕೊಳ್ಳುವ ರಾಜಕೀಯ ಪಕ್ಷಗಳೂ ಮೌನ ವಹಿಸುತ್ತಿವೆ' ಎಂದು ಹೇಳಿದ್ದಾರೆ.

ಶಾಹಿ ಈದ್ಗಾ ಮಸೀದಿ: ಹಿಂದೂ ಧಾರ್ಮಿಕ ಕುರುಹುಗಳ ರಕ್ಷಣೆ ಕೋರಿ ಅರ್ಜಿ

ಮಥುರಾ (ರಾಯಿಟರ್ಸ್): ಶ್ರೀ ಕೃಷ್ಣ ಜನ್ಮಭೂಮಿ- ಶಾಹಿ ಈದ್ಗಾ ಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ ಪ್ರಾಚೀನ ಹಿಂದೂ ಧಾರ್ಮಿಕ ಕುರುಹುಗಳ ರಕ್ಷಣೆ ಕೋರಿ ಅರ್ಜಿ ಸಲ್ಲಿಸಲಾಗಿದೆ.

ಮಸೀದಿಯನ್ನು ಬಂದ್ ಮಾಡಿ ಭದ್ರತೆ ಒದಗಿಸಬೇಕೆಂದು ಮಹೇಂದ್ರ ಪ್ರತಾಪ್ ಸಿಂಗ್ ಎಂಬುವವರು ಸಿವಿಲ್ ಕೋರ್ಟ್‌ನ ಹಿರಿಯ ನ್ಯಾಯಾಧೀಶರ ಮುಂದೆ ಅರ್ಜಿ ಸಲ್ಲಿಸಿದ್ದಾರೆ.

ವಿವಾದಕ್ಕೆ ಸಂಬಂಧಿಸಿದಂತೆ ತ್ವರಿತ ವಿಚಾರಣೆಗೆ ಅಲಹಾಬಾದ್ ಹೈಕೋರ್ಟ್ ಮೇ 12ರಂದು ನಿರ್ದೇಶನ ನೀಡಿತ್ತು. ಮರು ದಿನವೇ, ಶೀಘ್ರ ಹಿರಿಯ ಅಡ್ವೊಕೇಟ್ ಕಮಿಷನರ್ ನೇಮಿಸುವಂತೆ ಕೋರಿ ಮಥುರಾ ನ್ಯಾಯಾಲಯದಲ್ಲಿ ಎರಡು ಅರ್ಜಿಗಳನ್ನು ಸಲ್ಲಿಸಲಾಗಿತ್ತು.

ವಕೀಲರ ಮುಷ್ಕರ: ನಡೆಯದ ವಿಚಾರಣೆ

ವಾರಾಣಸಿ (ಪಿಟಿಐ): ಸರ್ಕಾರಿ ಅಧಿಕಾರಿಯೊಬ್ಬರ ಹೇಳಿಕೆಯನ್ನು ವಿರೋಧಿಸಿ ಜಿಲ್ಲೆಯಲ್ಲಿ ವಕೀಲರು ಮುಷ್ಕರ ನಡೆಸುತ್ತಿರುವ ಕಾರಣ ಜ್ಞಾನವಾಪಿ ಮಸೀದಿ ಪ್ರಕರಣದ ವಿಚಾರಣೆ ಬುಧವಾರ ಇಲ್ಲಿನ ನ್ಯಾಯಾಲಯದಲ್ಲಿ ನಡೆಯಲಿಲ್ಲ.

'ಬನಾರಸ್ ಬಾರ್ ಅಸೋಸಿಯೇಷನ್, ವಾರಾಣಸಿಯ ಸೆಂಟ್ರಲ್ ಬಾರ್ ಅಸೋಸಿಯೇಷನ್‌ನ ವಕೀಲರ ವಿರುದ್ಧ ಸರ್ಕಾರದ ಕಾರ್ಯದರ್ಶಿ ನೀಡಿದ್ದ ಹೇಳಿಕೆಯಿಂದ ವಕೀಲರು ಅಸಮಾಧಾನಗೊಂಡಿದ್ದರು. ಹಾಗಾಗಿ, ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ವಕೀಲರು ಮುಷ್ಕರ ನಡೆಸಿದರು. ಇದರಿಂದ ಬುಧವಾರ ನ್ಯಾಯಾಲಯದಲ್ಲಿ ಮಸೀದಿ ಪ್ರಕರಣದ ವಿಚಾರಣೆ ನಡೆಯಲಿಲ್ಲ' ಎಂದು ಮುಸ್ಲಿಮರ ಪರ ವಕೀಲರಾದ ಅಭಯ್ ಯಾದವ್ ತಿಳಿಸಿದರು.

'ಇಡೀ ದೇಶದ ದೃಷ್ಟಿ ಜ್ಞಾನವಾಪಿ ಮಸೀದಿ ಪ್ರಕರಣದ ಮೇಲಿರುವುದರಿಂದ ಬುಧವಾರದಂದು ವಿಚಾರಣೆಯಲ್ಲಿ ಭಾಗವಹಿಸಲು ವಕೀಲರಿಗೆ ಅವಕಾಶ ನೀಡಬೇಕೆಂದು ವಕೀಲರನ್ನು ಒತ್ತಾಯಿಸಿದ್ದೆವು. ಆದರೆ, ಅದು ಫಲ ನೀಡಲಿಲ್ಲ' ಎಂದು ಹಿಂದೂಗಳ ಪರ ವಕೀಲರಾದ ಮದನ್ ಮೋಹನ್ ಯಾದವ್ ಹೇಳಿದರು.

ಸುದ್ದಿ 2 ನಿಮಿಷ

ಕಾರ್ತಿ ಚಿದಂಬರಂ ಆಪ್ತನ ಬಂಧನ

ನವದೆಹಲಿ (ಪಿಟಿಐ): ಲಂಚ ಪಡೆದು ನಿಯಮಗಳನ್ನು ಮೀರಿ ಚೀನಾ ಪ್ರಜೆಗಳಿಗೆ ವೀಸಾ ಕೊಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಂಸದ ಕಾರ್ತಿ ಚಿದಂಬರಂ ಅವರ ಆಪ್ತ ಎಸ್. ಭಾಸ್ಕರ ರಾಮನ್ ಅವರನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ.

ಈ ಸಂಬಂಧ ಕಾರ್ತಿ ಚಿದಂಬರಂ ಮತ್ತು ಇತರರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡಿತ್ತು.

ಮಂಗಳವಾರ, ತನಿಖಾ ಸಂಸ್ಥೆಯು ಕೇಂದ್ರದ ಮಾಜಿ ಗೃಹ ಸಚಿವ ಪಿ.ಚಿದಂಬರಂ ಅವರ ಮನೆ ಸೇರಿ ದೇಶದಾದ್ಯಂತ 10 ಸ್ಥಳಗಳಲ್ಲಿ ದಾಳಿ ನಡೆಸಿತ್ತು.

ಕಾರ್ತಿ ಚಿದಂಬರಂ, ಭಾಸ್ಕರ ರಾಮನ್ ಮತ್ತು ಖಾಸಗಿ ಸಂಸ್ಥೆ ಸೇರಿದಂತೆ ಇತರರನ್ನು ಆರೋಪಿಗಳೆಂದು ಹೆಸರಿಸಲಾಗಿದೆ ಎಂದು ಸಿಬಿಐನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಫ್‌ಐಆರ್‌ನ ಪ್ರಕಾರ, ಪಂಜಾಬ್‌ನ ಮಾನ್ಸಾ ಮೂಲದ ಖಾಸಗಿ ಸಂಸ್ಥೆ, ತಲ್ವಂಡಿ ಸಾಬೋ ಪವರ್ ಲಿಮಿಟೆಡ್ ಯೋಜನೆಯನ್ನು ನಿಗದಿತ ಸಮಯದೊಳಗೆ ಮುಗಿಸುವ ಧಾವಂತದಲ್ಲಿತ್ತು. ಅದಕ್ಕಾಗಿ, ಚೀನಾದ ಪ್ರಜೆಗಳನ್ನು ಕರೆಸಿಕೊಳ್ಳಲು ಅವರಿಗೆ ನಿಯಮ ಮೀರಿ ವೀಸಾ ಕೊಡಿಸಲು ಮಧ್ಯವರ್ತಿಗಳನ್ನು ಬಳಸಿಕೊಂಡು ₹50 ಲಕ್ಷ ಪಾವತಿ ಮಾಡಿದೆ ಎಂದು ಆರೋಪಿಸಲಾಗಿದೆ.

ಭಾರತದ ಹಡಗು ನಿಗ್ರಹ ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಲಸೋರ್, ಒಡಿಶಾ (ಪಿಟಿಐ): ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ಭಾರತೀಯ ನೌಕಾಪಡೆಯು ದೇಶೀಯವಾಗಿ ಅಭಿವೃದ್ಧಿಪಡಿಸಿದ ಹಡಗು ನಿಗ್ರಹ ಕ್ಷಿಪಣಿಯನ್ನು ಬುಧವಾರ ಒಡಿಶಾದ ಚಾಂಡಿಪುರದಲ್ಲಿ ನೌಕಾ ಹೆಲಿಕಾಪ್ಟರ್ ಮೂಲಕ ಯಶಸ್ವಿಯಾಗಿ ಪರೀಕ್ಷೆಗೆ ಒಳಪಡಿಸಲಾಯಿತು ಎಂದು ಡಿಆರ್‌ಡಿಒ ಪ್ರಕಟಣೆ ತಿಳಿಸಿವೆ.

ಈ ಯೋಜನೆಯು ತನ್ನೆಲ್ಲಾ ಗುರಿಗಳನ್ನು ಪೂರ್ಣಗೊಳಿಸಿದೆ. ತನ್ನ ಪಥದಲ್ಲಿ ಚಲಿಸುವ ಮೂಲಕ ನಿಖರತೆ ಮತ್ತು ನಿಯಂತ್ರಿತವಾಗಿ ತನ್ನ ನಿರ್ದಿಷ್ಟ ಗುರಿಯನ್ನು ತಲುಪಿದೆ ಎಂದು ಬುಧವಾರ ಡಿಆರ್‌ಡಿಒ ತಿಳಿಸಿದೆ.

ಈ ಕ್ಷಿಪಣಿ ವ್ಯವಸ್ಥೆಗೆ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಲಾಗಿದೆ. ಅವುಗಳಲ್ಲಿ ಹೆಲಿಕಾಪ್ಟರ್‌ಗಳಿಗೆ ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಲಾಂಚರ್ ಕೂಡ ಒಂದಾಗಿದೆ. ಅಲ್ಲದೆ ಅತ್ಯಾಧುನಿಕ ನ್ಯಾವಿಗೇಷನ್ ವ್ಯವಸ್ಥೆ ಮತ್ತು ಇಂಟಿಗ್ರೇಟೆಡ್ ಏವಿಯಾನಿಕ್ಸ್ ಅನ್ನೂ ಇದು ಒಳಗೊಂಡಿದೆ. ಕ್ಷಿಪಣಿ ಉಡಾವಣೆ ವೇಳೆ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಈ ಯಶಸ್ವಿಗಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಡಿಆರ್‌ಡಿಒ ಮುಖ್ಯಸ್ಥ ಡಾ. ಜಿ. ಸತೀಶ್ ರೆಡ್ಡಿ ತಂಡವನ್ನು ಅಭಿನಂದಿಸಿದ್ದಾರೆ.

ಶೀನಾ ಕೊಲೆ: ಇಂದ್ರಾಣಿಗೆ ಜಾಮೀನು

ನವದೆಹಲಿ (ಪಿಟಿಐ): ತಮ್ಮ ಮಗಳು ಶೀನಾ ಬೋರಾ ಕೊಲೆ ಪ್ರಕರಣದ ಪ್ರಮುಖ ಆರೋಪಿ, ಇಂದ್ರಾಣಿ ಮುಖರ್ಜಿ ಅವರಿಗೆ ಸುಪ್ರೀಂ ಕೋರ್ಟ್ ಬುಧವಾರ ಜಾಮೀನು ನೀಡಿದೆ.

ಇಂದ್ರಾಣಿ ಅವರು 2015ರಿಂದ ಜೈಲಿನಲ್ಲಿದ್ದಾರೆ. ಪ್ರಕರಣದಲ್ಲಿ 237 ಸಾಕ್ಷಿಗಳ ಪಟ್ಟಿ ಮಾಡಲಾಗಿದೆ. ಈವರೆಗೆ 68 ಸಾಕ್ಷಿಗಳ ವಿಚಾರಣೆ ಮಾತ್ರ ನಡೆದಿದೆ. ಹಾಗಾಗಿ, ವಿಚಾರಣೆಯು ಸದ್ಯಕ್ಕೆ ಪೂರ್ಣಗೊಳ್ಳದು ಎಂದು ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ನೇತೃತ್ವದ ಪೀಠವು ಹೇಳಿದೆ.

'ಅಪರಾಧ ಒಳಸಂಚು ನಡೆಸಿ, ಮಗಳನ್ನು ಕೊಲೆ ಮಾಡುವ ಉದ್ದೇಶದಿಂದ ಅಪಹರಣ ಮಾಡಿದ ಆರೋಪ ಇಂದ್ರಾಣಿ ಅವರ ಮೇಲಿದೆ. ಇಂದ್ರಾಣಿ ಅವರು ಈ ಪ್ರಕರಣದ ಇನ್ನೊಬ್ಬ ಆರೋಪಿ ಪೀಟರ್ ಮುಖರ್ಜಿ ಅವರ ಹೆಂಡತಿ. ಪೀಟರ್ ಮುಖರ್ಜಿಗೆ ಮೊದಲ ಹೆಂಡತಿಯಲ್ಲಿ ಹುಟ್ಟಿದ ಮಗ ರಾಹುಲ್ ಮುಖರ್ಜಿಯ ಜತೆಗೆ ಮಗಳು ಶೀನಾ ಬೋರಾ ಸಹಜೀವನ ನಡೆಸುತ್ತಿದ್ದಾರೆ ಎಂಬ ಕಾರಣಕ್ಕೆ ಮಗಳನ್ನು ಕೊಲ್ಲಲು ಇಂದ್ರಾಣಿ ಷಡ್ಯಂತ್ರ ಮಾಡಿದ್ದರು ಎಂಬುದು ಅವರ ಮೇಲಿರುವ ಆರೋಪ' ಎಂದು ಪೀಠವು ಹೇಳಿದೆ.

'ಪ್ರಕರಣದಲ್ಲಿನ ಸರಿ ತಪ್ಪುಗಳ ಬಗ್ಗೆ ಪೀಠವು ಏನನ್ನೂ ಹೇಳುವುದಿಲ್ಲ. ಅದು ಕಕ್ಷಿದಾರರ ಹಿತಾಸಕ್ತಿಗೆ ಪ್ರತಿಕೂಲ ಆಗಬಹುದು. ಇಂದ್ರಾಣಿ ಅವರು ಆರೂವರೆ ವರ್ಷ ಜೈಲಿನಲ್ಲಿ ಇದ್ದರು ಮತ್ತು ಸಾಕ್ಷಿಗಳ ವಿಚಾರಣೆಗೆ ಇನ್ನೂ ಬಹಳ ಕಾಲ ಬೇಕು ಎಂಬುದನ್ನಷ್ಟೇ ಗಣನೆಗೆ ತೆಗೆದುಕೊಳ್ಳಲಾಗಿದೆ' ಎಂದು ಪೀಠವು ತಿಳಿಸಿದೆ.

ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ಇಂದ್ರಾಣಿ ಪರವಾಗಿ ವಾದಿಸಿದ್ದರು. ಇಂದ್ರಾಣಿ ಅವರ ಜಾಮೀನು ಅರ್ಜಿಯನ್ನು ವಿಶೇಷ ಸಿಬಿಐ ನ್ಯಾಯಾಲಯವು ಹಲವು ಬಾರಿ ವಜಾ ಮಾಡಿತ್ತು.

ಜಾಮೀನು ಷರತ್ತುಗಳನ್ನು ವಿಚಾರಣಾ ನ್ಯಾಯಾಲಯವು ಅಂತಿಮಗೊಳಿಸಬೇಕಿದೆ. ಅದಕ್ಕಾಗಿ ಸಿಬಿಐ ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ ಅರ್ಜಿ ಸಲ್ಲಿಸುವುದಾಗಿ ಇಂದ್ರಾಣಿ ಪರ ವಕೀಲೆ ಸನಾ ರಯೀಸ್ ಶೇಖ್ ಹೇಳಿದ್ದಾರೆ.

ಶೀನಾ ಬೋರಾ (24) ಅವರನ್ನು 2012ರ ಏಪ್ರಿಲ್‌ನಲ್ಲಿ ಹತ್ಯೆ ಮಾಡಲಾಗಿತ್ತು. ಇಂದ್ರಾಣಿ ಮುಖರ್ಜಿ, ಅವರ ಚಾಲಕನಾಗಿದ್ದ ಶ್ಯಾಮವರ್ ರಾಯ್ ಮತ್ತು ಇಂದ್ರಾಣಿ ಅವರ ಹಿಂದಿನ ಗಂಡ ಸಂಜೀವ್ ಖನ್ನಾ ಅವರು ಕಾರಿನಲ್ಲಿ ಶೀನಾ ಅವರನ್ನು ಉಸಿರುಗಟ್ಟಿಸಿ ಕೊಂದಿದ್ದಾರೆ. ಮೃತದೇಹವನ್ನು ಕಾಡಿನಲ್ಲಿ ಸುಡಲಾಗಿದೆ ಎಂಬ ಆರೋಪ ಇದೆ.

ಪ್ರತಿಭಟನೆ ಕೈಬಿಟ್ಟ ರೈತರು

ಚಂಡಿಗಡ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರೊಂದಿಗಿನ ಸಭೆಯ ನಂತರ ಪ್ರತಿಭಟನಾ ನಿರತ ರೈತರು ತಮ್ಮ ಹೋರಾಟವನ್ನು ಅಂತ್ಯಗೊಳಿಸಲು ಒಪ್ಪಿಕೊಂಡಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪ್ರತಿ ಕ್ವಿಂಟಲ್ ಗೋಧಿಗೆ ₹500 ಬೋನಸ್ ಮತ್ತು ಜೂನ್ 10 ರಿಂದ ಭತ್ತ ಬಿತ್ತನೆ ಮಾಡಲು ಅವಕಾಶ ನೀಡುವುದು ಸೇರಿದಂತೆ ರೈತರ ಬೇಡಿಕೆಗಳ ಈಡೇರಿಕೆ ಕುರಿತು ಮಾನ್ ಮತ್ತು ಹಲವಾರು ರೈತ ಮುಖಂಡರ ನಡುವೆ ಸಭೆ ನಡೆಯಿತು.

ಒಬಿಸಿ ಮೀಸಲಾತಿಗೆ 'ಸುಪ್ರೀಂ' ಅನುಮತಿ

ಮುಖ್ಯಾಂಶಗಳು

- ಮೇ 10ರ ಆದೇಶ ಮಾರ್ಪಡಿಸಿದ ಸುಪ್ರೀಂ ಕೋರ್ಟ್
- ಶಿಫಾರಸಿನಂತೆ ಮೀಸಲು ಅಧಿಸೂಚನೆಗೆ ನಿರ್ದೇಶನ
- ಒಂದು ವಾರದಲ್ಲಿ ಮೀಸಲಾತಿ ಅಧಿಸೂಚನೆ ಹೊರಡಿಸಲು ಸೂಚನೆ

ನವದೆಹಲಿ (ಪಿಟಿಐ): ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಾತಿ ನೀಡಲು ಮಧ್ಯಪ್ರದೇಶ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ.

ತ್ರಿಸ್ತರ ಪರಿಶೀಲನೆಯ ನಂತರವಷ್ಟೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಒಬಿಸಿಗೆ ಮೀಸಲಾತಿ ನೀಡಬೇಕು ಎಂದು ಮೇ 10ರ ತನ್ನ ಆದೇಶದಲ್ಲಿ ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು. ಆದರೆ ಈಚೆಗಷ್ಟೇ ಪೂರ್ಣಗೊಂಡಿರುವ ಕ್ಷೇತ್ರ ಮರುವಿಂಗಡಣೆಯ ಅನ್ವಯ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಅನುವು ಮಾಡಿಕೊಡಿ ಎಂದು ಮಧ್ಯಪ್ರದೇಶ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ಒಬಿಸಿ ಆಯೋಗವು ಮೇ 12ರಂದು ಸಲ್ಲಿಸಿರುವ ಎರಡನೇ ವರದಿಯ ಅನ್ವಯ ಒಬಿಸಿ ಸಮುದಾಯಗಳಿಗೆ ಮೀಸಲಾತಿ ಅಧಿಸೂಚನೆ ಹೊರಡಿಸಲು ಅನುಮತಿ ನೀಡಿ ಎಂದು ಮಧ್ಯಪ್ರದೇಶ ಸರ್ಕಾರ ಕೋರಿತ್ತು.

ನ್ಯಾಯಮೂರ್ತಿಗಳಾದ ಎ.ಎಂ.ಖಾನ್‌ವಿಲ್ಕರ್, ಎ.ಎಸ್. ಓಕಾ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ಪೀಠವು ಈ ಅರ್ಜಿಯನ್ನು ಮಾನ್ಯ ಮಾಡಿದೆ. ಮೇ 10 ರಂದು ನೀಡಲಾಗಿದ್ದ ಆದೇಶವನ್ನು ಮಧ್ಯಪ್ರದೇಶಕ್ಕೆ ಅನ್ವಯವಾಗುವಂತೆ ಮಾರ್ಪಡಿಸಿದೆ.

'ಮೇ 10ರ ನಮ್ಮ ಆದೇಶದ ನಂತರ, ಆಯೋಗವು ಮೇ 12 ರಂದು ತನ್ನ ಎರಡನೇ ವರದಿಯನ್ನು ಸಲ್ಲಿಸಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಒಬಿಸಿಗೆ ಎಷ್ಟು ಮೀಸಲಾತಿ ನೀಡಬೇಕು ಎಂಬುದರ ವಿವರವನ್ನೂ ಆಯೋಗ ತನ್ನ ಎರಡನೇ ವರದಿಯಲ್ಲಿ ನೀಡಿದೆ' ಎಂದು ಪೀಠವು ಹೇಳಿದೆ.

'ಒಬಿಸಿ ಆಯೋಗವು ಸಲ್ಲಿಸಿರುವ ವರದಿಯಲ್ಲಿ ಸೂಚಿಸಿರುವ, ಒಬಿಸಿ ಮೀಸಲಾತಿಗೆ ಅನುಗುಣವಾಗಿ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೀಸಲಾತಿ ಅಧಿಸೂಚನೆಯನ್ನು ಹೊರಡಿಸಿ. ಒಂದು ವಾರದ ಒಳಗೆ ಈ ಕೆಲಸ ಆಗಬೇಕು. ಆನಂತರದ ಒಂದು ವಾರದಲ್ಲಿ ರಾಜ್ಯ ಚುನಾವಣಾ ಆಯೋಗವು ಚುನಾವಣಾ ಅಧಿಸೂಚನೆಯನ್ನು ಹೊರಡಿಸಬೇಕು' ಎಂದು ಪೀಠವು ಆದೇಶಿಸಿದೆ.

ತೆರವು ಕಾರ್ಯಾಚರಣೆಗೆ ಅಡ್ಡಿ ಎಎಪಿ ಶಾಸಕ ಬಂಧನ

ನವದೆಹಲಿ(ಪಿಟಿಐ): ದೆಹಲಿ ಅಭಿವೃದ್ಧಿ ಪ್ರಾಧಿಕಾರ(ಡಿಡಿಎ) ನಡೆಸುತ್ತಿರುವ ತೆರವು ಕಾರ್ಯಾಚರಣೆಗೆ ಅಡ್ಡಿಪಡಿಸಿದ ಆರೋಪದ ಮೇಲೆ ಆಮ್ ಆದ್ಮಿ ಪಾರ್ಟಿ (ಎಎಪಿ) ಶಾಸಕ ಕುಲದೀಪ್ ಕುಮಾರ್ ಅವರನ್ನು ಬುಧವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಲ್ಯಾಣಪುರದ ಕಿಚಡಿಪುರ ಪ್ರದೇಶದಲ್ಲಿ ಆರಂಭವಾದ ತೆರವು ಕಾರ್ಯಾಚರಣೆ ವಿರೋಧಿಸಿ ಕುಂಡ್ಲಿ(ಪೂರ್ವ) ಕ್ಷೇತ್ರದ ಶಾಸಕ ಕುಲದೀಪ್ ಪ್ರತಿಭಟನೆ ನಡೆಸಿದ್ದರು. ಈ ಬಗ್ಗೆ ಡಿಡಿಎಯಿಂದ ಯಾವುದೇ ಪ್ರತಿಕ್ರಿಯೆ ಲಭ್ಯವಾಗಿಲ್ಲ. ಅಕ್ರಮ ಕಟ್ಟಡ ತೆರವಿಗೆ ಯಾವುದೇ ಅಡ್ಡಿ ಆಗದಂತೆ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಕಳೆದೊಂದು ತಿಂಗಳಿಂದ ದೆಹಲಿ ಸ್ಥಳೀಯ ಆಡಳಿತಗಳು ಅಕ್ರಮ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಿರಂತರವಾಗಿ ನಡೆಸುತ್ತಿವೆ. ಶಾಹಿನ್ ಬಾಗ್, ಜಹಂಗೀರ್‌ಪುರಿ, ಮದಂಪುರ, ಖಾದರ್, ನ್ಯೂ ಫ್ರೆಂಡ್ಸ್ ಕಾಲೊನಿ, ಮಂಗೋಲ್ಪುರಿ, ರೊಹಿಣಿ, ಗೋಕುಲ್ಪುರಿ, ಲೋಧಿ ಕಾಲೊನಿ, ರಿಥಲಾ, ಜನಕಪುರಿ, ಹರಿ ನಗರ ಮತ್ತು ಖ್ಯಾಲ ಸೇರಿ ಹಲವು ಪ್ರದೇಶಗಳಲ್ಲಿ ಅಕ್ರಮ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗಿದೆ.

ಹಿರಿಯ ನಾಯಕರಿಗೆ ಚಿಕನ್ ಸ್ಯಾಂಡ್‌ವಿಚ್, ಮೊಬೈಲ್ ಕಡೆಯೇ ಹೆಚ್ಚು ಗಮನ; ಆರೋಪ

ಕಾಂಗ್ರೆಸ್ ತೊರೆದ ಹಾರ್ದಿಕ್ ಪಟೇಲ್

ಪ್ರಜಾವಾಣಿ ವಾರ್ತೆ

ಹಾರ್ದಿಕ್ ಪಟೇಲ್

ಅಹಮದಾಬಾದ್ (ಪಿಟಿಐ): ಪಾಟೀದಾರ್ ಮೀಸಲಾತಿ ಪರ ಹೋರಾಟಗಾರ ಹಾರ್ದಿಕ್ ಪಟೇಲ್ ಅವರು ಗುಜರಾತ್ ಕಾಂಗ್ರೆಸ್ ಕಾರ್ಯಾಧ್ಯಕ್ಷ ಸ್ಥಾನ ಮತ್ತು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಬುಧವಾರ ರಾಜೀನಾಮೆ ನೀಡಿದರು. ಪಕ್ಷದ ನಾಯಕತ್ವವು ಗುಜರಾತ್ ಮತ್ತು ಗುಜರಾತಿಗಳ ಮೇಲೆ ದ್ವೇಷ ಇರುವಂತೆ ವರ್ತಿಸುತ್ತದೆ ಎಂದು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಸಲ್ಲಿಸಿರುವ ರಾಜೀನಾಮೆ ಪತ್ರದಲ್ಲಿ ಹಾರ್ದಿಕ್ ಆರೋಪಿಸಿದ್ದಾರೆ.

ಪಕ್ಷದ ಕುರಿತು ತಮಗಿರುವ ಅಸಮಾಧಾನವನ್ನು ಪತ್ರದ ಮೂಲಕ ಹೊರಹಾಕಿರುವ ಹಾರ್ದಿಕ್ ಅವರು, 'ನನ್ನಂಥ ಕಾರ್ಯಕರ್ತರು ಕಾಂಗ್ರೆಸ್ ಸಭೆಯಲ್ಲಿ ಭಾಗವಹಿಸಿ ಚರ್ಚೆ ನಡೆಸಲು 500ರಿಂದ 600 ಕಿ.ಮೀ ಪ್ರಯಾಣ ಮಾಡಿ ಹೋಗುತ್ತಿದ್ದೆವು. ಆದರೆ ಕೆಲವು ಮುಖಂಡರು ದೆಹಲಿಯ ನಾಯಕರಿಗೆ ಸರಿಯಾದ ಸಮಯಕ್ಕೆ ಚಿಕನ್ ಸ್ಯಾಂಡ್‌ವಿಚ್ ದೊರಕಿದೆಯೇ ಎಂಬ ಯೋಚನೆಯಲ್ಲಿ ಇರುತ್ತಿದ್ದರು' ಎಂದು ಆರೋಪಿಸಿದ್ದಾರೆ.

'ಗುಜರಾತ್ ಸಮಸ್ಯೆಗಳ ಕಡೆ ನಾಯಕರ ಗಮನ ಸೆಳೆಯಲು ನಾನು ಪ್ರಯತ್ನಿಸಿದಾಗಲೆಲ್ಲಾ ಅವರು ಮೊಬೈಲ್ ಬಳಸುವಲ್ಲಿ ನಿರತರಾಗಿರುತ್ತಿದ್ದರು. ಪಕ್ಷಕ್ಕೆ ಮತ್ತು ದೇಶಕ್ಕೆ ಅವರ ಅಗತ್ಯವಿದ್ದಾಗ ಕೆಲ ನಾಯಕರು ವಿದೇಶದಲ್ಲಿ ಮೋಜಿನಲ್ಲಿ ತೊಡಗಿರುತ್ತಿದ್ದರು. ಕಾಂಗ್ರೆಸ್ ನಾಯಕರು ಯಾವ ವಿಷಯದಲ್ಲೂ ಗಂಭೀರತೆ ಹೊಂದಿಲ್ಲ. ಇದು ಕಾಂಗ್ರೆಸ್ ನಾಯಕತ್ವದ ಬಹುಮುಖ್ಯವಾದ ಸಮಸ್ಯೆ ಆಗಿದೆ' ಎಂದು ಅವರು ಪತ್ರದಲ್ಲಿ ಆಪಾದನೆ ಮಾಡಿದ್ದಾರೆ.

ಮೋದಿ ಹೊಗಳಿದ ಹಾರ್ದಿಕ್: 'ಕಾಂಗ್ರೆಸ್ ಅನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ನಾನು ಪ್ರಯತ್ನಿಸಿದ್ದರೂ ಪಕ್ಷವು ದೇಶ ಮತ್ತು ನಮ್ಮ ಸಮಾಜದ ವಿರುದ್ಧವೇ ಕೆಲಸ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವು ದೇಶ, ಗುಜರಾತ್ ಮತ್ತು ಪಾಟೀದಾರ್ ಸಮುದಾಯಕ್ಕಾಗಿ ಯಾವ ಉತ್ತಮ ಕ್ರಮಗಳನ್ನು ಕೈಗೊಂಡರೂ ಕಾಂಗ್ರೆಸ್ ಮಾಡುವ ಏಕೈಕ ಕೆಲಸವೆಂದರೆ ಅದನ್ನು ವಿರೋಧಿಸುವುದು. ಕೇಂದ್ರ ಮತ್ತು ರಾಜ್ಯಮಟ್ಟದ ಕಾಂಗ್ರೆಸ್ ನಾಯಕತ್ವವು ಕೇಂದ್ರ ಸರ್ಕಾರ ಜಾರಿ ಮಾಡುವ ಕಾರ್ಯಕ್ರಮಗಳನ್ನು ವಿರೋಧಿಸುವುದಕ್ಕೆ ಮಾತ್ರ ಸೀಮಿತವಾಗಿವೆ' ಎಂದು ಪತ್ರದಲ್ಲಿ ಬರೆದಿದ್ದಾರೆ.

'ದೇಶದ ಬಹುತೇಕ ರಾಜ್ಯಗಳಲ್ಲಿ ಕಾಂಗ್ರೆಸ್ ತಿರಸ್ಕೃತಗೊಂಡಿದೆ. ಪಕ್ಷದ ನಾಯಕರಿಗೆ ದೇಶದ ಪ್ರಮುಖ ಸಮಸ್ಯೆಗಳ ಕುರಿತು ಗಂಭೀರತೆಯೇ ಇಲ್ಲ. ನಾನು ಹಲವಾರು ಬಾರಿ ಪಕ್ಷದ ನಾಯಕರನ್ನು ಭೇಟಿ ಆಗಿದ್ದೇನೆ. ಅವರಿಗೆ ಗುಜರಾತ್ ಜನರ ಸಂಕಷ್ಟಗಳನ್ನು ಕೇಳುವ ಆಸಕ್ತಿಯೇ ಇಲ್ಲ ಎಂದು ನನಗೆ ಪ್ರತಿ ಬಾರಿಯೂ ಅನಿಸಿದೆ' ಎಂದಿದ್ದಾರೆ.

'ಹಾರ್ದಿಕ್‌ಗೆ ಬಿಜೆಪಿ ನಂಟು': ಬಿಜೆಪಿ ತಾಳಕ್ಕೆ ಹಾರ್ದಿಕ್ ಹಾಡುತ್ತಿದ್ದಾರೆ. ಅವರೊಬ್ಬ ಅವಕಾಶವಾದಿ ಮತ್ತು ಅಪ್ರಾಮಾಣಿಕ ವ್ಯಕ್ತಿ. ಪಾಟೀದಾರ್ ಮೀಸಲು ಹೋರಾಟವನ್ನು ಮುನ್ನಡೆಸಿದ್ದಕ್ಕಾಗಿ ಅವರ ವಿರುದ್ಧ ದಾಖಲಿಸಲಾಗಿರುವ ಮೊಕದ್ದಮೆಗಳಿಂದ ಬಿಡುಗಡೆ ಪಡೆಯಲು ಅವರು ಆರು ವರ್ಷಗಳಿಂದಲೂ ಬಿಜೆಪಿ ಜೊತೆ ಸಂಪರ್ಕ ಹೊಂದಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಪಂಜಾಬ್ ಕಾಂಗ್ರೆಸ್‌ನ ಮುಖಂಡ ಸುನೀಲ್ ಜಾಖಡ್, ಹಿರಿಯ ನಾಯಕ ಅಶ್ವಿನಿ ಕುಮಾರ್ ಸೇರಿ ಹಲವು ನಾಯಕರು ಇತ್ತೀಚೆಗೆ ಕಾಂಗ್ರೆಸ್ ತೊರೆದಿದ್ದಾರೆ.

ಕಾಳ್ಗಿಚ್ಚು: ನೆಲಬಾಂಬ್ ಸ್ಫೋಟ

ಜಮ್ಮು: ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಅರಣ್ಯವೊಂದರಲ್ಲಿ ಕಾಣಿಸಿಕೊಂಡ ಬೆಂಕಿಯು ಇಲ್ಲಿನ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಯುದ್ದಕ್ಕೂ ಹಲವು ಕಡೆ ನೆಲಬಾಂಬ್ ಸ್ಫೋಟಕ್ಕೆ ಕಾರಣವಾಗಿದೆ.

'ಗಡಿ ನಿಯಂತ್ರಣ ರೇಖೆಗೆ ಹೊಂದಿಕೊಂಡ ಅರಣ್ಯದಲ್ಲಿ ಸೋಮವಾರ (ಮೇ.16) ಕಾಣಿಸಿಕೊಂಡ ಬೆಂಕಿಯು ಭಾರತದ ಭೂಭಾಗದ ಮೆಂದಾರ್ ವಲಯಕ್ಕೂ ವ್ಯಾಪಿಸಿದೆ.ಬೆಂಕಿಯಿಂದ ಸುಮಾರು ಅರ್ಧ ಡಜನ್ ನೆಲಬಾಂಬ್ ಸ್ಫೋಟಕ್ಕೆ ಕಾರಣವಾಗಿದ್ದು, ಇದು ಒಳನುಸುಳುವಿಕೆ ವಿರೋಧಿ ತಡೆ ವ್ಯವಸ್ಥೆ ಭಾಗವಾಗಿತ್ತು' ಎಂದು ಅಧಿಕಾರಿಗಳು ತಿಳಿಸಿದರು.

'ಕಳೆದ ಮೂರು ದಿನಗಳಿಂದ ಕಾಳ್ಗಿಚ್ಚು ಕಾಣಿಸಿಕೊಂಡಿದ್ದು, ಸೇನೆಯೊಂದಿಗೆ ಬೆಂಕಿಯನ್ನು ನಂದಿಸುವ ಕೆಲಸ ಮಾಡುತ್ತಿದ್ದೇವೆ. ಬೆಂಕಿ ನಿಯಂತ್ರಣಕ್ಕೆ ಬಂದಿತ್ತು ಆದರೆ ಇಂದು ಮುಂಜಾನೆ ದರಮಶಾಲ್ ಬ್ಲಾಕ್‌ನಲ್ಲಿ ಮತ್ತೆ ಬೆಂಕಿ ಕಾಣಿಸಿಕೊಂಡಿತ್ತು. ಅತಿಯಾದ ಗಾಳಿಯಿಂದ ಬೆಂಕಿಯು ವೇಗವಾಗಿ ಗಡಿ ಭಾಗದ ಕುಗ್ರಾಮಗಳಿಗೂ ಹರಡತೊಡಗಿತು. ಸದ್ಯ ಬೆಂಕಿ ನಿಯಂತ್ರಣಕ್ಕೆ ಬಂದಿದೆ' ಎಂದು ಅರಣ್ಯ ರಕ್ಷಕ ಕಾನರ್ ಹುಸೇನ್ ಶಾ ತಿಳಿಸಿದರು.

'ರಾಜೋರಿ ಜಿಲ್ಲೆಯ ಗಡಿ ಸಮೀಪದ ಸುಂದರಬಂಡಿ ಪ್ರದೇಶದಲ್ಲಿ ಬುಧವಾರ ಮತ್ತೊಂದು ಭಾರಿ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದ್ದು, ಗಂಭೀರ್, ಮೊಘಲಾ ಸೇರಿ ಇತರ ಅರಣ್ಯ ಪ್ರದೇಶಗಳಿಗೆ ವ್ಯಾಪಿಸಿದೆ. ಕಲಕೋಟೆಯ ಕಾಳಾರ್, ರಂತಾಲ್, ಚಿಂಗಿ ಅರಣ್ಯಗಳಲ್ಲೂ ಬೆಂಕಿ ಕಾಣಿಸಿಕೊಂಡಿದೆ. ಬಿಎಸ್‌ಎಫ್‌ನ ಬೆಲಿ ಅಜ್ಮತ್ ಬೋರರ್ ಗಡಿ ಚೌಕಿ ಸಮೀಪದ ಎಲ್‌ಒಸಿ ಪ್ರದೇಶಕ್ಕೆ ಬೆಂಕಿ ವ್ಯಾಪಿಸಿದ್ದು,ನಿಯಂತ್ರಣಕ್ಕೆ ತರಲಾಗಿದೆ' ಎಂದು ಅಧಿಕಾರಿಗಳು ಹೇಳಿದರು.

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ಪಿ.ಎಂ.ಭದ್ರೇಗೌಡ್ರು
ಪರಪ್ಪನ ಅಗ್ರಹಾರ
ಜನನ: 15.05.1945 ನಿಧನ: 19.05.2021
ಸದಾ ನಿಮ್ಮನ್ನೂ ಸ್ಮರಿಸುವ ಹಾಗೂ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ.
ಪತ್ನಿ, ಮಕ್ಕಳು, ಸೊಸೆಯಂದಿರು, ಸಹೋದರ, ಸಹೋದರಿಯರು, ಅಳಿಯಂದಿರು, ಕುಟುಂಬವರ್ಗದವರು ಮತ್ತು ಸ್ನೇಹಿತರು ಹಾಗೂ ಗ್ರಾಮಸ್ಥರು

ಐದನೇ ವರ್ಷದ ಚಿರಸ್ಮರಣೆ

ಶ್ರೀಮತಿ. ಗೌರಮ್ಮ
ಮಾಜಿ ಅಧ್ಯಕ್ಷರು, ಬೆಂಗಳೂರು ದಕ್ಷಿಣ ತಾಲ್ಲೂಕ ಪಂಚಾಯಿತಿ
"ನೀವು ನಮ್ಮನ್ನಗಲಿ ಇಂದಿಗೆ 5 ವರ್ಷವಾದರೂ ನಿಮ್ಮ ಸವಿನೆನಪು ಸದಾ ಹಸಿರಾಗಿರುತ್ತದೆ, ನೀವು ತೋರಿದ ಬೆಳಕಿನಲ್ಲೆ ಮುನ್ನಡೆಯುತ್ತಿರುವ
ಪತಿ ಮೈ. ಮುನಿಯಪ್ಪ ಬಿಜೆಪಿ ಮುಖಂಡರು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ, ಸಹೋದರರು, ಮಕ್ಕಳು ಮತ್ತು ಕುಟುಂಬವರು
ಪರಪ್ಪನ ಅಗ್ರಹಾರ, ಬೆಂಗಳೂರು. 9341943661

10ನೇ ವರ್ಷದ ಚಿರಸ್ಮರಣೆ



ಜನನ: 21.03.1951 ● ನಿಧನ: 19.05.2012
ಶ್ರೀ ಬಿ.ಗೋಪಾಲಪ್ಪ
ನಿವೃತ್ತ ಸೇವಕರು, ಡಿ.ವೈ.ಎಸ್.ಎಸ್ (ಕರ್ನಾಟಕ ಸರ್ಕಾರ)
ನಿಮ್ಮ ಆಶೀರ್ವಾದವು ನಮ್ಮ ಜೀವನದ ದಾರಿದೀಪವಾಗಿದೆ, ಸದಾ ನಿಮ್ಮನ್ನು ಸ್ಮರಿಸುವ ಜಯಮ್ಮ. ಕೆ (ಧರ್ಮಪತ್ನಿ) ಮತ್ತು ಕುಟುಂಬದವರು.
ಭೈರಸಂದ್ರ, ಸಿ.ವಿ. ರಾಮನ್‌ನಗರ ಬೆಂಗಳೂರು–93.

ವೈಕುಂಠ ಸಮಾರಾಧನೆ

ರವೀಂದ್ರ .ಬಿ.ಎಸ್
ನಿವೃತ್ತ ಕನ್ನಡ ಶಿಕ್ಷಕರು,
(ಜೂನಿಯರ್ ಕಾಲೇಜು, ನೆಲಮಂಗಲ)
ಜನನ: 03.02.1944 – ಮರಣ 10.05.2022
ರವೀಂದ್ರ ಬಿ.ಎಸ್. ರವರು ದಿನಾಂಕ 10.05.2022ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇದಕ್ಕೆ ತತ್ಸಂಬಂಧವಾಗಿ ವೈಕುಂಠ ಸಮಾರಾಧನೆಯನ್ನು ದಿನಾಂಕ: 20.05.2022 ಶುಕ್ರವಾರದಂದು ಮೃತರ ಸ್ವಾಗೃಹದಲ್ಲಿ ಸುಭಾಷ್‌ನಗರ, (ವಿಶಾಲ್ ಸ್ಕೂಲ್ ಎದುರು) ನೆಲಮಂಗಲದಲ್ಲಿ ಸಮಯ ಬೆಳಿಗ್ಗೆ 10.00 ಗಂಟೆಯಿಂದ ನೆರವೇರಿಸಲು ನಿಶ್ಚಯಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ಪ್ರಾರ್ಥನೆ.
ಇಂತಿ ದುಃಖತಪ್ತರು :
ಮೃತರ ಪತ್ನಿ ಶ್ರೀಮತಿ ಅನ್ನಪೂರ್ಣ .ಹೆಚ್.ಆರ್ ಮಕ್ಕಳು ಹಾಗೂ ಕುಟುಂಬ ವರ್ಗದವರು
ಮೊ: 9902077002

ವೈಕುಂಠ ಸಮಾರಾಧನೆ

ಶ್ರೀಮತಿ ಕೆ. ರಾಜೇಶ್ವರಿ
ಶ್ರೀ ಪಿ.ರಾಜರೆಡ್ಡಿರವರ ಧರ್ಮಪತ್ನಿ, ಮಾರತ್‌ಹಳ್ಳಿ, ಬೆಂಗಳೂರು
ಇವರು ದಿ: 08.05.2022ರ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿ: 19.05.2022ರ ಗುರುವಾರ ಬೆಳಗ್ಗೆ 9.00 ಗಂಟೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ದುಃಖತಪ್ತರು: ಅಜಂತಾ ಕುಟುಂಬಸ್ಥರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಟಾಟಾಮೋಟಾರ್ಸ್, TOYOTA, ಬ್ರಿಟಾನಿಯಾ, ಆನ್‌ಲೈನ್ಗಳಿಗೆ 7th SSLC PUC/ Degree/ ITI/ Diplomaದವರು 18,600-54,000 ವಸತಿಯೂಟವಿದೆ. 9731066259, 9731670789

Marketing & Sales

"MSWIPE TECHNOLOGIES ಕ್ರೆಡಿಟ್/ ಡೆಬಿಟ್ ಕಾರ್ಡ್ ಯಂತ್ರಗಳು, ವ್ಯಾಪಾರಸಾಲಗಳು ಮತ್ತು ಸೌಂಡ್ಸ್ ಬಾಕ್ಸಗಳ ಮಾರಾಟಕ್ಕಾಗಿ ಸೇಲ್ಸ್ ಎಸ್‌ಎಕ್ಸುಟಿವ್ ನೇಮಿಸಿಕೊಳ್ಳುತ್ತಿದೆ. 25K ವರೆಗೆ ಸಂಬಳ + ಇನ್ಸೆಂಟಿವ್ + ಆನ್ ರೋಲ್ ಜಾಬ್. 9986067471."

Multiple Vacancy

ಬೇಕಾಗಿದ್ದಾರೆಬೆಂಗಳೂರಿನ ಕಂಪನಿಯೊಂದರಲ್ಲಿ ಟ್ರೈನರ್ಸ್, ಲೀಡರ್ಸ್, ಅಸಿಸ್ಟೆಂಟ್ ಮ್ಯಾನೇಜರ್, ಬ್ರಾಂಚ್ ಮ್ಯಾನೇಜರ್, ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30. ವಿದ್ಯಾರ್ಹತೆ SSLC ಮೇಲ್ಪಟ್ಟವರು. ಸಂಬಳ ಟ್ರೈನಿಂಗ್ ಸಮಯದಲ್ಲಿ10,000ದಿಂದ 12,000 ಟ್ರೈನಿಂಗ್ ಮುಗಿದ ನಂತರ25,000 ದಿಂದ 50,000ದ ವರೆಗೆ ನೀಡಲಾಗುವುದು.ಉಚಿತ ವಸತಿ, ಆಸಕ್ತಿಯುಳ್ಳವರು ಕರೆಮಾಡಿ 9110686982

Part-Time Jobs

ಕನ್ನಡ /ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ Ot. 17,800-68,000/- 8884666594/ 8884666597

COMPUTER OPERATOR for reputed Pharma company. Preferably Magadi,Tavarekere and surrounding areas.08023288965

ಪ್ರವಾಸ

Travel

24.5.2022 ರಿಂದ 6ದಿನ 2+2 ಎ/ಸಿ ಬಸ್ ರೂಮ್ ವಸತಿ ರಾಮೇಶ್ವರ- ತಿವೇಂದ್ರಂ- ಅಲಪಿಬೋಟಿಂಗ್ ಕನ್ಯಾಕುಮಾರಿ- ಗುರುವಾಯೂರು- ಕೋವಲಂ ಬೀಚ 26.5.2022 ರಿಂದ 4ದಿನ ಧರ್ಮಸ್ಥಳ- ಮುರಡೇಶ್ವರ- ಕೊಲ್ಲೂರು ಹೊರನಾಡು- ಸಿಂಗದೂರು- ಕುಕ್ಕೆಸುಬ್ರಮಣ್ಯ. 11.6.2022 ರಿಂದ 5ದಿನ ಶಿರಡಿ ಪಂಡರಾಪುರ, ಕೊಲ್ಲಾಪುರ ಕೂಡಲಸಂಗಮ, ಹಂಪೆ. 8.7.2022 ರಿಂದ 12ದಿನ ವಿಮಾನದಲ್ಲಿ ರೂ ವಸತಿ ಕೇದರನಾಥ್ ಗಂಗೋತ್ರಿ ಬದರಿನಾಥ್ ಯಮನೋತ್ರಿ ದೆಹಲಿ, ಹರಿದ್ವಾರ 22.7.2022 ರಿಂದ 9ದಿನ ವಿಮಾನದಲ್ಲಿ ರೂವಸತಿ ಕಾಶಿ ನೇಪಾಳ ಗಯಾ/ ಅಯೋಧ್ಯೆ/ ಅಲಹಾಬಾದ್/ ಗೊರಕಪುರ. 11.8.2022 ರಿಂದ 5ದಿನ ವಿಮಾನದಲ್ಲಿ ರೂವಸತಿ ಕಾಶಿ, ಅಯೋಧ್ಯೆ, ಗಯಾ ಬುದ್ದಗಯಾ ಅಲಹಾಬಾದ ಶ್ರೀಗುರುರಾಜ ಟ್ರಾವಲ್ಸ್ ಕೋಲಾರ್ : 9900124333, 8123099913, 9611082432,

05.06.2022 ಬದರಿನಾಥ್ ಕೇದಾರನಾಥ್, ಯಮುನೋತ್ರಿ, ಗಂಗೋತ್ರಿ 14.07.2022 ಅಮರನಾಥ್ ಅಮೃತಸರ್,ವೈಷ್ಣೊದೇವಿ 26.05.2022 ಕಾಶಿ,ಗಯಾ,ಅಯೋಧ್ಯ 7 ದಿನಗಳು. 01.09.2022 ಉತ್ತರ ಭಾರತ ಮುಕ್ತಿನಾಥ್ ನೇಪಾಳ ಇತ್ಯಾದಿ 11 ದಿನಗಳ ಪ್ರವಾಸಗಳಿಗಾಗಿ ಸಂಪರ್ಕಿಸಿ ಏಷ್ಯನ್ ಟ್ರಾವಲ್ ಏಜೆನ್ಸಿ 080-26574131 26573421 9964108171

ಸುವರ್ಣಯಾತ್ರ, ಕಾಶಿ ಪ್ರವಾಸ 7ದಿನಗಳು 1-6-2022. ಚಾರ್ಧಾಮ್ ಯಾತ್ರ 11-6-2022 13ದಿನಗಳು. ಗೋವ ಪ್ರವಾಸ 12-6-2022 5ದಿನಗಳು. ಅಮರ್ನಾಥ್ ಪ್ರವಾಸ 9.7.2022 9ದಿನಗಳು. 8970949434, 9019462508.

09.07.2022ರಿಂದ 12ದಿನಗಳು ರೂ.45,000/ವಿಮಾನ ಮತ್ತು A/C.ಬಸ್ಸಿನಲ್ಲಿ ಅಮಾರನಾಥ್, ವೈಷ್ಣೋದೇವಿ,ಕಾಶ್ಮೀರ,ದೆಹಲಿ, ವಾಘಾಬಾರ್ಡರ್..ವಿವರಗಳಿಗೆ ಏಷ್ಯನ್ ಟ್ರಾವೆಲ್ ಲೈನ್ಸ್.164/3 ಆರ್.ವಿ.ರಸ್ತೆ,ಬೆಂಗಳೂರು.04. ಮೊಬೈಲ್:8105657052

Classifieds
Book Your Classifieds Ads
Online Log in to
dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮೊದಲ ವಿಕೆಟ್‌ಗೆ ಅಜೇಯ ದ್ವಿಶತಕದ ಜೊತೆಯಾಟ; ರಾಹುಲ್ ಅರ್ಧಶತಕದ ಆಟ

ರಿಂಕು ಹೋರಾಟ ವ್ಯರ್ಥ; ಪ್ಲೇಆಫ್‌ಗೆ ಲಖನೌ

ನವಿ ಮುಂಬೈ (ಪಿಟಿಐ): ರಿಂಕು ಸಿಂಗ್ ಮತ್ತು ಸುನಿಲ್ ನಾರಾಯಣ್ ಅವರ ಕೆಚ್ಚೆದೆಯ ಹೋರಾಟ ಎವಿನ್ ಲೂಯಿಸ್ ಪಡೆದ ಮೋಹಕ ಕ್ಯಾಚ್‌ನಿಂದಾಗಿ ವ್ಯರ್ಥವಾಯಿತು. ಸೋಲಿನ ಆತಂಕದಿಂದ ಪಾರಾದ ಲಖನೌ ಸೂಪರ್‌ಜೈಂಟ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪ್ಲೇಆಫ್‌ಗೆ ಲಗ್ಗೆ ಇರಿಸಿತು.

ಡಿ.ವೈ. ಪಾಟೀಲ ಕ್ರೀಡಾಂಗಣ ದಲ್ಲಿ ಬುಧವಾರ ರಾತ್ರಿ ನಡೆದ ರೋಚಕ ಪಂದ್ಯದಲ್ಲಿ ಲಖನೌ 2 ರನ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಜಯ ಗಳಿಸಿ ಪ್ಲೇ ಆಫ್ ಹಂತಕ್ಕೇರಿತ ಎರಡನೇ ತಂಡ ಎನಿಸಿಕೊಂಡಿತು.

211 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೋಲ್ಕತ್ತ ಅರಂಭದಲ್ಲಿ ವಿಕೆಟ್ ಕಳೆದುಕೊಂಡಿತು. ಅದರೆ ಮಧ್ಯಮ ಕ್ರಮಾಂಕದ ನಿತೀಶ್ ರಾಣಾ, ಶ್ರೇಯಸ್ ಅಯ್ಯರ್ ಮತ್ತು ಸ್ಯಾಮ್ ಬಿಲಿಂಗ್ಸ್ ಅವರ ದಿಟ್ಟ ಹೋರಾಟದಿಂದಾಗಿ ಗೆಲುವಿನ ಆಸೆ ಚಿಗುರಿತು. ಅಂತಿಮ ಓವರ್‌ಗಳಲ್ಲಿ ರಿಂಕು ಸಿಂಗ್ ಮತ್ತು ಸುನಿಲ್ ನಾರಾಯಣ್ ತಂಡವನ್ನು ಜಯದ ಸನಿಹ ಕೊಂಡೊಯ್ದರು.

ಮಾರ್ಕಸ್ ಸ್ಟೋಯಿನಿಸ್ ಹಾಕಿದ ಕೊನೆಯ ಓವರ್ ನಾಟಕೀಯ ಬೆಳವಣಿಗೆಗೆ ಸಾಕ್ಷಿಯಾಯಿತು. ಈ ಓವರ್‌ನಲ್ಲಿ ಕೋಲ್ಕತ್ತ ಜಯಕ್ಕೆ 21 ರನ್‌ಗಳು ಬೇಕಾಗಿದ್ದವು. ರಿಂಕು ಸಿಂಗ್ ಮೊದಲ ಮೂರು ಎಸೆತಗಳಲ್ಲಿ ಬೌಂಡರಿ ಮತ್ತು ಎರಡು ಸಿಕ್ಸರ್ ಸಿಡಿಸಿದರು. 2 ಎಸೆತಗಳಲ್ಲಿ 3 ರನ್ ಬೇಕಾಗಿದ್ದಾಗ ರಿಂಕು ಸಿಂಗ್ ಅವರ ಕ್ಯಾಚ್ ಪಡೆದು ಲೂಯಿಸ್ ಪಂದ್ಯಕ್ಕೆ ತಿರುವು ನೀಡಿದರು. ಕೊನೆಯ ಎಸೆತದಲ್ಲಿ ಉಮೇಶ್ ಯಾದವ್ ಬೌಲ್ಡ್ ಆದರು.

ಕ್ವಿಂಟನ್ ಡಿಕಾಕ್, ರಾಹುಲ್ ಜೊತೆಯಾಟದ ರಂಗು: ಟಾಸ್ ಗೆದ್ದ ಲಖನೌ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಎಡಗೈ ಬ್ಯಾಟರ್ ಕ್ವಿಂಟನ್ ಡಿಕಾಕ್ 'ಜೀವದಾನ'ಗಳನ್ನು ಅಜೇಯ ಶತಕವನ್ನಾಗಿ ಪರಿವರ್ತಿಸಿದರು. ಕ್ವಿಂಟನ್ (ಔಟಾಗದೆ 140; 70ಎ, 4X10, 6X10) ಮತ್ತು ನಾಯಕ ಕೆ.ಎಲ್. ರಾಹುಲ್ (ಔಟಾಗದೆ 68; 51ಎ, 4X3, 6X4) ಮುರಿಯದ ಮೊದಲ ವಿಕೆಟ್ ಜೊತೆಯಾಟದ ಬಲದಿಂದ ಲಖನೌ 20 ಓವರ್‌ಗಳಲ್ಲಿ 210 ರನ್ ಗಳಿಸಿತು.

ಐಪಿಎಲ್‌ನಲ್ಲಿ ಇದೇ ಮೊದಲ ಬಾರಿ ವಿಕೆಟ್ ನಷ್ಟವಿಲ್ಲದೇ 20 ಓವರ್‌ಗಳನ್ನು ಆಡಿದ ಮೊದಲ ಜೋಡಿಯೆಂಬ ಹೆಗ್ಗಳಿಕೆಯೂ ಕ್ವಿಂಟನ್ ಮತ್ತು ರಾಹುಲ್ ಅವರದ್ದಾಯಿತು. ಮೂರನೇ ಅತಿದೊಡ್ಡ ಜೊತೆಯಾಟವಾಗಿಯೂ ಈ ಇನಿಂಗ್ಸ್ ದಾಖಲಾಯಿತು. ಕ್ವಿಂಟನ್ ವೈಯಕ್ತಿಕ ಶ್ರೇಷ್ಠ ಸ್ಕೋರ್ ದಾಖಲಿಸಿದ ಮೂರನೇ ಆಟಗಾರನಾದರು. ಕ್ರಿಸ್ ಗೇಲ್ ಅಜೇಯ 175 ಮತ್ತು ಬ್ರೆಂಡನ್ ಮೆಕ್ಲಮ್ ಅಜೇಯ 158 ಗಳಿಸಿದ್ದರು.

ಮೂರನೇ ಓವರ್‌ನಲ್ಲಿ ಉಮೇಶ್ ಯಾದವ್ ಎಸೆತವನ್ನು ಬೌಂಡರಿಗೆರೆ ದಾಟಿಸುವ ಪ್ರಯತ್ನ ಮಾಡಿದ್ದ ಡಿಕಾಕ್ ಅವರ ಕ್ಯಾಚ್ ಥರ್ಡ್‌ಮ್ಯಾನ್ ಫೀಲ್ಡರ್ ಅಭಿಷೇಕ್ ತೋಮರ್ ಕೈಚೆಲ್ಲಿದ್ದರು. ಇದರ ಲಾಭ ಪಡೆದ ಕ್ವಿಂಟನ್ 36 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅವರ ಬೀಸುಹೊಡೆತಗಳ ಆಟಕ್ಕೆ ತಡೆಯಾಗದಂತೆ ಎಚ್ಚರ ವಹಿಸಿದ ರಾಹುಲ್, ಉತ್ತಮ ಜೊತೆ ನೀಡಿದರು. ರಾಹುಲ್ ತಾವೆದುರಿಸಿದ 41ನೇ ಎಸೆತದಲ್ಲಿ ಅರ್ಧಶತಕದ ಗಡಿ ಮುಟ್ಟಿದರು.

ಇವರಿಬ್ಬರ ಹೊಂದಾಣಿಕೆಯ ಆಟದ ಮುಂದೆ ಕೋಲ್ಕತ್ತ ತಂಡದ ಬೌಲರ್‌ಗಳು ಬಸವಳಿದರು. ನಾಯಕ ಶ್ರೇಯಸ್ ಅಯ್ಯರ್ ತಂತ್ರಗಾರಿಕೆಗಳು ಫಲ ನೀಡಲಿಲ್ಲ. 15ನೇ ಓವರ್‌ನಲ್ಲಿ ಸುನಿಲ್ ನಾರಾಯಣ್ ಎಸೆತವನ್ನು ಕಟ್ ಮಾಡಿದ ಡಿಕಾಕ್ ಕ್ಯಾಚ್ ಪಡೆಯಲು ವಿಕೆಟ್‌ಕೀಪರ್ ಸ್ಯಾಮ್ ಬಿಲಿಂಗ್ಸ್ ಪ್ರಯತ್ನ ಸಾಕಾಗಲಿಲ್ಲ. ಆಟದ ವೇಗ ಹೆಚ್ಚಿಸಿದ ಡಿಕಾಕ್, 18ನೇ ಓವರ್‌ನಲ್ಲಿ ರಸೆಲ್ ಎಸೆತವನ್ನು ಬೌಂಡರಿಗೆ ಹೊಡೆದು ಶತಕ (59 ಎಸೆತಗಳು) ಪೂರೈಸಿದರು. ಐಪಿಎಲ್‌ನಲ್ಲಿ ಇದು ಅವರ ಎರಡನೇ ಶತಕ.

ಇದಾದ ನಂತರ 11ಎಸೆತಗಳಲ್ಲಿ 40 ರನ್‌ಗಳನ್ನು ಸೂರೆ ಮಾಡಿದರು. ಅದರಲ್ಲೂ ರಸೆಲ್ ಹಾಕಿದ ಕೊನೆಯ ಓವರ್‌ನಲ್ಲಿ ಸತತ ನಾಲ್ಕು ಬೌಂಡರಿ ಬಾರಿಸಿದರು. ಇದೇ ಓವರ್‌ನಲ್ಲಿ ಡಿಕಾಕ್ ಕ್ಯಾಚ್ ಅನ್ನು ನಿತೀಶ್ ರಾಣಾ ನೆಲಕ್ಕೆ ಚೆಲ್ಲಿದರು. ಕೋಲ್ಕತ್ತ ತಂಡದ ಎದುರು ಡಿಕಾಕ್ ಉತ್ತಮ ದಾಖಲೆ ಹೊಂದಿದ್ದಾರೆ. ಈತಂಡದೆದುರು ಆಡಿದ ಕಳೆದ ಐದು ಇನಿಂಗ್ಸ್‌ಗಳಲ್ಲಿ ದಕ್ಷಿಣ ಆಫ್ರಿಕಾದ ವಿಕೆಟ್‌ಕೀಪರ್ – ಬ್ಯಾಟರ್ ಡಿಕಾಕ್ ನಾಲ್ಕು ಅರ್ಧಶತಕಗಳನ್ನು ಗಳಿಸಿದ್ದರು.

ಕ್ವಿಂಟನ್ ಡಿಕಾಕ್ ಶತಕ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್ ವಿಕೆಟ್ ಕಳೆದುಕೊಳ್ಳದೆ 210 (20 ಓವರ್)
ಕ್ವಿಂಟನ್ ಔಟಾಗದೆ 140 (70ಎ, 4X10, 6X10), ರಾಹುಲ್ ಔಟಾಗದೆ 68 (51ಎ, 4X3, 6X4)
ಇತರೆ (ನೋಬಾಲ್ 1, ವೈಡ್ 1) 2
ಬೌಲಿಂಗ್: ಉಮೇಶ್ ಯಾದವ್ 4–0–34–0, ಟಿಮ್ ಸೌಥಿ 4–0–57–0, ಸುನಿಲ್ ನಾರಾಯಣ್ 4–0–27–0, ವರುಣ್ ಚಕ್ರವರ್ತಿ 4–0–38–0, ಆ್ಯಂಡ್ರೆ ರಸೆಲ್ 3–0–45–0, ನಿತೀಶ್ ರಾಣಾ 1–0–9–0

ಕೋಲ್ಕತ್ತ ನೈಟ್ ರೈಡರ್ಸ್ 8ಕ್ಕೆ 208 (20 ಓವರ್)
ವೆಂಕಟೇಶ್ ಸಿ ಕ್ವಿಂಟನ್ ಬಿ ಮೊಹಸಿನ್ 0 (4ಎ), ಅಭಿಜೀತ್ ಸಿ ರಾಹುಲ್ ಬಿ ಮೊಹಸಿನ್ 4 (8ಎ, 4X1), ನಿತೀಶ್ ಸಿ ಸ್ಟೋಯಿನಿಸ್ ಬಿ ಗೌತಮ್ 42 (22ಎ, 4X9), ಶ್ರೇಯಸ್ ಸಿ ಹೂಡಾ ಬಿ ಸ್ಟೋಯಿನಿಸ್ 50 (29ಎ, 4X4, 6X3), ಸ್ಯಾಮ್ ಸ್ಟಂಪ್ಡ್ ಕ್ವಿಂಟನ್ ಬಿ ರವಿ 36 (24ಎ, 4X2, 6X3), ರಸೆಲ್ ಸಿ ಹೂಡಾ ಬಿ ಮೊಹಸಿನ್ 5 (11ಎ), ರಿಂಕು ಸಿ ಲೂಯಿಸ್ ಬಿ ಸ್ಟೋಯಿನಿಸ್ 40 (15ಎ, 4X2, 6X4), ಸುನಿಲ್ ಔಟಾಗದೆ 21 (7ಎ, 6X3), ಉಮೇಶ್ ಬಿ ಸ್ಟೋಯಿನಿಸ್ 0 (1ಎ)
ಇತರೆ (ಲೆಗ್‌ಬೈ 3, ನೋಬಾಲ್ 1, ವೈಡ್ 6) 10
ವಿಕೆಟ್ ಪತನ: 1-0 (ವೆಂಕಟೇಶ್ ಅಯ್ಯರ್, 0.4), 2-9 (ಅಭಿಜೀತ್ ತೋಮರ್, 2.4), 3-65 (ನಿತೀಶ್ ರಾಣಾ, 7.1), 4-131 (ಶ್ರೇಯಸ್ ಅಯ್ಯರ್, 13.4), 5-142 (ಸ್ಯಾಮ್ ಬಿಲಿಂಗ್ಸ್, 15.4), 6-150 (ಆ್ಯಂಡ್ರೆ ರಸೆಲ್, 16.4), 7-208 (ರಿಂಕು ಸಿಂಗ್, 19.5), 8-208 (ಉಮೇಶ್ ಯಾದವ್, 19.6)
ಬೌಲಿಂಗ್: ಮೊಹಸಿನ್ ಖಾನ್ 4–0–20–3, ಜೇಸನ್ ಹೋಲ್ಡರ್ 4–0–45–0, ಆವೇಶ್ ಖಾನ್ 4–0–60–0, ಕೃಷ್ಣಪ್ಪ ಗೌತಮ್ 2–0–23–1, ರವಿ ಬಿಷ್ಣೋಯಿ 4–0–34–1, ಮಾರ್ಕಸ್ ಸ್ಟೋಯಿನಿಸ್ 2–0–23–3

ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್‌ಗೆ 2 ರನ್‌ಗಳ ಜಯ

ಐಪಿಎಲ್ ನಲ್ಲಿ ಗರಿಷ್ಠ ಜೊತೆಯಾಟಗಳು

ಮೊತ್ತ	ಜೋಡಿ	ತಂಡ	ಎದುರಾಳಿ	ಸ್ಥಳ	ವರ್ಷ
229	ಕೊಹ್ಲಿ–ಎಬಿಡಿ	ಬೆಂಗಳೂರು	ಗುಜರಾತ್	ಬೆಂಗಳೂರು	2016
215	ಕೊಹ್ಲಿ–ಎಬಿಡಿ	ಬೆಂಗಳೂರು	ಮುಂಬೈ	ವಾಂಖೆಡೆ ಕ್ರೀಡಾಂಗಣ	2015
210	ರಾಹುಲ್–ಡಿಕಾಕ್	ಲಖನೌ	ಕೋಲ್ಕತ್ತ	ನವಿಮುಂಬೈ	2022

ಜಯದ ಓಟ ಮುಂದುವರಿಸುವತ್ತ ಗುಜರಾತ್ ಚಿತ್ತ

ಗೆಲುವಿನ ಒತ್ತಡದಲ್ಲಿ ಆರ್‌ಸಿಬಿ

ಮುಂಬೈ(ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಬಾರಿ ಟೂರ್ನಿಯಿಂದ ಬೇಗನೇ ಹೊರಬೀಳುವ ಆತಂಕ ಎದುರಿಸುತ್ತಿದೆ.

ಗುರುವಾರ ನಡೆಯಲಿರುವ ಗುಜರಾತ್ ಟೈಟನ್ಸ್ ವಿರುದ್ಧದ ಪಂದ್ಯದಲ್ಲಿ ದೊಡ್ಡ ಅಂತರದಿಂದ ಜಯಿಸಲೇಬೇಕಾದ ಒತ್ತಡದಲ್ಲಿದೆ. ಅಷ್ಟೇ ಅಲ್ಲ ನಾಲ್ಕನೇ ಸ್ಥಾನದಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮುಂಬೈ ಇಂಡಿಯನ್ಸ್ ಎದುರು ಪರಾಭವಗೊಳ್ಳುವುದನ್ನು ಎದುರು ನೋಡಬೇಕು.

ಒಂದೊಮ್ಮೆ ಆರ್‌ಸಿಬಿ ಮತ್ತು ಡೆಲ್ಲಿ ತಮ್ಮ ಕೊನೆಯ ಪಂದ್ಯಗಳಲ್ಲಿ ಗೆದ್ದರೆ ಉಭಯ ತಂಡಗಳು ತಲಾ 16 ಅಂಕಗಳಿಸುತ್ತವೆ. ಆಗ ನೆಗೆಟಿವ್ ನೆಟ್ ರನ್‌ರೇಟ್ (–0.323) ಹೊಂದಿರುವ ಆರ್‌ಸಿಬಿಯು ಹೊರಬೀಳುವುದು ಖಚಿತ. ಬಹಳ ದೊಡ್ಡ ಅಂತರದ ಜಯಸಾಧಿಸಿ, ರನ್‌ರೇಟ್ ಕೂಡ ಉತ್ತಮಪಡಿಸಿಕೊಳ್ಳುವ ಅಗತ್ಯ ಆರ್‌ಸಿಬಿಗೆ ಇದೆ. ಎರಡೂ ತಂಡಗಳು ಸೋತರೂ ಆರ್‌ಸಿಬಿ ಹೊರಬೀಳುವುದು.

ಬೆಂಗಳೂರು ಮತ್ತು ಡೆಲ್ಲಿ ತಂಡ ಗಳು ಸೋತು, ಇತ್ತ 12 ಅಂಕ ಗಳಿಸಿ ರುವ ಪಂಜಾಬ್ ಉಳಿದಿರುವ ಪಂದ್ಯ ಗೆದ್ದರೆ 14 ಅಂಕ ಗಳಿಸಿದ ತಂಡಗಳ ನಡುವೆ ಪೈಪೋಟಿ ಬೀಳಲಿದೆ. ಆರ್‌ಸಿಬಿ ಬಿಟ್ಟರೆ ಉಳಿದ ಮೂರು ತಂಡಗಳು ಪಾಸಿಟಿವ್ ರನ್‌ರೇಟ್ ಹೊಂದಿವೆ.

ಇದೇ ಮೊದಲ ಬಾರಿ ಆಡುತ್ತಿರುವ ಗುಜರಾತ್ ಟೈಟನ್ಸ್ ತಂಡವು ಈಗಾಗಲೇ 20 ಅಂಕ ಗಳಿಸಿ ಪ್ಲೇ ಆಫ್ ಪ್ರವೇಶಿಸಿದೆ. ಹಾರ್ದಿಕ್ ಪಾಂಡ್ಯ ನಾಯಕತ್ವದ ಬಳಗವು ಗೆಲುವಿನ ಓಟ ಮುಂದುವರಿಸುವ ಛಲದಲ್ಲಿದ್ದು, ಅಗ್ರಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ. ಆರ್‌ಸಿಬಿಯಲ್ಲಿ ವಿರಾಟ್ ಕೊಹ್ಲಿ ಬಿಟ್ಟರೆ ಉಳಿದ ಬ್ಯಾಟ್ಸ್‌ಮನ್‌ಗಳು ಉತ್ತಮ ಲಯದಲ್ಲಿದ್ದಾರೆ. ಅದರಲ್ಲಿಯೂ ಫಫ್ ಡುಪ್ಲೆಸಿ, ದಿನೇಶ್ ಕಾರ್ತಿಕ್, ಶಾಬಾಜ್ ಅಹಮದ್ ಚೆನ್ನಾಗಿ ಆಡುತ್ತಿದ್ದಾರೆ. ಆದರೆ ಬೌಲಿಂಗ್‌ನಲ್ಲಿ ಮೊಹಮ್ಮದ್ ಸಿರಾಜ್ ಮತ್ತು ಜೋಶ್ ಹ್ಯಾಜಲ್‌ವುಡ್ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡದಿರುವುದು ಚಿಂತೆಯ ವಿಷಯವಾಗಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್.

ವಿರಾಟ್ ಕೊಹ್ಲಿ ಮತ್ತು ಫಫ್ ಡುಪ್ಲೆಸಿ

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್‌ಬಟ್ಲರ್	ರಾಜಸ್ಥಾನ	627
ರಾಹುಲ್	ಲಖನೌ	537
ಕ್ವಿಂಟನ್‌ಡಿಕಾಕ್	ಲಖನೌ	502

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	24
ಹಸರಂಗ	ಬೆಂಗಳೂರು	23
ಕಗಿಸೊ	ಪಂಜಾಬ್	22

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	13	10	3	0	0	20	0.391
ಲಖನೌ	14	9	5	0	0	18	0.251
ರಾಜಸ್ಥಾನ	13	8	5	0	0	16	0.304
ಡೆಲ್ಲಿ	13	7	6	0	0	14	0.255
ಬೆಂಗಳೂರು	13	7	6	0	0	14	-0.323
ಕೋಲ್ಕತ್ತ	14	6	8	0	0	12	0.146
ಪಂಜಾಬ್	13	6	7	0	0	12	-0.043
ಹೈದರಾಬಾದ್	13	6	7	0	0	12	-0.230
ಚೆನ್ನೈ	13	4	9	0	0	8	-0.206
ಮುಂಬೈ	13	3	10	0	0	6	-0.577

*ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಷೇರುಪೇಟೆ ವಹಿವಾಟು

109



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,259
ಇಂದಿನ ಅಂತ್ಯ	16,240
▼	19
ದಿನದ ಕನಿಷ್ಠ	16,399

ವಿನಿಮಯ ದರ

$ ಡಾಲರ್	77.61
£ ಪೌಂಡ್	96.29
€ ಯುರೊ	81.64
¥ ಯೆನ್ (100ಕ್ಕೆ)	60.42

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹480
12 ಮೊಟ್ಟೆಗೆ ₹65
ಮೈಸೂರು
100 ಮೊಟ್ಟೆಗೆ ₹485

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1625)
ಸೋಯಾ (ರಿಫೈನ್ಡ್)	₹1578 (1560)
ಸೂರ್ಯಕಾಂತಿ (ರಿಫೈನ್ಡ್)	₹1890 (1890)
ಪಾಮೋಲಿನ್	₹1565 (1560)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹800-1000
ಮಧ್ಯಮ	₹600-800
ಸಣ್ಣ	₹200-600

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-25000
2ನೇ ದರ್ಜೆ ₹10000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹169
ಆರ್‌ಎಸ್‌ಎಸ್-5 ₹163.50
ಗುಡ್ ಲಾಟ್ ₹158

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250
ಕಾಳು ಮೆಣಸು	- 490

ಅಡಿಕೆ
ಬಂಟ್ವಾಳ

ಕೋಕ	12500-25000
ಹೊಸತು	27500-45000
ಹಳತು	46000-54500

ಕಾರ್ಕಳ

ಹೊಸತು	40000-45000

ಕುಂದಾಪುರ

ಹೊಸಚಾಲಿ	43500-44500

ಶಿವಮೊಗ್ಗ

ಬೆಟ್ಟೆ	51399-53599
ಗೊರಬಲು	18009-37899
ರಾಶಿ	46009-50099
ಸರಕು	62119-80396

ಸಿದ್ದಾಪುರ

ಬಿಳಿಗೋಟು	24699-31699
ಚಾಲಿ	34509-39699
ಕೋಕ	21880-33199
ಕೆಂಪುಗೋಟು	26889-30689
ರಾಶಿ	47899-50099
ತಟ್ಟಿಬೆಟ್ಟೆ	38669-43209

ಶಿರಸಿ

ಬೆಟ್ಟೆ	36899-47999
ಬಿಳಿಗೋಟು	20299-33199
ಚಾಲಿ	30899-41219
ರಾಶಿ	39689-50088

ತುಮಕೂರು

ಇತರ	48800-49950

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16,200	16,200	16400	227.20 ಸೆಂಟ್ಸ್
ಎಸಿ	8900	8700	8900	
ಆರ್‌ಪಿ	9600	9900	10050	ಲಂಡನ್
ಆರ್‌ಸಿ	4600	4350	4520	2104ಡಾಲರ್ಸ್

ಹಣದುಬ್ಬರ: ಸೆಪ್ಟೆಂಬರ್‌ವರೆಗೂ ಹೆಚ್ಚಳ

ಮಂಬೈ (ಪಿಟಿಐ): ಚಿಲ್ಲರೆ ಹಣದುಬ್ಬರ ಪ್ರಮಾಣವು ಈ ವರ್ಷದ ಸೆಪ್ಟೆಂಬರ್‌ವರೆಗೂ ಹೆಚ್ಚುತ್ತಲೇ ಸಾಗಲಿದೆ ಎಂದು 'ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್' ಸಂಸ್ಥೆ ಹೇಳಿದೆ.

ಸೆಪ್ಟೆಂಬರ್ ನಂತರದಲ್ಲಿ ಹಣದುಬ್ಬರ ಪ್ರಮಾಣವು ನಿಧಾನವಾಗಿ ಕಡಿಮೆ ಆಗಲಿದೆ. ಹೀಗಿದ್ದರೂ, ಹಣದುಬ್ಬರ ಪ್ರಮಾಣವು 2022–23ನೇ ಸಾಲಿನ ಮೂರನೆಯ ತ್ರೈಮಾಸಿಕದವರೆಗೂ (ಈ ವರ್ಷದ ಡಿಸೆಂಬರ್‌ವರೆಗೆ) ಶೇಕಡ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿಯೇ ಉಳಿಯಲಿದೆ ಎಂದು ಸಂಸ್ಥೆಯು ಅಂದಾಜು ಮಾಡಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಆರ್‌ಬಿಐ, ರೆಪೊ ದರವನ್ನು ಇನ್ನಷ್ಟು ಹೆಚ್ಚಿಸಬಹುದು. ರೆಪೊ ದರ ಗರಿಷ್ಠ ಶೇ 1.25ರಷ್ಟು ಹೆಚ್ಚಾಬಹುದು ಎಂದು ಸಂಸ್ಥೆ ಹೇಳಿದೆ. ಜೂನ್‌ನಲ್ಲಿ ರೆಪೊ ದರವು ಶೇ 0.50ರಷ್ಟು, ಅಕ್ಟೋಬರ್‌ನಲ್ಲಿ ಶೇ 0.25ರಷ್ಟು ಜಾಸ್ತಿ ಆಗುವ ಸಾಧ್ಯತೆ ಇದೆ.

ಬ್ಯಾಂಕ್‌ಗಳು ಆರ್‌ಬಿಐನಲ್ಲಿ ಇರಿಸಬೇಕಿರುವ ಹಣದ ಪ್ರಮಾಣವನ್ನು (ನಗದು ಮೀಸಲು ಅನುಪಾತ) ಆರ್‌ಬಿಐ ಈ ಆರ್ಥಿಕ ಸಾಲಿನಲ್ಲಿ ಮತ್ತೆ ಶೇ 0.50ರಷ್ಟು ಜಾಸ್ತಿ ಮಾಡುವ ಸಂಭವ ಇದೆ ಎಂದು ಸಂಸ್ಥೆ ಅಂದಾಜಿಸಿದೆ. ಈ ತಿಂಗಳ ಆರಂಭದಲ್ಲಿ ನಗದು ಮೀಸಲು ಅನುಪಾತವನ್ನು ಜಾಸ್ತಿ ಮಾಡಿದ ಪರಿಣಾಮವಾಗಿ ಬ್ಯಾಂಕಿಂಗ್ ವ್ಯವಸ್ಥೆಯಿಂದ ಅಂದಾಜು ₹ 87 ಸಾವಿರ ಕೋಟಿ ಹೊರಹೋಗಿತ್ತು.

ಹಣದುಬ್ಬರ ಪ್ರಮಾಣವನ್ನು ನಿಯಂತ್ರಣದಲ್ಲಿ ಇರಿಸುವ ಉದ್ದೇಶದಿಂದ ಆರ್‌ಬಿಐ ನಗದು ಮೀಸಲು ಅನುಪಾತವನ್ನು ಹೆಚ್ಚಿಸುತ್ತದೆ. ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 7.8ರಷ್ಟು ಆಗಿದೆ. ಇದು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಗರಿಷ್ಠ ಮಿತಿಗಿಂತಲೂ ಜಾಸ್ತಿ.

ಚಿಲ್ಲರೆ ಹಣದುಬ್ಬರ ದರವನ್ನು ಶೇ 6ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಇರಿಸುವ ಹೊಣೆಯು ಆರ್‌ಬಿಐ ಮೇಲಿದೆ. ಇದು ಸತತ ಮೂರು ತ್ರೈಮಾಸಿಕಗಳಲ್ಲಿ (ಒಟ್ಟು ಒಂಭತ್ತು ತಿಂಗಳು) ಶೇ 6ಕ್ಕಿಂತ ಜಾಸ್ತಿ ಇದ್ದರೆ, ಆ ರೀತಿ ಆಗಿದ್ದು ಏಕೆ ಎಂಬ ವಿವರಣೆಯನ್ನು ಆರ್‌ಬಿಐ ಕೇಂದ್ರ ಸರ್ಕಾರಕ್ಕೆ ನೀಡಬೇಕಾಗುತ್ತದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ರೂಪಾಯಿ ಮೌಲ್ಯವು ಇನ್ನಷ್ಟು ಕುಸಿಯಲಿದೆ. ಅದು ಅಮೆರಿಕದ ಡಾಲರ್ ಎದುರು 78.19ರ ಮಟ್ಟದಲ್ಲಿ ಉಳಿಯಲಿದೆ ಎಂದು ಇಂಡಿಯಾ ರೇಟಿಂಗ್ಸ್ ಹೇಳಿದೆ.

ಟಿವಿಎಸ್ ಐಕ್ಯೂಬ್ ಸರಣಿಯ ಸ್ಕೂಟರ್ ಅನಾವರಣ

ಬೆಂಗಳೂರು: ಟಿವಿಎಸ್ ಮೋಟರ್ ಕಂಪನಿಯು ಐಕ್ಯೂಬ್ ಸರಣಿಯ ಹೊಸ ವಿದ್ಯುತ್ ಚಾಲಿತ (ಇ.ವಿ) ಸ್ಕೂಟರ್‌ಗಳನ್ನು ಬುಧವಾರ ಅನಾವರಣ ಮಾಡಿದೆ. ಮೂರು ಮಾದರಿಗಳಲ್ಲಿ ಈ ಸ್ಕೂಟರ್ ಲಭ್ಯವಾಗಲಿದೆ. ಒಂದು ಬಾರಿ ಚಾರ್ಜ್ ಮಾಡಿದರೆ ಗರಿಷ್ಠ 140 ಕಿ.ಮೀ. ಪ್ರಯಾಣಿಸಲು ಸಾಧ್ಯವಾಗುತ್ತದೆ ಎಂದು ಕಂಪನಿ ಹೇಳಿದೆ.

ಫಾಸ್ಟ್ ಚಾರ್ಜಿಂಗ್ ಸೌಲಭ್ಯ, ಕೊಂಡೊಯ್ಯಬಹುದಾದ ಚಾರ್ಜರ್, 32 ಲೀಟರ್ ಸಾಮರ್ಥ್ಯದ ಸ್ಟೋರೇಜ್ ಜಾಗವನ್ನು ಇದು ಹೊಂದಿದೆ.

'ಟಿವಿಎಸ್ ಕಂಪನಿಯು ಇ.ವಿ. ತಂತ್ರಜ್ಞಾನದಲ್ಲಿ ಹತ್ತು ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ಹೂಡಿಕೆ ಮಾಡುತ್ತಿದೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಸುದರ್ಶನ್ ವೇಣು ಹೇಳಿದ್ದಾರೆ.ಐಕ್ಯೂಬ್ ಎಸ್‌ಟಿ ಒಂದು ಬಾರಿ ಚಾರ್ಜ್ ಮಾಡಿದರೆ 140 ಕಿ.ಮೀ. ಸಾಗುತ್ತದೆ. ಐಕ್ಯೂಬ್ ಎಸ್ ಹಾಗೂ ಐಕ್ಯೂಬ್ 100 ಕಿ.ಮೀ ಸಾಗುತ್ತವೆ.

ಐಕ್ಯೂಬ್ ಮತ್ತು ಐಕ್ಯೂಬ್ ಎಸ್ ಮಾದರಿಗಳ ಆನ್‌ರೋಡ್ ಬೆಲೆಯು ₹ 98,564 ಹಾಗೂ ₹ 1.08 ಲಕ್ಷ (ದೆಹಲಿಯಲ್ಲಿ). ಈ ಎರಡು ಮಾದರಿಗಳ ಬುಕಿಂಗ್ ಆರಂಭವಾಗಿದೆ ಎಂದು ಕಂಪನಿ ಹೇಳಿದೆ. ಐಕ್ಯೂಬ್ ಎಸ್‌ಟಿ ಬೆಲೆಯನ್ನು ಕಂಪನಿ ತಿಳಿಸಿಲ್ಲ. ಇದರ ಪ್ರೀಬುಕಿಂಗ್ ಶುರುವಾಗಿದೆ.

ಮುಂಬೈ ಧಾರಣೆ

ಶೇಂಗಾ
18-5-2022

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10850-10900
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1635)
ಒಂದು ವಾರದ ಡೆಲಿವರಿ	1625 (1630
ಸೋಯಾ ಕಚ್ಚಾ	1545 (1550)
ಪಾಮ್ ವಾರದ ಡೆಲಿವರಿ	1563 (1558)
ಸೂರ್ಯಕಾಂತಿ ಎಣ್ಣೆ ಕಚ್ಚಾ	1820 (1830)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,150 (50,300)
ಬೆಳ್ಳಿ ಕೆ.ಜಿ 61,100 (61,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹222-483
ದ್ವಿತಳಿ (ಬಿ.ವಿ) ₹222-760

ಬೆಳವಣಿಗೆ ಅಂದಾಜು ತಗ್ಗಿಸಿದ ಎಸ್‌ಆ್ಯಂಡ್‌ಪಿ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಆರ್ಥಿಕ ಬೆಳವಣಿಗೆ ದರವು ಶೇಕಡ 7.3ರಷ್ಟು ಇರಲಿದೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ರೇಟಿಂಗ್ಸ್ ಸಂಸ್ಥೆ ಬುಧವಾರ ಹೇಳಿದೆ.

ಬೆಳವಣಿಗೆ ದರವು ಶೇ 7.8ರಷ್ಟು ಆಗಲಿದೆ ಎಂದು ಸಂಸ್ಥೆ ಈ ಮೊದಲು ಅಂದಾಜಿಸಿತ್ತು.

ಹಣದುಬ್ಬರ ಹೆಚ್ಚಾಗುತ್ತಿರುವುದು ಹಾಗೂ ರಷ್ಯಾ–ಉಕ್ರೇನ್ ಬಿಕ್ಕಟ್ಟು ನಿರೀಕ್ಷೆಗಿಂತ ಹೆಚ್ಚು ಅವಧಿಗೆ ನಡೆದಿರುವುದು ಅಂದಾಜು ತಗ್ಗಿಸಲು ಒಂದು ಕಾರಣ.

ಸಂಕ್ಷಿಪ್ತ ಸುದ್ದಿ

ಹೂಡಿಕೆ ಹಿಂತೆಗೆತ: ಆಡಳಿತ ಮಂಡಳಿಗೆ ಅಧಿಕಾರ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕಂಪನಿಗಳು ತಮ್ಮ ಅಂಗಸಂಸ್ಥೆಗಳನ್ನು ಮುಚ್ಚುವ ಅಥವಾ ಅವುಗಳಲ್ಲಿನ ಬಂಡವಾಳವನ್ನು ಹಿಂದಕ್ಕೆ ಪಡೆಯುವುದಕ್ಕೆ ಸಂಬಂಧಿಸಿದ ತೀರ್ಮಾನವನ್ನು ಆಡಳಿತ ಮಂಡಳಿಗಳ ಮೂಲಕ ಕೈಗೊಳ್ಳಬಹುದು ಎಂದು ಕೇಂದ್ರ ಸಚಿವ ಸಂಪುಟ ಬುಧವಾರ ಹೇಳಿದೆ.

ಈಗಿನ ನಿಯಮಗಳ ಅನ್ವಯ, ಅಂಗಸಂಸ್ಥೆಗಳನ್ನು ಮುಚ್ಚಲು ಅಥವಾ ಅವುಗಳಲ್ಲಿನ ಬಂಡವಾಳ ಹಿಂತೆಗೆದುಕೊಳ್ಳಲು ಸಚಿವ ಸಂಪುಟದ ಅನುಮೋದನೆ ಬೇಕಿದೆ.

ಹೂಡಿಕೆ ಹಿಂತೆಗೆತ ಹಾಗೂ ಕಂಪನಿಯನ್ನು ಮುಚ್ಚುವ ಪ್ರಕ್ರಿಯೆಯು ಸ್ಪರ್ಧಾತ್ಮಕ ಬಿಡ್ಡಿಂಗ್ ಮತ್ತು ಕೆಲವು ಮಾರ್ಗಸೂಚಿಗಳನ್ನು ಆಧರಿಸಿ ನಡೆಯಬೇಕು. ಮಾರ್ಗಸೂಚಿಗಳನ್ನು ಇನ್ನಷ್ಟೇ ಹೊರಡಿಸಬೇಕಿದೆ.

'ಹೆಚ್ಚುತ್ತಿದೆ ಎಸ್‌ಐಪಿ ಜನಪ್ರಿಯತೆ'

ನವದೆಹಲಿ (ಪಿಟಿಐ): ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ತೊಡಗಿಸುವ ಪ್ರಮಾಣವು ಒಂದು ವರ್ಷದಲ್ಲಿ ಶೇಕಡ 30ರಷ್ಟು ಜಾಸ್ತಿಯಾಗಿದೆ.

2020–21ರಲ್ಲಿ ಎಸ್‌ಐಪಿ ಮೂಲಕ ಒಟ್ಟು ₹ 96 ಸಾವಿರ ಕೋಟಿ ಹೂಡಿಕೆ ಆಗಿತ್ತು. 2021–22ರಲ್ಲಿ ಇದು ₹ 1.24 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ. 'ದೇಶದ ಸಣ್ಣ ಹೂಡಿಕೆದಾರರು ಸಂಪತ್ತು ಸೃಷ್ಟಿಗೆ ಎಸ್‌ಐಪಿ ಬಳಕೆ ಮಾಡಿಕೊಳ್ಳುವುದು ಜನಪ್ರಿಯವಾಗುತ್ತಿದೆ ಎಂಬುದನ್ನು ಇದು ಹೇಳುತ್ತಿದೆ' ಎಂದು ಎಎಂಎಫ್‌ಐ ಅಭಿಪ್ರಾಯಪಟ್ಟಿದೆ.

ರೂಪಾಯಿ ಮೌಲ್ಯ ಮತ್ತಷ್ಟು ಕುಸಿತ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಮತ್ತಷ್ಟು ಕುಸಿದಿರುವ ರೂಪಾಯಿ ಮೌಲ್ಯ, ಬುಧವಾರ 77.61ಕ್ಕೆ ತಲುಪಿದೆ. ಇದು ಈವರೆಗಿನ ಅತ್ಯಂತ ಕೆಳಗಿನ ಮಟ್ಟ.

ವಿದೇಶಿ ಬಂಡವಾಳದ ಹೊರಹರಿವು ನಿಂತಿಲ್ಲದಿರುವುದು, ಹಣದುಬ್ಬರ ನಿಯಂತ್ರಿಸಲು ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರವನ್ನು ದೊಡ್ಡ ಮಟ್ಟದಲ್ಲಿ ಹೆಚ್ಚಿಸಬಹುದು ಎಂಬ ಆತಂಕ ಈ ಕುಸಿತಕ್ಕೆ ಒಂದು ಕಾರಣ.

ಡಾಲರ್ ಮತ್ತಷ್ಟು ಬಲವರ್ಧಿಸಿಕೊಂಡಿರುವುದು ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಾಗಿರುವುದು ಕೂಡ ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾದವು. ಬುಧವಾರ ರೂಪಾಯಿ ಮೌಲ್ಯ 17 ಪೈಸೆ ತಗ್ಗಿದೆ.

ವಿದೇಶಿ ಹೂಡಿಕೆದಾರರು ದೇಶದ ಬಂಡವಾಳ ಮಾರುಕಟ್ಟೆಗಳಲ್ಲಿ ಬುಧವಾರ ₹ 1,254 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವು 109 ಅಂಶ ಇಳಿಕೆ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 19 ಅಂಶ ಕೆಳಗಿಳಿದಿದೆ.

ಮರಿಯುಪೊಲ್‌ನ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದಲ್ಲಿದ್ದ ಉಕ್ರೇನ್ ಯೋಧರು ತನ್ನ ಸೇನೆಗೆ ಶರಣಾಗಿದ್ದಾರೆ ಎಂದು ಬಿಂಬಿಸುವ ವಿಡಿಯೊವನ್ನು ರಷ್ಯಾದ ಭದ್ರತಾ ಸಚಿವಾಲಯ ಬಿಡುಗಡೆ ಮಾಡಿದ್ದು, ಅದರ ಸ್ಕ್ರೀನ್ ಶಾಟ್‌ನಿಂದ ತೆಗೆದ ಚಿತ್ರ

'ಉಕ್ರೇನ್ ಸೈನಿಕರ ಶರಣಾಗತಿ'

ಕೀವ್(ಎಪಿ): ಉಕ್ರೇನ್‌ನ ಮರಿಯುಪೊಲ್ ನಗರದಲ್ಲಿ ರಷ್ಯಾ ವಶಕ್ಕೆ ಪಡೆದಿದ್ದ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದಲ್ಲಿ ಅಡಗಿಕೊಂಡಿದ್ದ ಉಕ್ರೇನ್‌ನ ಸುಮಾರು 1000 ಸೈನಿಕರು ಶರಣಾಗಿದ್ದಾರೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ತಿಳಿಸಿದೆ.

ಈ ಬಗ್ಗೆ ಬುಧವಾರ ಮಾತನಾಡಿದ ರಷ್ಯಾದ ರಕ್ಷಣಾ ಸಚಿವಾಲಯದ ವಕ್ತಾರರು, 'ಕಳೆದ 24 ಗಂಟೆಯಲ್ಲಿ ಅಜೋವ್‌ಸ್ಟಾಲ್ ಉಕ್ಕು ಸ್ಥಾವರದಲ್ಲಿ ಆಶ್ರಯ ಪಡೆದಿದ್ದ 694 ಉಕ್ರೇನ್ ಯೋಧರು ಶರಣಾಗಿದ್ದಾರೆ. ಇದರೊಂದಿಗೆ ಕಳೆದ 2 ದಿನಗಳಲ್ಲಿ 959 ಉಕ್ರೇನ್ ಯೋಧರು ಶರಣಾದಂತಾಗಿದೆ' ಎಂದು ಹೇಳಿದ್ದಾರೆ. ಆದರೆ, ರಷ್ಯಾದ ಈ ಹೇಳಿಕೆಯನ್ನು ಉಕ್ರೇನ್ ಖಚಿತಪಡಿಸಿಲ್ಲ.

ಇದು ಐತಿಹಾಸಿಕ ಕ್ಷಣ: ಸ್ವೀಡನ್ ಮತ್ತು ಫಿನ್ಲೆಂಡ್ ದೇಶಗಳು ನ್ಯಾಟೊಗೆ ಸೇರ್ಪಡೆಯಾಗುತ್ತಿರುವುದನ್ನು ನ್ಯಾಟೊದ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟಾಲ್ಟೆನ್‌ಬರ್ಗ್ ಅವರು, ಐತಿಹಾಸಿಕ ಬೆಳವಣಿಗೆ ಎಂದು ಪ್ರತಿಪಾದಿಸಿದ್ದಾರೆ.

'ಫಿನ್ಲೆಂಡ್ ಮತ್ತು ಸ್ವೀಡನ್ ದೇಶಗಳ ನ್ಯಾಟೊ ಸೇರ್ಪಡೆಯ ಕೋರಿಕೆಯನ್ನು ಸ್ವಾಗತಿಸುತ್ತೇನೆ. ನೀವು ನಮ್ಮ ಆತ್ಮೀಯ ಪಾಲುದಾರರು. ನ್ಯಾಟೊದಲ್ಲಿ ನಿಮ್ಮ ಸದಸ್ಯತ್ವದ ಮೂಲಕ ನಮ್ಮ ಭದ್ರತಾ ಹಂಚಿಕೆಯು ಹೆಚ್ಚಾಗಲಿದೆ. ನಾವೆಲ್ಲರೂ ಒಂದಾಗಿ ನಿಲ್ಲಬೇಕೆಂಬುದನ್ನು ಒಪ್ಪಿಕೊಂಡಿದ್ದೇವೆ. ಇದು ಐತಿಹಾಸಿಕ ಕ್ಷಣ' ಎಂದು ಸ್ಟಾಲ್ಟೆನ್‌ಬರ್ಗ್ ಅವರು ತಿಳಿಸಿದರು.

ಕೊರಿಯಾದಲ್ಲಿ ಕೋವಿಡ್ ಮತ್ತಷ್ಟು ಹೆಚ್ಚಳ

ಸೋಲ್(ಎಪಿ): ಉತ್ತರ ಕೊರಿಯಾದಲ್ಲಿ ದಿನೇ ದಿನೇ ಜ್ವರದ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಕೋವಿಡ್ ಸೋಂಕು ವ್ಯಾಪಕವಾಗಿ ಹರಡಿರುವ ಶಂಕೆ ವ್ಯಕ್ತವಾಗಿದೆ. ಬುಧವಾರ ಹೊಸದಾಗಿ 2,32,880 ಜನರಲ್ಲಿ ಜ್ವರ ಕಾಣಿಸಿಕೊಂಡಿದ್ದು ಆರು ಮಂದಿ ಮೃತಪಟ್ಟಿದ್ದಾರೆ.

ದೇಶದಾದ್ಯಂತ ಸೋಂಕು ಉಲ್ಬಣಿಸುತ್ತಿರುವುದಕ್ಕೆ ಅಧಿಕಾರಿಗಳ ಅಪ್ರಬುದ್ಧತೆ ಮತ್ತು ನಿರ್ಲಕ್ಷ್ಯವೇ ಕಾರಣ ಎಂದು ದೂರಿರುವ ದೇಶದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್, ಅಧಿಕಾರಿಗಳನ್ನು ತರಾಟೆಗೆ ತೆಗದುಕೊಂಡಿದ್ದಾರೆ.

ಇಲ್ಲಿಯವರೆಗೆ 17 ಲಕ್ಷ ಮಂದಿಗೆ ಸೋಂಕು ತಗುಲಿದ್ದು, 62 ಜನರು ಮೃತಪಟ್ಟಿದ್ದಾರೆ. ಲಕ್ಷಾಂತರ ಮಂದಿ ಚೇತರಿಸಿಕೊಂಡಿದ್ದಾರೆ. 6,91,170 ಜನರು ಚಿಕಿತ್ಸೆಗಾಗಿ ಪ್ರತ್ಯೇಕವಾಗಿದ್ದಾರೆ ಎಂದು ದೇಶದ ವೈರಾಣು ನಿರೋಧಕ ಕೇಂದ್ರಗಳ ಪ್ರಧಾನ ಕಚೇರಿ ಹೇಳಿದೆ.

ಉತ್ತರ ಕೊರಿಯಾದಲ್ಲಿ ಕಾಣಿಸಿಕೊಳ್ಳುತ್ತಿರುವ ಜ್ವರ ಪ್ರಕರಣಗಳು ಕೋವಿಡ್ ಸೋಂಕು ಆಗಿರಬಹುದು ಎಂದು ಇತರೆ ದೇಶಗಳ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಕಳೆದ ವಾರ ಓಮೈಕ್ರಾನ್ ಸೋಂಕು ಕಾಣಿಸಿಕೊಂಡ ಬಳಿಕ ಕೆಲವೇ ಕೆಲವು ಪ್ರಕರಣಗಳನ್ನು ಮಾತ್ರ ಆ ದೇಶ ದೃಢಪಡಿಸಿದೆ.



ಸಂಕ್ಷಿಪ್ತ ಸುದ್ದಿ

ಏಷ್ಯನ್ ಪ್ಯಾರಾ ಗೇಮ್ಸ್ ಮುಂದೂಡಿಕೆ

ಬೀಜಿಂಗ್ (ಪಿಟಿಐ): ಅಕ್ಟೋಬರ್‌ನಲ್ಲಿ ಚೀನಾದ ಹ್ಯಾಂಗ್‌ಜೂನಲ್ಲಿ ನಡೆಯಲಿದ್ದ ಏಷ್ಯಾ ಪ್ಯಾರಾ ಕ್ರೀಡಾಕೂಟವನ್ನು ಮುಂದೂಡಲಾಗಿದೆ.

ಚೀನಾದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅಲ್ಲಿನ ಸರ್ಕಾರ ಈ ನಿರ್ಧಾರ ಮಾಡಿದೆ. ಅ.9ರಿಂದ 15ರವರೆಗೆ ಕೂಟ ನಡೆಯಬೇಕಿತ್ತು. ಮುಂದಿನ ವರ್ಷದವರೆಗೆ ಮುಂದೂಡಲಾಗಿದೆ. ಸೆಪ್ಟೆಂಬರ್‌ನಲ್ಲಿ ಇಲ್ಲಿಯೇ ನಡೆಯಬೇಕಿದ್ದ ಏಷ್ಯನ್ ಕ್ರೀಡಾಕೂಟವನ್ನೂ ಮುಂದೂಡಲಾಗಿತ್ತು.

ವಿವರಣೆ ಕೇಳಿ ಇದ್ರಿಸಾಗೆ ನೋಟಿಸ್

ಇದ್ರಿಸಾ ಗಾನಾ

ಪ್ಯಾರಿಸ್ (ಎಎಫ್‌ಪಿ): ಸಲಿಂಗ, ದ್ವಿಲಿಂಗ ಮತ್ತು ಲಿಂಗಪರಿವರ್ತಿತರ ಪರವಾಗಿ ನಡೆಯುತ್ತಿರುವ ಎಲ್‌ಜಿಬಿಟಿಕ್ಯೂ+ ಆಂದೋಲನಕ್ಕೆ ಕೈಜೋಡಿಸಲು ಹಿಂದೇಟು ಹಾಕಿರುವ ಪ್ಯಾರಿಸ್ ಸೇಂಟ್ ಜರ್ಮನ್ ತಂಡದ ಮಿಡ್‌ಫೀಲ್ಡರ್ ಇದ್ರಿಸಾ ಗಾನಾ ಗುಯೆ ಅವರಿಗೆ ಕಾರಣ ಕೇಳಿ ಫ್ರೆಂಚ್ ಫುಟ್‌ಬಾಲ್ ಫೆಡರೇಷನ್ ನೋಟಿಸ್ ಜಾರಿ ಮಾಡಿದೆ.

ಕಳೆದ ಶನಿವಾರ ನಡೆದ ಲೀಗ್‌–1 ಟೂರ್ನಿಯಲ್ಲಿ ಮಾಂಟ್‌ಪೆಲಿಯರ್ ತಂಡದ ಎದುರಿನ ಪಂದ್ಯದಲ್ಲಿ ಆಂದೋಲನಕ್ಕೆ ಬೆಂಬಲ ಸೂಚಿಸುವ ಸಲುವಾಗಿ ರೇನ್‌ಬೋ ಜೆರ್ಸಿ ತೊಟ್ಟು ಆಟಗಾರರು ಕಣಕ್ಕೆ ಇಳಿದಿದ್ದರು. ಸೆನೆಗಲ್‌ನ ಇದ್ರಿಸಾ ಈ ಪಂದ್ಯದಲ್ಲಿ ಆಡಲು ನಿರಾಕರಿಸಿದ್ದರು.

ಅಮೆರಿಕದಲ್ಲಿ ಸಮಾನ ಸಂಭಾವನೆ

ವಾಷಿಂಗ್ಟನ್ (ಎಎಫ್‌ಪಿ): ಅಮೆರಿಕ ಫುಟ್‌ಬಾಲ್‌ನ ಪುರುಷ ಮತ್ತು ಮಹಿಳೆಯರ ತಂಡಗಳಿಗೆ ಇನ್ನು ಮುಂದೆ ಸಮಾನ ಸಂಭಾವನೆ ಸಿಗಲಿದೆ. ಈ ಕುರಿತು ಮಾಡಿರುವ ಒಪ್ಪಂದದ ವಿವರಗಳನ್ನು ಅಮೆರಿಕ ಸಾಕರ್ ಫೆಡರೇಷನ್ ಬುಧವಾರ ಪ್ರಕಟಿಸಿದ್ದು ಇದು ಐತಿಹಾಸಿಕ ಹೆಜ್ಜೆ ಎಂದು ಅಭಿಪ್ರಾಯಪಟ್ಟಿದೆ.

ಅಮೆರಿಕದ ಮಹಿಳಾ ತಂಡದವರು 'ಸಮಾನತೆ'ಗಾಗಿ ವರ್ಷಗಳಿಂದ ಬೇಡಿಕೆ ಇಡುತ್ತ ಬಂದಿದ್ದಾರೆ. ಇದಕ್ಕೆ ಸ್ಪಂದಿಸಿ ಈ ನಿರ್ಧಾರ ಕೈಗೊಳ್ಳಲಾಗಿದ್ದು ಸಮಾನ ಸಂಭಾವನೆ ನೀಡುವ ವಿಶ್ವದ ಮೊದಲ ಫೆಡರೇಷನ್ ಇದಾಗಿದೆ ಎಂದು ತಿಳಿಸಲಾಗಿದೆ.

ಗುರಿಂದರ್ ಸಿಂಗ್– ಟ್ವಿಟರ್ ಚಿತ್ರ

ಭಾರತ ತಂಡಕ್ಕೆ ಗುರಿಂದರ್ ನಾಯಕ

ನವದೆಹಲಿ (ಪಿಟಿಐ): ಸ್ವಿಟ್ಜರ್ಲೆಂಡ್‌ನ ಲಾಸನ್‌ನಲ್ಲಿ ಮುಂದಿನ ತಿಂಗಳು ನಡೆಯಲಿರುವ ಎಫ್‌ಐಎಚ್ ಹಾಕಿ ಫೈವ್ ಸೈಡ್ ಟೂರ್ನಿಗೆ ಒಂಬತ್ತು ಆಟಗಾರರ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಗುರಿಂದರ್ ಸಿಂಗ್ ಅವರು ತಂಡದ ಸಾರಥ್ಯ ವಹಿಸಲಿದ್ದು, ಸುಮಿತ್ ಉಪನಾಯಕರಾಗಿ ಆಯ್ಕೆಯಾಗಿದ್ದಾರೆ.

ಜೂನ್ ಐದು ಮತ್ತು ಆರರಂದು ಇದೇ ಮೊದಲ ಬಾರಿಗೆ ನಡೆಯಲಿರುವ ಟೂರ್ನಿಯಲ್ಲಿ ಭಾರತ ತಂಡವು ಮಲೇಷ್ಯಾ, ಪಾಕಿಸ್ತಾನ, ಪೋಲೆಂಡ್ ಮತ್ತು ಆತಿಥೇಯ ತಂಡಗಳನ್ನು ಎದುರಿಸಲಿದೆ. ಪ್ರತಿ ತಂಡದಲ್ಲಿ ಒಬ್ಬ ಗೋಲ್‌ಕೀಪರ್ ಮತ್ತು ನಾಲ್ವರು ಫೀಲ್ಡ್ ಆಟಗಾರರು ಇರಲಿದ್ದಾರೆ.

'ಎಫ್‌ಐಎಚ್ ಹಾಕಿ ಫೈವ್ ಸೈಡ್ ಟೂರ್ನಿಯು ಭಿನ್ನ ಮಾದರಿಯದ್ದಾಗಿದ್ದು, ನಮ್ಮ ಆಟಗಾರರಿಗೆ ಹೊಸ ಅವಕಾಶವಾಗಿದೆ. ವೇಗ ಮತ್ತು ಮನರಂಜನಾ ಮಾದರಿಯ ಈ ಗೇಮ್ ಆಡಲು ನಾವು ಉತ್ಸುಕರಾಗಿದ್ದೇವೆ' ಎಂದು ಭಾರತ ತಂಡದ ಮುಖ್ಯ ಕೋಚ್ ಗ್ರಹಾಂ ರೀಡ್ ಹೇಳಿದ್ದಾರೆ.

ತಂಡ ಇಂತಿದೆ: ಗುರಿಂದರ್ ಸಿಂಗ್ (ನಾಯಕ), ಸುಮಿತ್ (ಉಪನಾಯಕ), ಪವನ್, ಸಂಜಯ್, ಮನದೀಪ್ ಮೋರ್, ರವಿಚಂದ್ರ ಸಿಂಗ್, ದಿಲ್‌ಪ್ರೀತ್ ಸಿಂಗ್, ಮೊಹಮ್ಮದ್ ರಹೀಲ್ ಮೌಸೀನ್, ಗುರುಸಾಹಿಬ್‌ಜಿತ್ ಸಿಂಗ್.

ಕಾಯ್ದಿರಿಸಿದ ಆಟಗಾರರು: ಪ್ರಶಾಂತ್ ಕುಮಾರ್ ಚೌಹಾಣ್, ಬಾಬಿ ಸಿಂಗ್ ಧಾಮಿ, ಸುದೀಪ್ ಚಿರ್ಮಾಕೊ.

ಫೈನಲ್‌ಗೆ ಭಾರತದ ಬಾಕ್ಸರ್: ಮನೀಷಾ. ಪರ್ವೀನ್‌ಗೆ ಕಂಚಿನ ಪದಕ

ಚಿನ್ನದ ಪದಕದತ್ತ ನಿಖತ್

ನವದೆಹಲಿ (ಪಿಟಿಐ): ಎದುರಾಳಿಯನ್ನು ಸುಲಭವಾಗಿ ಮಣಿಸಿದ ಭಾರತದ ನಿಖತ್ ಜರೀನ್ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಫೈನಲ್ ತಲುಪಿದ್ದಾರೆ.
ಮನೀಷಾ ಮೌನ್ ಮತ್ತು ಪರ್ವೀನ್ ಹೂಡಾ ಸೆಮಿಫೈನಲ್‌ನಲ್ಲಿ ಸೋತು ಕಂಚಿನ ಪದಕ ಗಳಿಸಿದರು.

ಟರ್ಕಿಯ ಇಸ್ತಾಂಬುಲ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 52 ಕೆಜಿ ವಿಭಾಗದ ಸೆಮಿಫೈನಲ್ ಬೌಟ್‌ನಲ್ಲಿ ಬುಧವಾರ ನಿಖತ್ 5–0ಯಿಂದ ಬ್ರೆಜಿಲ್‌ನ ಕ್ಯಾರೋಲಿನ್ ಡಿ ಅಲ್ಮೇಡಾ ಅವರನ್ನು ಮಣಿಸಿದರು.

ವಿಶ್ವ ಜೂನಿಯರ್ ವಿಭಾಗದ ಮಾಜಿ ಚಾಂಪಿಯನ್ ಆಗಿರುವ ನಿಖತ್, ಇದೇ ಮೊದಲ ಬಾರಿ ಸೀನಿಯರ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿದ್ದು, ಈ ಬೌಟ್‌ನಲ್ಲಿ ಅತ್ಯಂತ ತಾಳ್ಮೆಯಿಂದ ಸೆಣಸಿದರು. ಕ್ಯಾರೋಲಿನ್ ಎದುರು ಪಾರಮ್ಯ ಮೆರೆದರು.

ಫೈನಲ್ ತಲುಪಿದ ನಿಖತ್ ಜರೀನ್ ಸಂಭ್ರಮ– ಸಾಯ್ ಮೀಡಿಯಾ ಟ್ವಿಟರ್

ಹೈದರಾಬಾದ್‌ನ ನಿಖತ್ ಇಲ್ಲಿ ಪದಕ ಜಯಸಿದರೆ ಎಲೀಟ್ ಬಾಕ್ಸರ್‌ಗಳ ಸಾಲಿಗೆ ಸೇರಲಿದ್ದಾರೆ. ಇದುವರೆಗೆ ಆರು ಬಾರಿಯ ಚಾಂಪಿಯನ್ ಮೇರಿ ಕೋಮ್, ಸರಿತಾದೇವಿ, ಜೆನ್ನಿ ಆರ್. ಎಲ್. ಮತ್ತು ಲೇಖಾ ಸಿ. ಮಾತ್ರ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದ್ದಾರೆ.

57 ಕೆಜಿ ವಿಭಾಗದ ನಾಲ್ಕರ ಘಟ್ಟದ ಬೌಟ್‌ನಲ್ಲಿ ಮನೀಷಾ 0–5ರಿಂದ ಇಟಲಿಯ ಇರ್ಮಾ ಟೆಸ್ಟಾ ಎದುರು ಎಡವಿದರು.

ಟೆಸ್ಟಾ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದರು.

ಪರ್ವೀನ್ ಹೂಡಾ 63 ಕೆಜಿ ವಿಭಾಗದ ಸೆಮಿಫೈನಲ್ ಬೌಟ್‌ನಲ್ಲಿ 1–4ರಿಂದ ಯೂರೋಪಿಯನ್ ಚಾಂಪಿಯನ್‌ಷಿಪ್ ಕಂಚು ವಿಜೇತೆ, ಐರ್ಲೆಂಡ್‌ನ ಆ್ಯಮಿ ಬ್ರಾಡ್‌ಹಸ್ಟ್ ಎದುರು ಸೋತರು.

2006ರ ಆವೃತ್ತಿಯಲ್ಲಿ ಭಾರತ ನಾಲ್ಕು ಚಿನ್ನ, ಒಂದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು (ಒಟ್ಟು ಎಂಟು) ಜಯಿಸಿದ್ದು, ಇದುವರೆಗಿನ ಶ್ರೇಷ್ಠ ಸಾಧನೆಯಾಗಿದೆ.

ರಾಜ್ಯ ಮಿನಿ ಒಲಿಂಪಿಕ್ಸ್: ಸೈಕ್ಲಿಂಗ್‌ನಲ್ಲಿ ಬಾಗಲಕೋಟೆ

ಧೀನಿಧಿ ಮುಡಿಗೆ 3 ಚಿನ್ನ

ಪ್ರಜಾವಾಣಿ ವಾರ್ತೆ

ವೇಟ್‌ಲಿಫ್ಟಿಂಗ್‌ನಲ್ಲಿ ಚಿನ್ನ ಗೆದ್ದ ಮಾಬೂಸಾಬ ಕಳ್ಳಿಮನಿ– ಪ್ರಜಾವಾಣಿ ಚಿತ್ರ

ಬೆಂಗಳೂರು: ಈಜುಕೊಳದಲ್ಲಿ ಮಿನುಗಿದ ನಗರದ ಧೀನಿಧಿ ದೇಸಿಂಗು ಬುಧವಾರ ಮೂರು ಚಿನ್ನದ ಪದಕ ಗಳಿಸಿದರು. ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) 14 ವರ್ಷದೊಳಗಿನವರಿಗಾಗಿ ಆಯೋಜಿಸಿರುವ ಮಿನಿ ಒಲಿಂಪಿಕ್ ಕೂಟದ ಬಾಲಕಿಯರ 50 ಮೀಟರ್ಸ್ ಫ್ರೀಸ್ಟೈಲ್, 200 ಮೀ. ಬ್ಯಾಕ್‌ಸ್ಟ್ರೋಕ್ ಮತ್ತು 50 ಮೀ. ಬಟರ್‌ಫ್ಲೈ ವಿಭಾಗಗಳಲ್ಲಿ ಅವರಿಗೆ ಚಿನ್ನ ಒಲಿಯಿತು.

ಸೈಕ್ಲಿಂಗ್: ಬಾಗಲಕೋಟೆ ಚಾಂಪಿಯನ್: ಮಿನಿ ಒಲಿಂಪಿಕ್ಸ್‌ನಲ್ಲಿ ಇದೇ ಮೊದಲ ಬಾರಿ ಸೇರಿಸಿರುವ ಸೈಕ್ಲಿಂಗ್‌ನಲ್ಲಿ ಬಾಗಲಕೋಟೆ ಜಿಲ್ಲೆ 17 ಪಾಯಿಂಟ್ ಗಳಿಸಿ ಚಾಂಪಿಯನ್ ಆಯಿತು. 12 ಪಾಯಿಂಟ್‌ಗಳೊಂದಿಗೆ ವಿಜಯಪುರ ಜಿಲ್ಲೆ ರನ್ನರ್ ಅಪ್ ಆದರೆ 7 ಪಾಯಿಂಟ್‌ಗಳೊಂದಿಗೆ ಬೆಳಗಾವಿ ಮೂರನೇ ಸ್ಥಾನ ಗಳಿಸಿತು.

ಫಲಿತಾಂಶಗಳು: ಸೈಕ್ಲಿಂಗ್: 20 ಕಿ.ಮೀ. ಮಾಸ್ ಸ್ಟಾರ್ಟ್: ಬಾಲಕಿಯರು: ದೀಪಿಕಾ ಫಡತಾರ (ವಿಜಯಪುರ, ಕಾಲ: 33 ನಿ. 5.81 ಸೆ.)–1, ಗಾಯತ್ರಿ ಕತ್ತೂರ (ಬಾಗಲಕೋಟೆ)–2, ಕೀರ್ತಿಲ ಚವ್ಹಾನ್ (ವಿಜಯಪುರ)–3. ಬಾಲಕರು: ತರುಣ್ ನಾಯಕ್ (ಬಾಗಲಕೋಟೆ, ಕಾಲ: 29 ನಿ.27.21 ಸೆ.)–1, ಯಲ್ಲೇಶ್ ಹುಡೇದ (ಬೆಳಗಾವಿ)–2, ರುಚಿರ್ ಸಿ. (ಮೈಸೂರು)–3; ವೇಟ್‌ಲಿಫ್ಟಿಂಗ್: ಬಾಲಕರು: 55 ಕೆಜಿ: ಮಾಬೂಸಾಬ ಕಳ್ಳಿಮನಿ (ದಕ್ಷಿಣ ಕನ್ನಡ)–1, ದುರ್ಗಾ ರಾಜ್ (ಶಿವಮೊಗ್ಗ)–2, ಆದರ್ಶ್ ದಯಗೊಂಡ (ಬೆಳಗಾವಿ)–3. 61 ಕೆಜಿ: ರೋಹಿತ್ (ದ.ಕ)–1, ಮೋಹಿತ್ ವಿ (ಬೆಂಗಳೂರು)–2, ಮೊಹಮ್ಮದ್ ಸಿದ್ದಿಕ್–3. 49 ಕೆಜಿ: ಪ್ರೀತಂ ಎಸ್ (ಬೆಳಗಾವಿ)–1, ಶ್ರೇಯಸ್ ಉಚಕೂರ್ (ಶಿವಮೊಗ್ಗ)–2, ಮುತ್ತು ಹನಮಟ್ಟಿ (ಬೆಳಗಾವಿ)–3. 67 ಕೆಜಿ: ರತೀಶ್ ಕೊಣ್ಣಾನ್–1, ಶ್ರೇಯಸ್ ಕುಮಾರ್–2, ರಮೇಶ್ ಯಮನಪ್ಪ–3 (ಮೂವರು ದಕ್ಷಿಣ ಕನ್ನಡ). ಬಾಲಕಿಯರು: 59 ಕೆಜಿ: ಸಮೀಕ್ಷಾ ಮನ್ನೋಳಿ (ಬೆಳಗಾವಿ)–1, ಹಿತೈಷಿನಿ (ಬೆಂಗಳೂರು)–2, ಶ್ರೇಯಾ ಕೆ. (ದ.ಕ)–3; ಈಜು: ಬಾಲಕಿಯರು: 50 ಮೀ. ಫ್ರೀಸ್ಟೈಲ್: ಧೀನಿಧಿ ದೇಸಿಂಗು–1 (ಕಾಲ: 27.71 ಸೆಕೆಂಡು), ರುಜುಲಾ ಎಸ್–2, ಶ್ರೀಚರಣಿ ತುಮು–3. 400 ಮೀ. ಫ್ರೀಸ್ಟೈಲ್: ನೈಶಾ (ಕಾಲ: 4 ನಿ. 53 ಸೆ.)–1, ಶಿಶಾ ಸೋಣಾರ್–2, ಆಸ್ತಾ ಸುಧೀರ್–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ವಿಹಿತಾ ನಯನಾ (ಕಾಲ: 1 ನಿ.19 ಸೆ.)–1, ತನಿಶಾ ಗುಪ್ತಾ–2, ತಾನಿಯಾ ಎಸ್–3. 200 ಮೀ. ಬ್ರೆಸ್ಟ್‌ಸ್ಟ್ರೋಕ್: ನಕ್ಷತ್ರ ಗೌತಮ್ (ಕಾಲ: 33.66 ಸೆ.)–1, ಸಿದ್ಧಿ ಗೌತಮ್–2, ಮೋಣ್ವಾ ಕೌಸುಮಿ–3. 100 ಮೀ. ಬ್ಯಾಕ್‌ಸ್ಟ್ರೋಕ್: ಸಿದ್ಧಿ ಗೌತಮ್ಶಾ (ಕಾಲ: 1ನಿ. 12 ಸೆ.)–1, ನಕ್ಷತ್ರ ಗೌತಮ್–2, ತನ್ಮಯಿ ಧರ್ಮೇಶ್–3. 200 ಮೀ. ಬ್ಯಾಕ್‌ಸ್ಟ್ರೋಕ್: ಧೀನಿಧಿ ದೇಸಿಂಗು (ಕಾಲ: 2ನಿ. 16 ಸೆ.)–1, ಹಷಿಕಾ ರಾಮಚಂದ್ರ–2, ಮೀನಾಕ್ಷಿ ಮೆನನ್–3. 50 ಮೀ. ಬಟರ್‌ಫ್ಲೈ: ಧೀನಿಧಿ ದೇಸಿಂಗು (ಕಾಲ: 29.35ಸೆ.)–1, ಮೋಣ್ವಾ ಕೌಸುಮಿ ಕೆ.–2, ಜನ್ಯಾ ಬಿ.ಎಸ್–3.

ಸಿಂಧು, ಶ್ರೀಕಾಂತ್ ಮುನ್ನಡೆ

ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್: ಸೈನಾಗೆ ಸೋಲು

ಬ್ಯಾಂಕಾಕ್ (ಪಿಟಿಐ): ಥಾಮಸ್ ಕಪ್ ಟೂರ್ನಿಯಲ್ಲಿ ಐತಿಹಾಸಿಕ ವಿಜಯ ಸಾಧಿಸಿದ ಉತ್ಸಾಹದಲ್ಲಿರುವ ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಪಿ.ವಿ. ಸಿಂಧು ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗೆಲುವಿನ ಆರಂಭ ಮಾಡಿದ್ದಾರೆ. ಆದರೆ ಸೈನಾ ನೆಹ್ವಾಲ್ ಮೊದಲ ಸುತ್ತಿನಲ್ಲೇ ಎಡವಿದರು.

ಇಲ್ಲಿ ಎಂಟನೇ ಶ್ರೇಯಾಂಕ ಪಡೆದಿರುವ ಶ್ರೀಕಾಂತ್, ಬುಧವಾರ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಜಿದ್ದಾಜಿದ್ದಿನ ಪಂದ್ಯದಲ್ಲಿ 18–21, 21–10, 21–16ರಿಂದ ಫ್ರಾನ್ಸ್‌ನ ಬ್ರೈಸ್ ಲೆವರ್ಡೆಜ್ ವಿರುದ್ಧ ಗೆದ್ದರು.

ಮುಂದಿನ ಪಂದ್ಯದಲ್ಲಿ ಶ್ರೀಕಾಂತ್ ಅವರಿಗೆ, ಐರ್ಲೆಂಡ್‌ನ ನ್ಹಾಟ್ ಎನ್‌ಗುಯೆನ್ ಸವಾಲು ಎದುರಾಗಿದೆ.

ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಸಿಂಧು 21-19, 19-21, 21-18ರಿಂದ ಅಮೆರಿಕದ ಲಾರೆನ್ ಲ್ಯಾಮ್ ಅವರನ್ನು ಮಣಿಸಿದರು. ಮುಂದಿನ ಸುತ್ತಿನಲ್ಲಿ ಭಾರತದ

ಪಿ.ವಿ.ಸಿಂಧು– ಎಪಿ ಚಿತ್ರ

ಆಟಗಾರ್ತಿ ಕೊರಿಯಾದ ಸಿಮ್ ಯು ಜಿನ್ ಎದುರು ಸೆಣಸಲಿದ್ದಾರೆ.

ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್ ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ 21–17, 15–21, 17–21ರಿಂದ ಕೊರಿಯಾದ ಕಿಮ್ ಗಾ ಯುನ್ ಎದುರು ಪರಾಭವಗೊಂಡರು. ಮೊದಲ ಗೇಮ್ ಸುಲಭವಾಗಿ ಜಯಿಸಿದ ಭಾರತದ ಆಟಗಾರ್ತಿ, ನಂತರದ ಎರಡು ಗೇಮ್‌ಗಳನ್ನು ಕೈಚೆಲ್ಲಿದರು.

ಮಾಳವಿಕಾ ಬನ್ಸೋಡ್ 17-21, 21-15, 21-11ರಿಂದ ಉಕ್ರೇನ್‌ನ ಮರಿಯಾ ಉಲ್ಲಿನಾ ಅವರನ್ನು ಮಣಿಸಿ ಎರಡನೇ ಸುತ್ತು ಪ್ರವೇಶಿಸಿದರೆ, ಆಕರ್ಷಿ ಕಶ್ಯಪ್ 10-21, 15-21ರಿಂದ ಥಾಯ್ಲೆಂಡ್‌ನ ರಚನೊಕ್ ಇಂತನನ್ ವಿರುದ್ಧ ಎಡವಿದರು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಬಿ. ಸುಮೀತ್ ರೆಡ್ಡಿ– ಅಶ್ವಿನಿ ಪೊನ್ನಪ್ಪ ಕೂಡ ಮೊದಲ ಪಂದ್ಯದಲ್ಲೇ ನಿರಾಸೆ ಅನುಭವಿಸಿದರು. ಈ ಜೋಡಿಯು 17-21, 17-21 ಜಪಾನ್‌ನ ಯೂಕಿ ಕನೆಕೊ– ಮಿಸಾಕಿ ಮತ್ಸುಟೊಮೊ ವಿರುದ್ಧ ಮಣಿದರು.

ಬಿ.ಸಾಯಿ ಪ್ರಣೀತ್ ಮತ್ತು ಸೌರಭ್ ವರ್ಮಾ ಕೂಡ ಸಿಂಗಲ್ಸ್ ವಿಭಾಗದ ಪಂದ್ಯಗಳಲ್ಲಿ ಸೋಲು ಕಂಡರು. ಪ್ರಣೀತ್ 12-21, 13-21ರಿಂದ ಥಾಯ್ಲೆಂಡ್‌ನ ಕಾಂತಫೋನ್ ವಾಂಗ್‌ಚರೋನ್ ಎದುರು, ಸೌರಭ್ 20-22, 12-21ರಿಂದ ಫ್ರಾನ್ಸ್‌ನ ತೋಮಾ ಜೂನಿಯರ್ ಪಾಪೊವ್ ಎದುರು ಮಣಿದರು.

ಬ್ಯಾಸ್ಕೆಟ್‌ಬಾಲ್: ಮೈಸೂರಿಗೆ ಜಯ

ಬಾಲಕಿಯರ ಬ್ಯಾಸ್ಕೆಟ್‌ಬಾಲ್ ಮೊದಲ ಸುತ್ತಿನ ಪಂದ್ಯಗಳಲ್ಲಿ ಎಂಸಿಎಚ್‌ಎಸ್‌ಗೆ 78–9ರಿಂದ ಮಲ್ಲಸಜ್ಜನ ಧಾರವಾಡ ವಿರುದ್ಧ, ಕೋರಮಂಗಲ ಎಸ್‌ಸಿಗೆ 29–21ರಿಂದ ಡಿವೈಇಎಸ್ ಮಂಡ್ಯ ಎದುರು, ನ್ಯಾಷನಲ್ ಮೈಸೂರು ತಂಡಕ್ಕೆ 49–17ರಿಂದ ಬೀಗಲ್ಸ್ ಬಿ.ಸಿ. ಎದುರು, ಮೌಂಟ್ ಬಿ.ಸಿ.ಗೆ 51–17ರಿಂದ ಅಪ್ಪಯ್ಯ ಬಿ.ಸಿ. ವಿರುದ್ಧ ಗೆಲುವು. ಬಾಲಕರು: ಎಚ್‌ಪಿಬಿಆರ್ ಬಿ.ಸಿ.ಗೆ 48–07ರಿಂದ ಬೀಗಲ್ಸ್ ಬಿ.ಸಿ. ಎದುರು, ಎಂಎನ್‌ಕೆ ರಾವ್ ತಂಡಕ್ಕೆ 67–30ರಿಂದ ಅಪ್ಪಯ್ಯ ಬಿ.ಸಿ. ಎದುರು, ಜಿಎಸ್‌ಸಿಗೆ 47–39ರಿಂದ ಬೆಂಗಳೂರು ಸ್ಪೋರ್ಟಿಂಗ್ ಎದುರು ಗೆದ್ದಿತು.

ಐರ್ಲೆಂಡ್ ಪ್ರವಾಸ: ಲಕ್ಷ್ಮಣ್ ಕೋಚ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್, ಮುಂದಿನ ತಿಂಗಳು ಐರ್ಲೆಂಡ್ ಪ್ರವಾಸ ಕೈಗೊಳ್ಳುವ ಭಾರತ ತಂಡಕ್ಕೆ ತರಬೇತಿ ನೀಡಲಿದ್ದಾರೆ.

ಜೂನ್ 26 ಮತ್ತು 28ರಂದು ಐರ್ಲೆಂಡ್ ವಿರುದ್ಧ ಭಾರತ ಟ್ವೆಂಟಿ20 ಪಂದ್ಯಗಳನ್ನು ಆಡ ಲಿದೆ. ಇದೇ ಸಂದರ್ಭದಲ್ಲಿ ಭಾರತ ಟೆಸ್ಟ್ ತಂಡ ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಪಂದ್ಯಕ್ಕೆ ಸಜ್ಜಾಗುತ್ತಿರುತ್ತದೆ. ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಆ ತಂಡದ ಜೊತೆ ಇರುವುದರಿಂದ ಐರ್ಲೆಂಡ್‌ಗೆ ತೆರಳುವ ತಂಡದೊಂದಿಗೆ ಲಕ್ಷ್ಮಣ್ ಅವರನ್ನು ಕಳುಹಿಸಲಾಗುತ್ತದೆ.

'ಇಂಗ್ಲೆಂಡ್ ಮತ್ತು ಭಾರತ ನಡುವಿನ ಏಕೈಕ ಟೆಸ್ಟ್ ಪಂದ್ಯ ಜುಲೈ ಒಂದರಂದು ಆರಂಭವಾಗಲಿದೆ. ಇದಕ್ಕೂ ಮೊದಲು ಕೌಂಟಿ ತಂಡದ ಎದುರು ನಾಲ್ಕು ದಿನಗಳ ಅಭ್ಯಾಸ ಪಂದ್ಯ ನಡೆಯಲಿದೆ. ಈ ಪಂದ್ಯ ಜೂನ್ 24ರಂದು ಆರಂಭವಾಗಲಿದೆ.

'ರಾಹುಲ್ ದ್ರಾವಿಡ್ ಟೆಸ್ಟ್ ತಂಡದ ಜೊತೆ ಇಂಗ್ಲೆಂಡ್‌ನಲ್ಲಿರುವುದರಿಂದ ಐರ್ಲೆಂಡ್ ಪ್ರವಾಸಕ್ಕೆ ತೆರಳುವ ತಂಡಕ್ಕೆ ಲಕ್ಷ್ಮಣ್ ಅವರು ಕೋಚಿಂಗ್ ಮಾಡುವುದು ಬಹುತೇಕ ಖಚಿತವಾಗಿದೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತಿಳಿಸಿದೆ.

ಕಳೆದ ಬಾರಿ ರವಿಶಾಸ್ತ್ರಿ ಮುಖ್ಯ ಕೋಚ್ ಆಗಿದ್ದಾಗ ಎನ್‌ಸಿಎ ಮುಖ್ಯಸ್ಥರಾಗಿದ್ದ ರಾಹುಲ್ ದ್ರಾವಿಡ್ ಅವರನ್ನು ಶ್ರೀಲಂಕಾ ಪ್ರವಾಸಕ್ಕೆ ತೆರಳಿದ ತಂಡದೊಂದಿಗೆ ಕಳುಹಿಸಲಾಗಿತ್ತು. ರವಿಶಾಸ್ತ್ರಿ ಅವರು ಟೆಸ್ಟ್ ತಂಡದೊಂದಿಗೆ ಇಂಗ್ಲೆಂಡ್‌ನಲ್ಲಿದ್ದರು. ಶ್ರೀಲಂಕಾದಲ್ಲಿ ತಂಡ ನಿಗದಿತ ಓವರ್‌ಗಳ ಪಂದ್ಯಗಳನ್ನು ಆಡಿತ್ತು.

ಫೈನಲ್‌ಗೆ ಭಾರತ ಆರ್ಚರಿ ತಂಡ

ಗ್ವಾಂಗ್ಜು, ದಕ್ಷಿಣ ಕೊರಿಯಾ (ಎಎಫ್‌ಪಿ): ಬಲಿಷ್ಠ ತಂಡಗಳನ್ನು ಮಣಿಸಿದ ಭಾರತದ ಆರ್ಚರ್‌ಗಳು ವಿಶ್ವಕಪ್ ಎರಡನೇ ಹಂತದ ಟೂರ್ನಿಯಲ್ಲಿ ಚಿನ್ನದ ಪದಕದತ್ತ ಹೆಜ್ಜೆ ಹಾಕಿದ್ದಾರೆ.

ಬುಧವಾರ ಕ್ವಾರ್ಟರ್ ಫೈನಲ್‌ನಲ್ಲಿ ಅಮೆರಿಕವನ್ನು ಮತ್ತು ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾವನ್ನು ಸೋಲಿಸಿದ ಪುರುಷರ ಕಾಂಪೌಂಡ್ ವಿಭಾಗದ ತಂಡ ಫೈನಲ್ ಪ್ರವೇಶಿಸಿತು.

ಅಭಿಷೇಕ್ ವರ್ಮಾ, ಅಮನ್ ಸೈನಿ ಮತ್ತು ರಜತ್ ಚೌಹಾಣ್ ಅವರನ್ನು ಒಳಗೊಂಡ ತಂಡ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಫ್ರಾನ್ಸ್ ವಿರುದ್ಧ ಸೆಣಸಲಿದೆ. ಮಹಿಳೆಯರ ತಂಡ ಕಂಚಿನ ಪದಕ ಗಳಿಸಿತು.